ಕೊಡಗು ಸಂಗಾತಿ


ಪಾಕ್ಷಿಕ ಪತ್ರಿಕೆ

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R. N. N. 240 ಸಂಪುಟ : 3 ಸಂಚಿಕೆ : 11 ಜೂನ್ 1 ರಿಂದ 15, 1999. ಪುಟಗಳು : 24 ಬೆಲೆ ರೂ. : 5-00



[ಲೇಖನ ಒಳಪುಟಗಳಲ್ಲಿ]

ಅರೆಭಾಷಿಕರ ಮೊದಲ ಸಾಗರ ವಿಜ್ಞಾನಿ
"ಶ್ರೀ ನಿಡ್ಯಮಲೆ ಅಪ್ಪಯ್ಯ ಮಾಧವ"



ಜೀವಾವಧಿ ಸದಸ್ಯತನ ಕೊಟ್ಟೊಳೊ

ಕು|| ಅಚ್ಚಾಂಡಿರ ನವೀನಕುಮಾರಿ, ನಂಜನಗೂಡು

ಇವು ಪತ್ರಿಕೆಯ ಅಭಿವೃದ್ಧಿ ದೃಷ್ಟಿಯಿಂದ ಜೀವಾವಧಿ ಸದಸ್ಯತನ ಕೊಟ್ಟ್ ಸಹಕರಿಸೊಳೋ. ಇವ್ಕೆ ಕುಲಗುರು ವೆಂಕಟರಮಣನ ಕೃಪಾಕಟಾಕ್ಷ ಇರಲಿತ್ತೇಳಿ ಸಂಗಾತಿ ಹಾರೈಸಿದೆ.

– ಸಂಪಾದಕಿ

ಸೂಚನೆ

ಕೊಡಗು ಸಂಗಾತಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಪ್ರತಿಯೊಂದು ಲೇಖನಗಳಿಗೆ ಬರೆದ ಲೇಖಕರೇ ಹೊಣೆಗಾರರು ಮತ್ತು ಜವಬ್ದಾರರೂ ಆಗಿರುತ್ತಾರೆ. ಯಾವುದೇ ರೀತಿಯ ಟೀಕೆ ಟಿಪ್ಪಣಿಗಳಿಗೆ ಲೇಖಕರೆ ಹೊಣೆಗಾರರು ಸಂಗಾತಿ ಪತ್ರಿಕೆಯು ಇದಕ್ಕೆ ಹೊಣೆಯಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

– ಸಂಪಾದಕಿ

ಚಂದದಾರರಲ್ಲಿ ವಿನಂತಿ

ಕೊಡಗು ಸಂಗಾತಿ ಪತ್ರಿಕೆಯನ್ನು ನಿಯತ್ತಾಗಿ ಚಂದದಾರರಿಗೆ ಕಳುಹಿಸುತ್ತಿದ್ದೇವೆ. ಹಲವಾರು ಚಂದದಾರರು ಇನ್ನೂ ನವೀಕರಿಸಿಕೊಂಡಿರುವುದಿಲ್ಲ. ಸಾಕಷ್ಟು ಸರ್ತಿ ಜ್ಞಾಪನ ಪತ್ರ ಕಳುಹಿಸಲಾಗಿದೆ. ಪ್ರತಿಯೊಬ್ಬ ಚಂದದಾರರ ವಿಳಾಸಕ್ಕೆ ತೆರಳಿ ಹಣ ವಸೂಲಾತಿ ಮಾಡುವುದು ಆಗದ ಕೆಲಸ. ಖರ್ಚು ವಿಪರೀತವಾಗುತ್ತದೆ. ನಾವು ಪುಸ್ತಕ ಕಳುಹಿಸುತ್ತಿರುವುದು ಮೈಸೂರಿನಿಂದ. ನಮ್ಮ ಕಷ್ಟವನ್ನು ಓದುಗರು ಚಂದದಾರರು ಅರಿತುಕೊಂಡು ಮನಿ ಆರ್ಡರ್, ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕಳುಹಿಸುವ ಕೃಪೆ ದಯವಿಟ್ಟು ಮಾಡಬೇಕು. ಇಲ್ಲದಿದ್ದರೆ ಇರುವ ಏಕೈಕ ಪತ್ರಿಕೆಯನ್ನು ನಡೆಸಿಕೊಂಡು ಹೋಗುವುದು ಸಂಗಾತಿಗೆ ಬಹು ಕಷ್ಟಕರವಾದೀತು. ಓದುಗರು ಈ ಬಗ್ಗೆ ಚಿಂತಿಸಬೇಕೆಂದು ನಮ್ಮ ಪ್ರಾರ್ಥನೆ.

– ಸಂಪಾದಕಿ

ದೊರೆಯುತ್ತದೆ

"ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆಯು ಮಡಿಕೇರಿಯ ಈ ಕೆಳಗಿನ ಅಂಗಡಿಗಳಲ್ಲಿ ದೊರೆಯುತ್ತದೆ.

1. ಪಾಂಡ್ಯನ್ ಕ್ಯಾಸೆಟ್ಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ.
2. ನೀಲಕಂಠೇಶ್ವರ ಬುಕ್ ಸ್ಟಾಲ್, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ.
3. ಸರಸ್ವತಿ ಬುಕ್ ಸ್ಟಾಲ್, ಸರ್ಕಾರಿ ಬಸ್ ನಿಲ್ದಾಣ, ಮಡಿಕೇರಿ

– ಸಂಪಾದಕಿ

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಜಯಲಕ್ಷ್ಮಿಪುರಂ, ಮೈಸೂರು - 570 012.
ಫೋನ್ : 0821/516771


ಸಂಪರ್ಕಿಸುವ ವಿಳಾಸ

ಮಣಿ ನಂಗಾರ್
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ - 571 201
ದೂರವಾಣಿ : 08272/29372

ಬೈತಡ್ಕ ಜಾನಕಿ ಬೆಳ್ಯಪ್ಪ
ನಂ. 21-16 ಎಲ್. ಐ. ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

ಕುಂಭಗೌಡನ ಸೋಮಣ್ಣ
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ - 571 234

ಅಮ್ಮಾಜೀರ ಪೊನ್ನಪ್ಪ / ಕಲ್ಲುಮುಟ್ಲು ಬಸಪ್ಪ
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು - 04
ದೂರವಾಣಿ - 080/6549669



ಅರೆಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	-	**5 ರೂ.**
ಅರ್ಧ ವಾರ್ಷಿಕ	-	**60 ರೂ.**
ವಾರ್ಷಿಕ ಚಂದಾ	-	**120 ರೂ.**

ಸಂಪಾದಕೀಯ

ಗ್ರಾಮಾಭಿವೃದ್ಧಿ

1952ನೇ ಇಸವಿಯಲ್ಲಿ ರಾಷ್ಟ್ರೀಯ ವಿಸ್ತರಣ ಸೇವೆ ಮತ್ತು ಸಾಮಾಜಿಕ (ಕಮ್ಯೂನಿಟಿ) ಅಭಿವೃದ್ಧಿ ಯೋಜನೆಗಳನ್ನು ಭಾರತ ಸರ್ಕಾರದ ಮುಖಾಂತರ ಅಳವಡಿಸಿ ಪ್ರತಿ ಒಂದು ವರ್ಗದ ಗ್ರಾಮದ ಪಂಚಾಯಿತಿಯ ಪರಿಮಿತಿಗೆ ಒಬ್ಬ ಗ್ರಾಮ ಸೇವಕ ಮತ್ತು ಮಕ್ಕಳ ಮತ್ತು ಮಹಿಳೆಯರ ಕಾರ್ಯಕ್ರಮಗಳಿಗಾಗಿ ಒಬ್ಬ ಗ್ರಾಮ ಸೇವಕಿ ಇದ್ದು ಮಕ್ಕಳ ಹಾಗೂ ಮಹಿಳೆಯರ ಅಭಿವೃದ್ಧಿಯ ಬಗ್ಗೆ ಚಿಂತಿಸಲು ತಕ್ಕ ತರಬೇತಿಯನ್ನು ಕೊಡಲು ಏರ್ಪಾಡು ಮಾಡುತ್ತಿದ್ದರು. ಗ್ರಾಮ ಸೇವಕರು ವ್ಯವಸಾಯದ ವಿಷಯದಲ್ಲಿ ಗ್ರಾಮ ರಸ್ತೆಗಳ ವಿಷಯದಲ್ಲಿ, ಗ್ರಾಮದ ಒಗ್ಗಟ್ಟಿನ ವಿಷಯದಲ್ಲಿ ಗ್ರಾಮ ನೈರ್ಮಲ್ಯದ ವಿಷಯಗಳಲ್ಲಿ ಗ್ರಾಮ ಸಭೆಗಳನ್ನು ಏರ್ಪಡಿಸಿ ಯುವಕರ ಅಭಿವೃದ್ಧಿಗೂ ಯುವಕ ಸಂಘಗಳನ್ನು ಸ್ಥಾಪಿಸಿ ಅದರ ಮುಖಾಂತರ ಆಟೋಟಗಳ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಾಮಾಂತರ ಯುವಕರ ಪುರೋಭಿವೃದ್ಧಿಗೆ ತಕ್ಕ ಪ್ರೋತ್ಸಾಹವನ್ನು ನೀಡುತ್ತಿದ್ದರು.

ಗ್ರಾಮದ ಶಾಲೆ, ಗ್ರಾಮ ಪಂಚಾಯಿತಿ ಹಾಗೂ ಕ್ಷೇತ್ರಾಭಿವೃದ್ಧಿ ಸಿಬ್ಬಂದಿಗಳು ಒಂದು ಹಗ್ಗದ ಮೂರು ಹುರಿಗಳಂತೆ ಮುಪ್ಪುರಿಗೊಂಡು ಗ್ರಾಮದ ಜನರ ಚೇತನಕ್ಕೆ ಕಾರಣ ಕರ್ತರಾಗಿದ್ದರು. ಪ್ರತೀ ಗ್ರಾಮಗಳಲ್ಲಿ ಮಹಿಳಾ ಸಮಾಜಗಳನ್ನು ಸ್ಥಾಪಿಸಿ ಮಹಿಳಾ ಶಿಬಿರಗಳನ್ನು ನಡೆಸಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ವಿಚಾರದಲ್ಲಿ ಮನೆಯಲ್ಲಿ ನೂತನ ರೀತಿಯ ಹೊಗೆ ರಹಿತ ಒಲೆಗಳನ್ನು ಅಳವಡಿಸುವ ವಿಧಾನಗಳನ್ನು ತೋರಿಸಿಕೊಟ್ಟು, ಅವುಗಳನ್ನೂ ಅಳವಡಿಸುವುದಕ್ಕೂ ಸಹಾಯಧನವನ್ನು, ಅಭಿವೃದ್ಧಿ ಕ್ಷೇತ್ರವು ನೀಡುತ್ತಿತ್ತು. ಗ್ರಾಮ ಸೇವಕರು ಕ್ಷೇತ್ರದ ವ್ಯವಸಾಯ ವಿಸ್ತರಣಾಧಿಕಾರಿಯ ಸಹಾಯದಿಂದ ಉತ್ತಮ ಬೀಜ, ರಸಗೊಬ್ಬರ ಅಭಿವೃದ್ಧಿ ಹೊಂದಿದ ಬೀಜ ಹಾಗೂ ಗಿಡಗಳನ್ನು ಪ್ರಗತಿ ಶೀಲ ರೈತರಿಗೆ ವಿತರಿಸಿ ಹಸುರೆಲೆ ಗೊಬ್ಬರವನ್ನು ತಯಾರಿಸುವ ಕ್ರಮ ಬಿತ್ತುವ ಬೀಜಗಳಿಗೆ ಸೂಕ್ತ ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸುವ ಕ್ರಮಗಳನ್ನು ಸ್ಥಳದಲ್ಲಿಯೇ ಪ್ರಯೋಗ ಮಾಡಿ ತೋರಿಸಿ ಗ್ರಾಮೀಣ ಜನರನ್ನು ಸುಧಾರಿತ ರೀತಿಯ ವ್ಯವಸಾಯದ ಕಡೆ ವಾಲುವಂತೆ ಮಾಡಿದ್ದರು. ಶತಮಾನಗಳಿಂದ ಆಚರಿಸುತ್ತಿದ್ದ ಪದ್ಧತಿಗಳನ್ನು ಬದಿಗೊತ್ತಿ ನಿದ್ರಿಸುತ್ತಿದ್ದ ಗ್ರಾಮೀಣ ಜನತೆಯನ್ನು ಬಡಿದೆಬ್ಬಿಸಿತು. ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಗಳಿಂದ ಜನರಲ್ಲಿ ಗ್ರಾಮಾಭಿವೃದ್ಧಿಯ ಹಾಗೂ ಸಹ ಬಾಳ್ವೆಯ ಹೊಸ ಕಿರಣ ಮೂಡಿತ್ತು. ಸಮಾಜ ಶಿಕ್ಷಣದಲ್ಲೂ ಸಾಕಷ್ಟು ಅಭಿವೃದ್ಧಿ ಸಾಧಿಸಲಾಗಿತ್ತು. ಸಮಾಜ ಶಿಕ್ಷಣದ ಮುಖಾಂತರ ಮೂಲೆ ಗುಂಪಾಗಿದ್ದ ಜಾನಪದ ಸಂಗೀತ ಜಾನಪದ ನೃತ್ಯಗಳಿಗೆ ಹೊಸ ಚೇತನ ಬಂದು ಮೂಲೆ ಗುಂಪಾಗಿ ನಶಿಸಿ ಹೋದ ತಲೆಗಳಾಗಿ ಜೀವ ದಾನ ಕೊಟ್ಟಿತು. ಹಿಂದೆ ಇದ್ದ ಕ್ಷೇತ್ರಾಭಿವೃದ್ಧಿ ಮಂಡಳಿಗಳ ಬದಲಾಗಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳು ರೂಪಗೊಂಡರೂ 1952 ರಿಂದ 1964ರವರೆಗೆ ಇದ್ದ ಕ್ಷೇತ್ರಾಭಿವೃದ್ಧಿ ಸಂಸ್ಥೆಗಳು ಕೈಗೊಂಡ ಕೆಲಸಗಳು ಅರ್ಧದಲ್ಲೇ ನಿಂತು ಹಿಂದೆ ಇದ್ದ ಕ್ಷೇತ್ರಾಭಿವೃದ್ಧಿ ಸಿಬ್ಬಂದಿಗಳು ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ನಿರ್ವಹಿಸುತ್ತಿದ್ದ ಕಾರ್ಯಗಳು ಸ್ಥಗಿತಗೊಂಡು ಅಧಿಕಾರ ವಿಕೇಂದ್ರದ ಬದಲು ಅಧಿಕಾರ ಕೇಂದ್ರಿಕೃತ ಇಲಾಖೆಯ ಸಿಬ್ಬಂದಿಗಳಿಂದ ಈ ಹಿಂದೆ ಹೇಳಿದ ರೀತಿಯ ಕೆಲಸ ಕಾರ್ಯಗಳು ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವುದು ಕಂಡು ಬಂದಿಲ್ಲ. ಇದರಿಂದಾಗಿ 1952 ರಿಂದ 1964ರವರೆಗೆ ಕ್ಷೇತ್ರಾಭಿವೃದ್ಧಿ ಸಂಸ್ಥೆಗಳು ನಡೆಸುತ್ತಿದ್ದ ಕೆಲಸ ಕಾರ್ಯಗಳನ್ನು ಗ್ರಾಮದ ಜನರು ಒಗ್ಗಟ್ಟಿಗೆ ನಡೆಸುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಪ್ರತಿ ಗ್ರಾಮದಲ್ಲಿ ಸ್ವಯಂ ಪ್ರೇರಿತ ಗ್ರಾಮೀಣ ಅಭಿವೃದ್ಧಿ ಸಂಘಗಳ ಸ್ಥಾಪನೆಯಾಗಬೇಕು. ಈ ಸಂಘಗಳು ಗ್ರಾಮೀಣ ಜನರ ಸಾಮಾನ್ಯ ಸಮಸ್ಯೆಗಳನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ತಿಳಿಸಿ ಅವುಗಳು ಅಂತಹ ಕೆಲಸ ಕಾರ್ಯಗಳನ್ನು ಜಾಗ್ರತೆಯಾಗಿ ಅನುಷ್ಠಾನಗೊಳಿಸುವ ಮಾರ್ಗವನ್ನು ಕಂಡು ಹಿಡಿಯಬೇಕು. ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳು ಹತ್ತು ಹಲವು ಯೋಜನೆಗಳನ್ನು ದಿಲ್ಲಿಯಲ್ಲಿಯೇ ಅಥವಾ ಬೆಂಗಳೂರಿನ ವಿಧಾನ ಸೌಧದಲ್ಲಿ ಕುಳಿತಿದ್ದರೆ ಅವರ ಯೋಜನೆಗಳು ಸಾಮಾನ್ಯ ಜನರಿಗೆ ಲಭಿಸುವಂತೆ ಗ್ರಾಮ ಸಂಘಗಳ ಸ್ಥಾಪನೆಯ ಮೂಲಕ ಹಾಗೂ ನಿಸ್ವಾರ್ಥಿ ಗ್ರಾಮೀಣ ವಿದ್ಯಾವಂತ ಮುಂದಾಳುಗಳ ಮುಖಾಂತರ ಸಾಧಿಸಿದರೆ ಮಾತ್ರ ಮಹಾತ್ಮ ಗಾಂಧೀಜಿಯವರು ಹೇಳಿಕೊಳ್ಳುತ್ತಿದ್ದ ರಾಮರಾಜ್ಯ ಸ್ಥಾಪನೆಯಾದೀತು ಇಲ್ಲದಿದ್ದರೆ ಇವುಗಳೆಲ್ಲ ಬರೇ ಪುಸ್ತಕದ ಬದನೆಕಾಯಿಯಾದೀತು ಎಂದು ಸಂಗಾತಿಯ ಅನಿಸಿಕೆ.

ಒಂದು ದಿನ
ಕನ್ನಡ ನಾಡಿನ ಪ್ರಕೃತಿ
ಸೌಂದರ್ಯವನ್ನು ಸವಿಯ
ಬೇಕೆಂದುಕೊಂಡೆನು
ಒಂದು ದಿನ
ಕೊಡಗಿನ ಸರಿ ಸಂಪತ್ತನ್ನು
ಸಂಪೂರ್ಣವಾಗಿ ತನ್ನದಾಗಿಸಿ
ಕೊಳ್ಳಬೇಕೆಂದುಕೊಂಡೆನು
ಒಂದು ದಿನ
ಕಡಲ, ಕಡಲ ತೀರದ
ಸಂಪತ್ತನ್ನು ಸಂಪೂರ್ಣವಾಗಿ
ಲೂಟಿ ಮಾಡಬೇಕೆಂದುಕೊಂಡೆನು
ಒಂದು ದಿನ
ಕೊನೆಗೂ ತನ್ನ ಇಚ್ಛೆಯನ್ನು
ಛಲದಿಂದ ಪೂರೈಸಿದೆನು
ಕನಸಿನಲಿ
ಒಂದು ದಿನ

ಗೌಡ ಮಹಿಳಾ ಒಕ್ಕೂಟ ಮಡಿಕೇರಿ (ರಿ.) ಕೊಡಗು

ನಡೆದು ಬಂದ ದಾರಿ - ಪಕ್ಷಿನೋಟ

ಕೊಡಗಿನ ಮಹಿಳಾ ಸಂಘಟನೆಗಳ ಪೈಕಿ ಪ್ರಮುಖವಾಗಿ ಮಹಿಳಾ ಸಮಾಜಗಳೇ ಹೆಚ್ಚು. ಈ ಮಹಿಳಾ ಸಮಾಜಗಳು ಬಹುಶಃ ಪ್ರತಿಯೊಂದು ಗ್ರಾಮಗಳಲ್ಲಿದ್ದು ಮಹಿಳೆಯರಿಗೆ ಸೀಮಿತವಾಗಿ ದುಡಿಯಲು ಅವಕಾಶವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ಪಾತ್ರ ಎಲ್ಲಾ ಕ್ಷೇತ್ರಗಳಲ್ಲಿಯೂ, ಪುರುಷ ಸಮಾನವಾಗಿದ್ದು ಸಮಾಜದ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸುತ್ತಿರುವುದು ಉತ್ತಮ ಬೆಳವಣಿಗೆ. ಇವರುಗಳ ಕಾರ್ಯ ಚಟುವಟಿಕೆಯಲ್ಲಿನ ಆಸಕ್ತಿ ಎಷ್ಟರಮಟ್ಟಿಗೆ ಇದೆಯೆಂದರೆ ತಮ್ಮೊಳಗೆ ಸ್ಥಾನಗಳಿಕೆಯ ಹೊಂದಾಣಿಕೆಗೆ ಅವಕಾಶವಿಲ್ಲದಂತಾಗಿದೆ. ಪರಿಣಾಮವಾಗಿ ಎಷ್ಟೋ ಮಹಿಳೆಯರು ಸಮಾಜಸೇವೆಯಿಂದ ವಂಚಿರಾಗಿರುತ್ತಾರೆ. ಬಹುಶಃ ಇದೇ ಒಂದು ನೆಪವಾಗಿ ಮಹಿಳಾ ಸಹಕಾರ ಬ್ಯಾಂಕಿನಲ್ಲಿ ಒಂದು ಕೋಮಿನ ಮಹಿಳೆಯರಿಗೆ ಸಕ್ರಿಯವಾಗಿ ಪಾಲ್ಗೊಳ್ಳಲು ಯಾವೊಂದು ಸ್ಥಾನಮಾನ ದೊರಕದೆ ಇದ್ದುದು. ಇದು ಜನಾಂಗದ ಮಹಿಳೆಯರಿಗೆ ಆದ ಅಪಮಾನವೆನ್ನಬೇಕು.

ಈ ಘಟನೆಯನ್ನು ಸಹಪಾಠಿ ಹಿತೈಷಿಗಳೊಡನೆ ಪ್ರಸ್ತಾಪ ಹಂಚಿಕೊಂಡಾಗ ಸ್ವಾಭಿಮಾನದ ಕಟ್ಟೆಯೊಡೆದು ಸಮಾಲೋಚನೆಯೊಂದಿಗೆ ನಾವೇ ಒಂದು ಪ್ರತ್ಯೇಕ ಸಂಘವನ್ನು ಏಕೆ ಸ್ಥಾಪಿಸಬಾರದೆಂಬ ಪ್ರಶ್ನೆಯು ಮೂಡಿದ್ದೇ 12 ಮಂದಿ ಉತ್ಸಾಹಿ ಮಹಿಳೆಯರಾದ 1. ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣ, 2. ಶ್ರೀಮತಿ ಚೀಯಂಡಿರ ರಾಧ ಯಾದವ, 3. ಶ್ರೀಮತಿ ಸೂದನ ಕಮಲ ರಾಘುವಯ್ಯ, 4. ಕುಮಾರಿ ನೀರ್ಪಾಡಿ ನಾಗವೇಣಿ, 5. ಶ್ರೀಮತಿ ಬೈತಡ್ಕ ಜಾನಕಿ ಬೆಳ್ಳಪ್ಪ, 6. ಶ್ರೀಮತಿ ಪರಿವಾರ ತಂಗಮ್ಮ ಸೋಮಣ್ಣ, 7. ಪಂಜೆಪಳ್ಳ ಇಂದ್ರಾಕ್ಷಿ ವೆಂಕಪ್ಪ, 8. ಶ್ರೀಮತಿ ಕುಂಬುಗೌಡನ ರಾಣಿ ಪ್ರಭಾಕರ, 9. ಶ್ರೀಮತಿ ಪೊನ್ನಚ್ಚನ ಲಲಿತಸೋಮಣ್ಣ, 10. ನಾಟೋಳನ ದೇವಮ್ಮ ಮೊಣ್ಣಪ್ಪ, 11. ಶ್ರೀಮತಿ ದಂಬೆಕೋಡಿ ಲೀಲಾ ಚಿಣ್ಣಪ್ಪ, 12. ಕಾಳೇರಮ್ಮನ ಸರಸ್ವತಿ ರಾಘುವಯ್ಯ. ಇವರುಗಳ ಕೂಟದ ಅಸ್ತಿತ್ವವೇ ಒಕ್ಕೂಟದ ರಚನೆ. ಇವರು ಹಿಂದಿನ ವರ್ಷಗಳಲ್ಲಿ ಜನಾಂಗದ ಹಿರಿಯ ವ್ಯಕ್ತಿಗಳು ನೀಡಿದ ಸಲಹೆಗಳನ್ನು ನೆನಪಿಸುತ್ತಾ, ಅದಕ್ಕೆ ಚಾಲನೆ ನೀಡುವುದರೊಂದಿಗೆ ಗೌಡ ಜನಾಂಗದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಜಿಲ್ಲೆಗೆ ಸೀಮಿತವಾದ "ಕೊಡಗು ಗೌಡ ಮಹಿಳಾ ಒಕ್ಕೂಟ" ಎಂಬ ನಾಮ ಫಲಕದಿಂದ ಸ್ಥಾಪಿಸಲು ನಿರ್ಧರಿಸಿಯೇ ಬಿಟ್ಟರು. ಇದು ನಿಜವಾಗಿ ಗೌಡ ಜನಾಂಗಕ್ಕೆ ಮಹಿಳಾ ಸಮೂಹಕ್ಕೆ ಹೆಮ್ಮೆಯ ವಿಚಾರವಲ್ಲದೆ ಮತ್ತೇನು? ಈ ಸಂದರ್ಭದಲ್ಲಿ ಸಮಾಜದ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ದೊರಕಿಸಲು ಹೋರಾಟ ನಡೆಸಿ, ಪ್ರತಿಯೊಬ್ಬ ಮಹಿಳೆಗೂ ಹಲವು ರೀತಿಯಲ್ಲಿ ಭಾಗವಹಿಸಲು ಮತ್ತು ತಮ್ಮನ್ನು ತೊಡಗಿಸಿಕೊಳ್ಳಲು ಹಾಗೂ ತಮ್ಮೊಳಗೆ ಹುದುಗಿರುವ ಪ್ರತಿಭೆಗಳನ್ನು ಗುರುತಿಸಿ ಪ್ರದರ್ಶಿಸಲೂ, ಅಲ್ಲದೆ ಪುಟ್ಟ ಮಕ್ಕಳಿಂದ ಹಿಡಿದು ಮುದುಕಿಯರವರೆಗೆ ನಾವೆಲ್ಲರೂ ಒಂದೇ "ನಾವು ಮತ್ತು ನಮ್ಮವರು" ಎಂಬ ಬೆಸುಗೆಗೆ ನಾಂದಿ ಹಾಡಿ, ಈ ದಿನ ಕೊಡಗಿನ ಇತಿಹಾಸದಲ್ಲೆ ಪ್ರಪ್ರಥಮ ಬಾರಿಗೆ ಈ ಸುಂದರ ಸಭಾಂಗಣದಲ್ಲಿ ತಾವೆಲ್ಲರೂ ಸಂತೋಷದಿಂದ ಆಸೀನರಾಗಿರುವುದಕ್ಕೆ ಕಾರಣಕರ್ತರಾದ ಮುಂಚೂಣಿಯ, ಸ್ಥಾಪಕ ಮಹಿಳಾ ಮಣಿಗಳು ಸರ್ವರೀತಿಯಲ್ಲೂ ಯೋಗ್ಯರಾಗಿದ್ದು ಅಭಿನಂದನಾರ್ಹರಲ್ಲವೆ? ಹೌದೆಂದು ಎಲ್ಲರೂ ಒಪ್ಪಲೇ ಬೇಕಾದ ವಿಷಯ. ಇದು ಹಾಗಿರಲಿ ಇವರುಗಳೆಲ್ಲಾ ಒಗ್ಗೂಡಿ ನಡೆಸಿದ ಕಾರ್ಯಕಲಾಪಗಳ ಬಗ್ಗೆ ಕಣ್ಣು ಹಾಯಿಸೋಣವೆ?

ದಿನಾಂಕ 3-11-1997ರಂದು ನಡೆದ ಪ್ರಥಮ ಸ್ಥಾಪಕ ಮಹಿಳಾ ಉತ್ತೇಜಕ ಸಭೆಯಲ್ಲಿ ಶ್ರೀಮತಿ ಚೀಯಂಡೀರ ರಾಧ ಯಾದವ್ ಅಧ್ಯಕ್ಷೆಯಾಗಿ, ಕುಮಾರಿ ನೀರ್ಪಾಡಿ ನಾಗವೇಣಿ ಉಪಾಧ್ಯಕ್ಷೆಯರಾಗಿ, ಶ್ರೀಮತಿ ಕೂಡಕಂಡೀರ ಕಾವೇರಮ್ಮ ಸೋಮಣ್ಣ ಮಹಾ ಕಾರ್ಯದರ್ಶಿಯಾಗಿ, ಶ್ರೀಮತಿ ಕಾಳೇರಮ್ಮನ ಸರಸ್ವತಿ ರಾಘುವಯ್ಯ ಕಾರ್ಯದರ್ಶಿಯಾಗಿ, ಶ್ರೀಮತಿ ಸೂದನ ಕಮಲಮ್ಮ ರಾಘುವಯ್ಯ ಖಜಾಂಚಿಯಾಗಿ, ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಮತ್ತು ಪರಿವಾರ ತಂಗಮ್ಮ ಸೋಮಣ್ಣ ಸಂಘಟನಾ ಕಾರ್ಯದರ್ಶಿಗಳಾಗಿ ಹಾಗೂ ಶ್ರೀಮತಿ ದಂಬೆಕೋಡಿ ಲೀಲಾ ಚಿಣ್ಣಪ್ಪ, ಶ್ರೀಮತಿ ಪಂಜೇಪಳ್ಳ ಇಂದ್ರಾಕ್ಷಿ ವೆಂಕಪ್ಪ, ಶ್ರೀಮತಿ ಕುಂಬುಗೌಡನ ರಾಣಿ ಪ್ರಭಾಕರ್, ಶ್ರೀಮತಿ ನಾಟೋಳನ ದೇವಮ್ಮ ಮೊಣ್ಣಪ್ಪ, ಶ್ರೀಮತಿ ಪೊನ್ನಪ್ಪನ ಲಲಿತಾ ಸೋಮಣ್ಣ ಇವರುಗಳು ಆಯ್ಕೆ ಆದರು. ಸೂಚನೆ ಮತ್ತು ಸಲಹೆಗಾರರಾಗಿ ಕು. ತೆಕ್ಕಡೆ ಶರೀನ್ ಗಣಪತಿಯರು ಕಾನೂನು ಸಲಹೆಗಾರರಾಗಿ ಆಯ್ಕೆಗೊಂಡರು.

ಈ ಸಂದರ್ಭದಲ್ಲಿ ಗೌಡ ಮಹಿಳೆಯರ ಸಂಘಟನೆ, ಬೆಳವಣಿಗೆ ಮತ್ತು ಕ್ಷೇಮಾಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿ, ಜನಾಂಗದ ಪ್ರತಿಯೊಬ್ಬ ಅರ್ಹ ಮಹಿಳೆಯನ್ನೂ ಸದಸ್ಯತನ ಪಡೆಯುವ ಪ್ರಾಮಾಣಿಕ ಪ್ರಯತ್ನಕ್ಕೆ ಪಣತೊಟ್ಟು ಜಿಲ್ಲೆಯಾದ್ಯಂತ ಗ್ರಾಮಗಳಲ್ಲಿನ ಜನಾಂಗದ ಮನೆಮನೆಗೆ ಭೇಟಿ ನೀಡಲು ನಿರ್ಣಯಿಸಲಾಯಿತು. ಮೊದಲಿಗೆ ದಿನಾಂಕ 18-11-1997ರಂದು ಮಡಿಕೇರಿಯ ದೇಚೂರಿನ ಗೌಡರ ಮನೆಗಳಿಗೆ ಭೇಟಿ, ಒಂದೇ ದಿನದಲ್ಲಿ ಒಟ್ಟು 31 ಸದಸ್ಯತನ ಪಡೆದು ಸಾಹಸದ ದಾಖಲೆ ಮಾಡಿದರು. ನವೆಂಬರ್ ತಿಂಗಳ 19, 21, 24ರಂದು ಕ್ರಮವಾಗಿ ಮಡಿಕೇರಿಯ ಕಾಲೇಜು ಹಿಂಭಾಗ, ಬ್ರಾಹ್ಮಣರ ಬೀದಿಗಳಿಗೆ ಭೇಟಿ ನೀಡಿ, 22 ಸದಸ್ಯರನ್ನು ನೋಂದಾಯಿಸಲಾಯಿತು. ಮತ್ತು ದಿನಾಂಕ 25, 26, 27ರಂದು ಮಡಿಕೇರಿಯ ಹೌಸಿಂಗ್ ಬೋರ್ಡ್ ಕನ್ನಂಡಬಾಣೆ, ಚೈನುಗೇಟು, ಸುದರ್ಶನ ವೃತ್ತ, ಸುದರ್ಶನ ಬಡಾವಣೆ, ಗೌಳಿಬೀದಿ ಹೊಸ ಬಡಾವಣೆ, ರಿಮಾಂಡ್ ಹೋಂಗಳಲ್ಲಿನ ಮನೆಗಳಿಗೆ ಭೇಟಿ ನೀಡಿ ಸದಸ್ಯತನ ಪಡೆಯಲಾಯಿತು. 1997ರ ಡಿಸೆಂಬರ್ ತಿಂಗಳ 9, 10, 13, 15 ಮತ್ತು 25 ರಂದು ಕ್ರಮವಾಗಿ ಮಡಿಕೇರಿಯ ಪುಟಾಣಿನಗರ, ಮಂಗಳೂರು ರಸ್ತೆ, ಮೈಸೂರು ರಸ್ತೆ, ಕೋಟೆ ಹಿಂಭಾಗ, ಬಾಣೆಮೊಟ್ಟೆ, ಜೂನಿಯರ್ ಕಾಲೇಜು ಹಿಂಭಾಗ, ಗಣಪತಿ ಬೀದಿ, ಮಹದೇವಪೇಟೆ, ಮುತ್ತಪ್ಪದೇವಸ್ಥಾನ ರಸ್ತೆಗಳಲ್ಲಿನ ಮನೆಗಳಿಗೆ ಭೇಟಿ ನೀಡಿ ಸಾಕಷ್ಟು ಸದಸ್ಯತನ ಪಡೆಯಲಾಯಿತು.

ಈ ಮಹಿಳೆಯರು ಪಟ್ಟಣದಿಂದ ಹಳ್ಳಿಗಳ ಕಡೆ ಹೊರಳಿ ದಿನಾಂಕ 25-1-98 ರಂದು ಭಾಗಮಂಡಲ, 26-3-98ರಂದು

ಐಕೊಳ, 28-3-98 ರಂದು ಹೊಸಕೇರಿ, 5-8-98 ರಂದು ಕುಶಾಲನಗರ, 16-9-98 ರಂದು ಗಾಳಿಬೀಡು, 12-10-98 ರಂದು ಮರಗೋಡು, 28-10-98 ರಂದು ಸಿದ್ದಾಪುರ, ಪಾಲಿಬೆಟ್ಟ, ಗೋಣಿಕೊಪ್ಪ, 6-11-98ರಂದು ಕರಡಿಗೋಡು, 9-11-98ರಂದು ಮರಗೋಡು, ದಿನಾಂಕ 4-11-98 ಹಾಗೂ 12-11-98ರಂದು ಕಗ್ಗೋಡ್ಲು ಗ್ರಾಮಗಳಿಗೆ ತಮ್ಮ ಪಾದಯಾತ್ರೆಯನ್ನು ಬೆಳೆಸಿ ಒಟ್ಟಾರೆ 1999ರ ಮೇ 11ರತನಕ 670 ಸದಸ್ಯತನವನ್ನು ದಾಖಿಲು ಮಾಡಿದ್ದು ಈ ಮಹಿಳಾ ಒಕ್ಕೂಟದ ಸಾಧನೆಯ ಒಂದು ಮೈಲಿಗಲ್ಲು. ಈ ಮಹಿಳಾಮಣಿಗಳ ಪಾದಯಾತ್ರೆಯ ಸಂದರ್ಭದಲ್ಲಿ ನೋವು, ನಲಿವು, ಅಸಹಾಕಾರ, ಅವಮಾನಗಳ ಸರಮಾಲೆಯನ್ನು ಅನುಭವಿಸುತ್ತಾ, ತಮ್ಮನ್ನು ತೊಡಗಿಸಿಕೊಂಡು ಮಳೆ, ಗಾಳಿ, ಬಿಸಿಲು, ಚಳಿಯನ್ನು ಲೆಕ್ಕಿಸದೆ ಉನ್ನತ ಧ್ಯೇಯವನ್ನಿಟ್ಟು, ಸಾಹಸಮಯ ಭಾವನೆಯಿಂದ, ತಮ್ಮೆಲ್ಲಾ ಸ್ವಾರ್ಥ ಬಯಕೆಗಳನ್ನು ಬದಿಗೊತ್ತಿ ಶ್ರಮಿಸಿದ್ದು ಇಂತಹ ಮಹಾತ್ಕಾರ್ಯವನ್ನು ಯಾವೊಬ್ಬ ಮಹಿಳೆಯೂ ಇದುವರೆಗೆ ಹಮ್ಮಿಕೊಳ್ಳದಿದ್ದು, ಯಾರೂ ಮಾಡದ ಸಾಧನೆಯನ್ನು ಮಾಡುತ್ತಿರುವ ಇವರುಗಳಿಗೆ ತಮ್ಮೆಲ್ಲರ ಸಹಾಯದ ಸಹಕಾರ ಆಶೀರ್ವಾದ ಅತ್ಯಗತ್ಯವೆಂಬುದನ್ನು ಮನಗಂಡು, ಈ ಸಂದರ್ಭದಲ್ಲಿ ತಮ್ಮೆಲ್ಲರನ್ನು ವಿನಂತಿಸುತ್ತಾ ಇವರುಗಳಿಗೆಲ್ಲಾ ಸರ್ವರೀತಿಯಲ್ಲೂ ಗೌರವಾದರಗಳಿಗೆ ಯೋಗ್ಯರೆಂದು ಬಣ್ಣಿಸುತ್ತಾ, ಮಹಿಳಾ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಈ ಒಕ್ಕೂಟಕ್ಕೆ ಕುಲದೇವರ ದಯೆ ಇರಲಿ ಎಂದು ನಾವೆಲ್ಲರೂ ಹಾರೈಸುವುದು ಆದ್ಯ ಕರ್ತವ್ಯವಾಗಿದೆ. ಸದಸ್ಯತನ ಹಾಗೂ ಚಂದಾ ವಸೂಲಿಗೆ ಹೋದ ಮನೆಗಳಲ್ಲಿ ನೀಡಿದ ಅತಿಥಿ ಸತ್ಕಾರ ಮತ್ತು ಪ್ರೋತ್ಸಾಹಗಳಿಗೆ ಈ ಒಕ್ಕೂಟವು ಧನ್ಯವಾದಗಳನ್ನರ್ಪಿಸುವುದರೊಂದಿಗೆ ಚಿರಋಣಿಯಾಗಿರುತ್ತದೆ. ಕೊನೆಯಲ್ಲಿ ತಮ್ಮೆಲ್ಲರ ಗಮನ ಸೆಳೆಯುವ ಬಹುಮುಖ್ಯ ಅಂಶವೆಂದರೆ ಈ ಎಲ್ಲಾ ಚಟುವಟಿಕೆಗಳ ಬಗ್ಗೆ ಓಡಾಡುವಾಗ ತಗುಲಿದ ವೆಚ್ಚವನ್ನು ತಮ್ಮ ಸ್ವಂತ ಖರ್ಚಿನಿಂದಲೇ ಭರಿಸಿರುವುದು, ನಿಸ್ವಾರ್ಥ ಸೇವೆಗೆ ಹಿಡಿದ ಕೈಗನ್ನಡಿಯಾಗಿರುವುದು ಪ್ರಶಂಸಾರ್ಹ.

ಕೊಡಗು ಮುಂದೆಂದು ಕರ್ನಾಟಕದ ಅವಿಭಾಜ್ಯ ಅಂಗ : ಕೊಡಗು ಪ್ರಜಾವೇದಿಕೆಯ ನಿರ್ಣಯ

ಕೊಡಗು ಎಂದೆಂದಿಗೂ ಕರ್ನಾಟಕದ ಅವಿಭಾಜ್ಯ ಅಂಗ ಇದನ್ನು ಯಾವ ಕಾರಣಕ್ಕೂ ಕರ್ನಾಟಕದಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂಬ ಪ್ರಮುಖ ನಿರ್ಣಯವೊಂದನ್ನು ದಿನಾಂಕ 21-5-1999ರಂದು ಮಡಿಕೇರಿ ನಗರದ ಗಾಂಧೀ ಮೈದಾನದಲ್ಲಿ ನಡೆದ ಕೊಡಗು ಪ್ರಜಾವೇದಿಕೆಯ ಬೃಹತ್ ಸಮಗ್ರತಾ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆ ಗಾಳಿಯನ್ನು ಲೆಕ್ಕಿಸದೆ ಸಮಾವೇಶಕ್ಕೆ ಜಿಲ್ಲೆಯ ವಿವಿದೆಡೆಗಳಿಂದ ಆಗಮಿಸಿದ ಅಸಂಖ್ಯಾತ ಜನರೆದುರು ಪ್ರಜಾವೇದಿಕೆಯ ಸ್ಥಾಪಕರಲ್ಲೊಬ್ಬರಾದ ಕೊಕ್ಕೇರ ಎಂ. ಸುಬ್ಬಯ್ಯ ಸಮಾವೇಶದಲ್ಲಿ ಆ ನಿರ್ಣಯಗಳನ್ನು ಮಂಡಿಸುತ್ತಿದ್ದಂತೆಯೇ ಸಭೆ ಭಾರೀ ಕರತಾಡನದ ಮೂಲಕ ಅದನ್ನು ಅಂಗೀಕರಿಸಿತು.

ಕೊಡಗಿನ ವಿಶಿಷ್ಟ ಭೌಗೋಳಿಕ, ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿ ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನು ನೀಡಬೇಕು, ರೈಲು ಮಾರ್ಗವನ್ನು ಕಲ್ಪಿಸಬೇಕು, ನಾಗರಹೊಳೆಯಲ್ಲಿ ನೆಲೆಸಿರುವ ಗಿರಿಜನರನ್ನು ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ತೆರವುಗೊಳಿಸದೆ ಅವರಿರುವಲ್ಲೇ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು, ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿರುವ ಜಿಲ್ಲೆಯ ಕೆಂಬಟ್ಟಿ, ಕಾಪಾಳ ದಲಿತ ಸಮುದಾಯಕ್ಕೆ ಮತ್ತು ಕೆಳವರ್ಗದ ಕೃಷಿಕ ಸಮುದಾಯಕ್ಕೆ ಮೀಸಲಾತಿ ಸೌಲಭ್ಯಕ್ಕೆ ಸರಕಾರ ಕ್ರಮ ಕೈಗೊಳ್ಳಬೇಕು, ಜಿಲ್ಲೆಯ ಕೊಡವ, ಅರೆಭಾಷೆ, ಬ್ಯಾರಿ, ಎರವ, ಪೊಮಲೆ ಕುಡಿಯ, ತೇಮಲೆ ಕುಡಿಯ, ಬೆಟ್ಟಕುರುಬ ಮುಂತಾದ ಪ್ರಾದೇಶಿಕ ಭಾಷಾ ಪ್ರಕಾರಗಳನ್ನೊಳಗೊಂಡ ಏಕ ಸ್ವರೂಪದ ಕೊಡಗು ಜಿಲ್ಲೆ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಬೇಕು, ಜಮ್ಮಾವು ಸೇರಿದಂತೆ ಕೊಡಗಿನ ಭೂ ಹಿಡುವಳಿಗಳ ಬಗ್ಗೆ ಇರುವ ಗೊಂದಲಗಳನ್ನು ನಿರ್ಮೂಲನೆ ಮಾಡಿ ರೈತರಿಗೆ ಸರಕಾರವು ಸ್ಪಂದಿಸಬೇಕು ಹಾಗೂ ಕೊಡಗಿನ ಅಭಿವೃದ್ಧಿಗೆ ಕೈಗೊಂಡಿರುವ ಎಲ್ಲಾ ಯೋಜನೆಗಳನ್ನು ಕೂಡಲೆ ಅನುಷ್ಠಾನಕ್ಕೆ ತರಬೇಕು ಎಂಬ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅದಕ್ಕೂ ಮೊದಲು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ವೇದಿಕೆಯ ಗೌರವಾಧ್ಯಕ್ಷ ಎನ್. ಎಸ್. ದೇವಿಪ್ರಸಾದ್ ಪ್ರಜಾವೇದಿಕೆಯು ಒಂದು ಜಾತಿಗೆ ಸೇರಿದ ಸಂಘಟನೆಯಲ್ಲ, ಯಾರ ವಿರೋಧಿಯೂ ಅಲ್ಲ. ಸಮಗ್ರ ಕರ್ನಾಟಕವೇ ನಮ್ಮ ಏಕೈಕ ಗುರಿ ಎಂದು ಹೇಳಿದರು. ೧೯೫೨ರಲ್ಲಿ ೨೪ ಸದಸ್ಯರ ಶಾಸನ ಸಭೆಯ ಕೊಡಗು ರಾಜ್ಯವನ್ನು ೧೯೫೬ರಲ್ಲಿ ಕರ್ನಾಟಕದೊಂದಿಗೆ ವಿಲೀನಗೊಳಿಸಲು ಹೋರಾಡಿ ಯಶಸ್ಸು ಕಂಡ ದಿವಂಗತ ಚೆಪ್ಪುಡಿರ ಎಂ. ಪೂಣಚ್ಚನವರ ಸೇವೆಯನ್ನು ಅವರು ಈ ಸಂದರ್ಭ ಸ್ಮರಿಸಿಕೊಂಡರು. ಅಲ್ಲದೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಲು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವೇದಿಕೆಯ ಜಿಲ್ಲಾ ಸಂಚಾಲಕ ಎಂ. ಟಿ. ವಿಜಯೇಂದ್ರ ವಹಿಸಿದ್ದರು.

ಹಂಪಿ ವಿಶ್ವವಿದ್ಯಾನಿಲಯದ ರೀಡರ್ ತಂಬಂಡ ವಿಜು ಪೂಣಚ್ಚ ಪ್ರಾಸ್ತಾವಿಕ ಭಾಷಣ ಮಾಡಿದರು. ಕನ್ನಡ ಶಕ್ತಿ ಕೇಂದ್ರದ ಚಿದಾನಂದ ಮೂರ್ತಿ, ಶಾಸಕ ಡಿ. ಎಸ್. ಮಾದಪ್ಪ, ಡಿವೈಎಫ್‌ನ ಕಿಶೋರ್ ಪೂಣಚ್ಚ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷೆ ಕಮಲಾಗಣಪತಿ, ವೇದಿಕೆಯ ಸೋಮವಾರಪೇಟೆ ತಾಲ್ಲೂಕು ಸಂಚಾಲಕ ಈಶ್ವರಚಂದ್ರ ವಿದ್ಯಾಸಾಗರ್, ವೀರಾಜಪೇಟೆ ತಾಲ್ಲೂಕು ಅಧ್ಯಕ್ಷ ಪಂದಿಕಂಡನಂದ, ಲೋಕಶಕ್ತಿಯ ಕೆ. ಟಿ. ಪೂವಯ್ಯ ಬೆಂಗಳೂರು ಬಿ. ಇ. ಎಲ್. ಕನ್ನಡ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಮಾವೇಶವನ್ನು ಬೆಂಬಲಿಸಿ ಮಾಜಿ ಸಚಿವೆ ಸುಮಾವಸಂತ್ ಕಳುಹಿಸಿದ್ದ ಶುಭ ಸಂದೇಶವನ್ನು ಸಭೆಯಲ್ಲಿ ಓದಲಾಯಿತು. ಕುಮಾರಿ ಮಿಲನ ಮತ್ತು ಕಾಂಚನ ಪ್ರಾರ್ಥಿಸಿದರೆ, ಕೆ. ಎ. ಪಾಲಾಕ್ಷ ಸ್ವಾಗತಿಸಿ ವಂದಿಸಿದರು.

ಗೌಡ ಮಹಿಳಾ ಒಕ್ಕೂಟ ಮಡಿಕೇರಿ (ರಿ.) ಕೊಡಗು

ಕಾರ್ಯಸಾಧನೆ -

ಕೊಡಗಿನ ಗೌಡ ಜನಾಂಗದ ಮಹಿಳೆಯರ ಶ್ರೇಯೋಭಿವೃದ್ಧಿಗೆ ಮತ್ತು ಕಲ್ಯಾಣಕ್ಕಾಗಿ ಪ್ರತ್ಯೇಕವಾದ ಒಂದು ಸಂಘಟನೆಯು ಅನಿವಾರ್ಯವೆಂಬುದನ್ನು ಆಗಾಗ್ಗೆ ಸ್ವಜಾತೀಯ ಹಿರಿಯ ಸಹಕಾರಿಗಳು ಪ್ರಸ್ತಾಪಿಸುತ್ತಿರುವುದನ್ನು ಗಂಭೀರವಾಗಿ ಪ್ರಸ್ತಾಪಿಸಿ ಚಿಂತಿಸಿ ದಿಢೀರ್ ಆಗಿ ಕೊಡಗು "ಗೌಡ ಮಹಿಳಾ ಒಕ್ಕೂಟ"ದ ರಚನೆಗೆ ಕಾರಣಭೂತವಾಗಿ ದಿನಾಂಕ 3-11-97ರಂದು ಸ್ಥಾಪಿಸಲ್ಪಟ್ಟಿತು. ಈ ಒಕ್ಕೂಟವು 12 ಮಂದಿ ಸದಸ್ಯರುಗಳನ್ನೊಳಗೊಂಡು ದಿನಾಂಕ 18-3-98ರಂದು ನೋಂದಾಯಿಸಲ್ಪಟ್ಟಿತು. ಪ್ರಸಕ್ತ ವಾರ್ಷಿಕ ಅವಧಿಯಲ್ಲಿ 670 ಸದಸ್ಯರುಗಳನ್ನು ನೋಂದಾಯಿಸಿ ಒಟ್ಟು 21 ಸಭೆಗಳನ್ನು ನಡೆಸಿದೆ, ಈ ಒಕ್ಕೂಟವು ಕೆಳಗಿನಂತೆ ತನ್ನ ಚೊಚ್ಚಲ ಅವಧಿಯಲ್ಲೆ ಹುಬ್ಬೇರಿಸುವಂತಹ ಹಲವಾರು ಕಾರ್ಯಗಳನ್ನು ಸಾಧಿಸಿದೆ.

1. ಜಿಲ್ಲೆಯ ಪಟ್ಟಣ ಹಾಗೂ ಗ್ರಾಮಗಳಿಗೆ ಖುದ್ದಾಗಿ ತೆರಳಿ ಸದಸ್ಯತನವನ್ನು ಪಡೆದಿರುವುದು.

2. ಪ್ರಥಮ ಬಾರಿಗೆ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ 4-1-98ರ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸದರಿ ಸಮಾರಂಭದ ಅತಿಥಿಗಳಿಗೆ ಬೆಳಿಗ್ಗೆ ಹಾಗೂ ಸಂಜೆಯ ಫಲಹಾರದ ವ್ಯವಸ್ಥೆಯನ್ನು ವಹಿಸಿಕೊಂಡು ನೆರವೇರಿಸಿತು.

3. ದಿನಾಂಕ 25-1-98ರಂದು ಜಗದ್ವಿಖ್ಯಾತ ತಲಕಾವೇರಿಗೆ ಭೇಟಿ ನೀಡಿ, ಪೂಜೆ ಸಲ್ಲಿಸಿದ ನಂತರ ಭಾಗಮಂಡಲದಲ್ಲಿ ನಡೆದ ಮಹಿಳಾ ಜಾಗ್ರತ್ಸಭೆಗೆ ಹಾಜರಾಗಿ ಅಲ್ಲಿ ಉಪಸಮಿತಿಯನ್ನು ರಚಿಸಲಾಯಿತು.

4. ದಿನಾಂಕ 1-2-98ರಂದು ಕುಶಾಲನಗರದ ಗೌಡ ಮಹಿಳಾ ಸದಸ್ಯರನ್ನು ಭೇಟಿಯಾಗಿ ಸಮಿತಿಯನ್ನು ರಚಿಸುವಂತೆ ಸೂಚಿಸಲಾಯಿತು.

5. ದಿನಾಂಕ 16-3-98ರಂದು ಐಕೊಳ ಗ್ರಾಮಕ್ಕೆ ಭೇಟಿಯಾಗಿ ಉಪಸಮಿತಿಯನ್ನು ರಚಿಸಲಾಯಿತು.

6. ದಿನಾಂಕ 12-4-98ರಂದು ಮೈಸೂರಿನಲ್ಲಿ ನಡೆದ ಕೊಡಗು ಸಂಗಾತಿಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ಪ್ರಥಮ ಬಾರಿಗೆ ಶ್ರೀ ವೆಂಕಟರಮಣ ದೇವರ ಹರಿಸೇವೆ ಕಾರ್ಯಕ್ರಮವನ್ನು ನಿರೂಪಿಸಿ ಸಭಿಕರಿಂದ ಮೆಚ್ಚುಗೆ ಗಳಿಸಿತು.

7. ದಿನಾಂಕ 1-5-98ರಂದು ಭಾಗಮಂಡಲದ ಐತಿಹಾಸಿಕ ಗೌಡ ಸಮ್ಮೇಳನದಲ್ಲಿ ಭಾಗವಹಿಸಿ ಹರಿಸೇವೆ ರೂಪಕ ಮತ್ತು ಗುಡ್ಡೆಮನೆ ಅಪ್ಪಯ್ಯಗೌಡರ ವೀರ ಗೀತೆಯ ಕಾರ್ಯಕ್ರಮವನ್ನು ನೀಡಲಾಯಿತು.

8. ದಿನಾಂಕ 25-5-98ರಂದು ಜೂನಿಯರ್ ಕಾಲೇಜಿನ ಪಕ್ಕದಲ್ಲಿನ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ ಎಂದು ನಾಮಫಲಕದ ಪುನರ್ ನಿರ್ಮಾಣಕ್ಕೆ ಪುರಸಭೆಗೆ ಅರ್ಜಿ ಸಲ್ಲಿಸಲಾಯಿತು.

9. ದಿನಾಂಕ 23-7-98ರಂದು ನಡೆದ ಸ್ವಾತಂತ್ರ್ಯ ಸುವರ್ಣಮಹೋತ್ಸವದ ಜಾಥದಲ್ಲಿ ಒಕ್ಕೂಟದ ಬ್ಯಾನರ್‌ನೊಂದಿಗೆ ಭಾಗವಹಿಸಿ, ನಂತರ ಪುರಸಭೆಯಲ್ಲಿ ಸಾರ್ವಜನಿಕವಾಗಿ ಒಂದು ವೀರಗೀತೆ ಹಾಗೂ ಹರಿಸೇವೆಯನ್ನು ಪ್ರದರ್ಶಿಸಲಾಯಿತು.

10. ಆಕಾಶವಾಣಿಯ ಇತಿಹಾಸದಲ್ಲೇ ಜಿಲ್ಲೆಯ ಗೌಡ ಜನಾಂಗದ ಕಾರ್ಯಕ್ರಮ ದಿನಾಂಕ 15-9-98ರಲ್ಲಿ ಪ್ರಸಾರ ಗೊಂಡದು ಸುದಿನ ಹಾಗೂ ಎಂದಿಗೂ ಮರೆಯಲಾಗದ ದಿವಸ ಮತ್ತು ಅಭಿನಂದನೆಯ ಸುರಿಮಳೆಯಾಯಿತು.

11. ಯಾವುದೇ ಕಾರ್ಯಕ್ರಮ ನಡೆದರೂ ದೈವಶಕ್ತಿ ಅನುಗ್ರಹ ಮುಖ್ಯ. ಹಾಗಾಗಿ ದಿನಾಂಕ 29-9-98ರಂದು ಶಾರದಾಂಬೆಯ ಪೂಜೆ ನಡೆಯಿಸಿತು.

12. 13-9-98ರಂದು ಬೆಂಗಳೂರಿನ ಕಾವೇರಿನಾಡು ಕಾರ್ಯಕ್ರಮಕ್ಕೆ ಕುಲದೇವರ ಹರಿಸೇವೆ ಹಾಡಿನೊಂದಿಗೆ ಭಾಗವಹಿಸಿರುವುದು ಹೆಮ್ಮೆಯ ವಿಷಯ.

13. ದಿನಾಂಕ 28-11-98ರಂದು ಮಡಿಕೇರಿಯಲ್ಲಿ ನಡೆದ ರಾಜ್ಯಮಟ್ಟದ ಜಾನಪದ ಮೇಳದಲ್ಲಿ ಭಾಗವಹಿಸಿ ಹಲವು ಕಾರ್ಯಕ್ರಮ ನೀಡಿ ದೂರದರ್ಶನದಲ್ಲಿ ಪ್ರಸಾರವಾಗಿ, ರಾಜ್ಯದ ಜನತೆಗೆ ಕೊಡಗು ಗೌಡ ಸಂಸ್ಕೃತಿಯನ್ನು ಪರಿಚಯಿಸಿದ ಕೀರ್ತಿ ಮಹಿಳಾ ಒಕ್ಕೂಟದ ಸಾಧನೆಗೆ ತಂದ ಗೌರವ ಮತ್ತು ಸೌಂದರ್ಯದ ಮೆರಗು.


14. ದಿನಾಂಕ 18-1-99ರಂದು ಆಕಾಶವಾಣಿಯ ಮಹಿಳಾ ಲೋಕದಲ್ಲಿ 2ನೇ ಬಾರಿಗೆ ಭಾಗವಹಿಸಿ ಸುಂದರ ಕಾರ್ಯಕ್ರಮ ನೀಡಿ ಅಭಿಮಾನಿಗಳಿಂದ ಪ್ರಶಂಸೆಗೆ ಪಾತ್ರವಾಗಿದೆ. ಈ ಮೇಲಿನ ಚಟುವಟಿಕೆಗಳನ್ನು ಅವಲೋಕಿಸಿದಲ್ಲಿ ಮಹಿಳಾ ಒಕ್ಕೂಟವು ಮಹಿಳೆಯರಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳಿಂದ ಬೆಳಕಿಗೆ ಬಂದ ಪ್ರತಿಭೆಗಳಿಗೆ ಸಿಕ್ಕಿದ ಪುರಸ್ಕಾರವಾಗಿದೆ. ಈ ಉತ್ಸಾಹಿ ಮಹಿಳಾ ಒಕ್ಕೂಟವು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಇತರರು ಸಕ್ರಿಯವಾಗಿ ಪಾಲ್ಗೊಳ್ಳಲು 40 ಮಹಿಳೆಯರ ಉಪಸಮಿತಿಯನ್ನು ಕೂಡ ರಚಿಸಿದೆ. ಈ ರೀತಿಯ ಸಹಕಾರ ಮತ್ತು ಉತ್ತೇಜನಗಳನ್ನು ನಿರೀಕ್ಷಿಸುತ್ತ ಮುಂಬರುವ ದಿನಗಳಲ್ಲಿ ನಡೆಯಬಹುದಾದ ಕಾರ್ಯ ಕ್ರಮಗಳು ಯಶಸ್ವಿಯಾಗಿ ನಡೆಸಿ ಜನಮನ್ನಣೆಗೆ ಪಾತ್ರವಾಗಲೆಂದು ಹಾರೈಸುವ

ಜೈ ಸ್ತ್ರೀಶಕ್ತಿ, ಸರ್ವಶಕ್ತಿ
ಗೌಡಮಹಿಳಾ ಒಕ್ಕೂಟ

ಕೊಡಗು ಸಂಗಾತಿಯಿಂದಾಗಿ ಜನರಲ್ಲಿ ಜಾಗೃತಿ ಮೂಡಿವೆ. ನಮ್ಮತನ ಬೆಳೆದಿದೆ, ಒಗ್ಗಟ್ಟು ಹೆಚ್ಚಿದೆ, ಯುವ ಜನಾಂಗಕ್ಕೆ ಹುರುಪು ಬಂದಿದೆ, ಸಂಸ್ಕೃತಿ ಬಗ್ಗೆ ಅಭಿಮಾನ ಬಂದಿದೆ. ಇದೊಂದು ಶುಭಸೂಚನೆ.

ಪ್ರೊ. ಪೂಜಾರಿ ಮೊಣ್ಣಪ್ಪ
ಬೆಂಗಳೂರು

ವ್ಯಕ್ತಿ ಪರಿಚಯ : ಭಾಗಮಂಡಲ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಪ್ರಥಮ ಅಧ್ಯಕ್ಷರಾದ ಯುವ ಮುಂದಾಳು ಶ್ರೀ ನಿಡ್ಯಮಲೆ ಮಂದಣ್ಣ ಬಾಲಾಜಿ



ಶ್ರೀ ನಿಡ್ಯಮಲೆ ಬಾಲಾಜಿಯವರು ನಿಡ್ಯಮಲೆ ಮಂದಣ್ಣನವರ ಕೊನೆಯ ಪುತ್ರರಾಗಿ ದಿನಾಂಕ 15-1-1959ರಂದು ಭಾಗಮಂಡಲದಲ್ಲಿ ಜನಿಸಿದರು. ತಂದೆ ತಾಯಿಯರ ಮುದ್ದಿನ ಕೂಸಾಗಿ ಬೆಳೆದ ಇವರು, ಪಿ. ಯು. ಸಿ. ತನಕ ಭಾಗಮಂಡಲದ ಕಾವೇರಿ ಕಾಲೇಜಿನಲ್ಲಿಯೂ, ಪದವಿಯನ್ನು ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಮುಗಿಸಿದರು. ಹೈಸ್ಕೂಲ್‌ನಲ್ಲಿದ್ದಾಗ ಯುನಿಯನ್ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಇವರು, ಪಿ. ಯು. ಸಿ.ಯಲ್ಲಿ 2 ವರ್ಷವು ಯೂನಿಯನ್ ಅಧ್ಯಕ್ಷರಾಗಿ ತಮ್ಮ ಪ್ರಾಮಾಣಿಕತೆಯನ್ನು ಪ್ರದರ್ಶಿಸಿದ್ದಾರೆ. ಉಜಿರೆ ಕಾಲೇಜಿನಲ್ಲಿಯೂ ಸಹ 1980-81ರಲ್ಲಿ ಯೂನಿಯನ್ ಅಧ್ಯಕ್ಷರಾಗಿದ್ದರಲ್ಲದೇ ಆ ಸಂದರ್ಭದಲ್ಲಿ ಇಂದಿರಗಾಂಧಿ ಉಜಿರೆ ಕಾಲೇಜು ವಿದ್ಯಾರ್ಥಿನಿ ಗಾಯತ್ರಿ ಎಂಬುವಳು ಪೋಲಿಸ್ ಪೈಯರಿಂಗ್‌ನಲ್ಲಿ ಮರಣ ಹೊಂದಿದಾಗ ಆ ಸಲುವಾಗಿ ನಿಧಿ ಸಂಗ್ರಹಕ್ಕಾಗಿ ಮಡಿಕೇರಿ ತಾಲ್ಲೂಕಿನ ಪ್ರತಿಯೊಂದು ಶಾಲಾ ಕಾಲೇಜಿಗೆ ಖುದ್ದಾಗಿ ಹೋಗಿ ತಮ್ಮ ಮಾತಿನ ಪ್ರಭಾವ ಬೀರಿ ಅತ್ಯಧಿಕ ಮೊತ್ತದ ಹಣ ಸಂಗ್ರಹ ಮಾಡಿ ಅವಳ ಹೆಸರಿನಲ್ಲಿ ಉಜಿರೆ ಕಾಲೇಜಿನಲ್ಲಿ ಓಪನ್ ಏರ್ ಥಿಯೇಟರನ್ನು ಕಟ್ಟಿಸಿರುವುದಕ್ಕೆ ಇವರ ಕಾಣಿಕೆ ಅಮೋಘವಾಗಿತ್ತು.

ವಿದ್ಯಾಭ್ಯಾಸದ ನಂತರ ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟು ಪರಿಪೂರ್ಣ ಶ್ರಮ, ಶ್ರಮಕ್ಕೆ ತಕ್ಕಂತೆ ಫಲವನ್ನು ಪಡೆಯುತ್ತ ಬಂದ ಹಾಗೇ ಅಲ್ಲಿಂದ ಕಾಂಗ್ರೇಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. ಇವರ ಮುಂದಾಳತ್ವದಲ್ಲಿ ಭಾಗಮಂಡಲದಲ್ಲಿ ಗಣೇಶ ಉತ್ಸವವು ಈಗ್ಗೆ ಐದಾರು ವರ್ಷಗಳಿಂದ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈಗ ಇವರು ಜನತಾ ದಳದ ಸಕ್ರೀಯ ಕಾರ್ಯಕರ್ತರಾಗಿಯೂ ಕಾವೇರಿ ಕಾಲೇಜಿನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1994ರಲ್ಲಿ ಇವರು ಭಾಗಮಂಡಲ ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕರಾಗಿ ಸೇರ್ಪಡೆಯಾದರು. ಮುಳುಗಿ ಅವನತಿ ಅಂಚಿನಲ್ಲಿದ್ದ ಸಂಘವನ್ನು ಶ್ರೀ ಹೆಚ್. ಡಿ. ಜೋಯಪ್ಪನವರು ಅಭಿವೃದ್ಧಿ ಪಡೆಸಿದ ಕಡೆಗೆ ಸಾಗಿಸಿದ್ದ ಸಂಘದಲ್ಲಿ ಶ್ರೀ ಬಾಲಾಜಿಯವರು 1996-99ರ ಏಪ್ರಿಲ್‌ತನಕ ಅಧ್ಯಕ್ಷರಾಗಿದ್ದು ಸಂಘವನ್ನು ಸರ್ವಾಂಗೀಣ ಅಭಿವೃದ್ಧಿ ಪಡಿಸಿ, ಸಂಘದ ಸಂಪೂರ್ಣ ಸೇವೆಯು ನಾಡಿನ ಪ್ರತಿಯೊಬ್ಬ ಫಲಾನುಭವಿಗಳಿಗೆ ಸರಳವಾಗಿ ಲಭ್ಯವಾಗುವಂತೆ ಮಾಡಿದ ಕೀರ್ತಿ ಶ್ರೀಯುತರದು.

ಇವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಂಘದ ಪಾಲು ಬಂಡವಾಳ ಹೆಚ್ಚಿತ್ತು. ಹಾಗೇಯೇ 12 ಲಕ್ಷದಷ್ಟು ನಷ್ಟದಲ್ಲಿದ್ದ ಸಂಘವನ್ನು 4 ಲಕ್ಷದ ನಿವ್ವಳ ಲಾಭಕ್ಕೆ ತಂದಿಟ್ಟ ಕೀರ್ತಿ ಇವರದಾಗಿದ್ದು, ನಾಡಿನ ಜನತೆಗೆ ತಿಳಿದ ವಿಚಾರವಾಗಿದೆ. ಇದೇ ಅವಧಿಯಲ್ಲಿ ಸಂಘವನ್ನು "ವ್ಯವಸಾಯ ಸೇವಾ ಸಹಕಾರ ಬ್ಯಾಂಕ್.," ಅನ್ನು ಮಾನ್ಯ ಮಂತ್ರಿಗಳಾದ ಎಂ. ಸಿ. ನಾಣಯ್ಯನವರ ಅಮೃತ ಹಸ್ತದಿಂದ ಉದ್ಘಾಟನೆ ಮಾಡಿದ ಕೀರ್ತಿ ಇವರದಾಗಿದೆ. ನೂತನ ಬ್ಯಾಂಕಿನ ಸ್ಥಾಪನೆಯೊಂದಿಗೆ ಶ್ರೀಯುತ ಬಾಲಾಜಿಯವರು ನಾಡಿನ ಜನತೆಗೆ ಉದ್ದೇಶಿತ ಸರಳ ಸಾಲ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಅವುಗಳಲ್ಲಿ ಆಭರಣದ ಸಾಲ, ವಾಹನದ ಸಾಲ, ಗೃಹಪಯೋಗಿ ವಸ್ತುಗಳ ಸಾಲ, ರೇಷ್ಮೆ ಮತ್ತು ಶುಂಠಿ ಬೆಳೆಗಳ ಸಾಲಗಳಾಗಿವೆ. ಸಂಘದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಸದಸ್ಯರಿಗೆ ಬೋನಸ್ ಪಾವತಿ ಮಾಡಿದ ಕೀರ್ತಿಯೂ ಇವರದಾಗಿದೆ.


ಹೀಗೆ ಜನಾನುರಾಗಿಗಳಾಗಿ ಅತ್ಯುತ್ತಮ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದ ಶ್ರೀಯುತರು 1999ನೇ ಸಾಲಿನ ಬ್ಯಾಂಕಿನ ಚುನಾವಣೆಯಲ್ಲಿ ಅತ್ಯಧಿಕ ಬಹುಮತ ಪಡೆದು ಜಯಶೀಲರಾಗಿದ್ದರು. 2ನೇ ಅವಧಿಯ ಅಧ್ಯಕ್ಷ ಗಾದಿಗೆ ಬಾಲಾಜಿಯವರೇ ಸೂಕ್ತ ವ್ಯಕ್ತಿಯೆಂಬ ಜನಾಭಿಪ್ರಾಯ ಎದ್ದಿತ್ತು ಆದರೆ ಅಧ್ಯಕ್ಷತೆಗೆ ನಡೆದ ಚುನಾವಣೆಯಲ್ಲಿ ರಾಜಕಾರಣಿಗಳ ಸ್ವಾರ್ಥತೆಯಿಂದ ಇವರು, ಕೊನೆ ಹಂತದ ಪ್ರಯತ್ನದಲ್ಲಿ ಹಠಾತ್ತನೆ ಸೋಲನ್ನು ಅನುಭವಿಸಬೇಕಾಗಿ ಬಂದದ್ದು ಭಾಗಮಂಡಲ ನಾಡಿನ ಸಹಕಾರ ಸಂಘದ ಫಲಾನುಭವಿಗಳ ದೌರ್ಭಾಗ್ಯವೇ ಸರಿ. ಬ್ಯಾಂಕ್ ಸ್ಥಾಪಿಸುವುದರೊಂದಿಗೆ ಜನತೆಯ ಸೇವಾಭಿವೃದ್ಧಿಯೇ ತನ್ನ ಮುಖ್ಯ ಗುರಿಯಾಗಿ ಇರಿಸಿಕೊಂಡಿದ್ದ ಶ್ರೀಯುತ ಬಾಲಾಜಿಯವರ ಕನಸುಗಳು ಮುಂದೆ ನನಸಾಗಲು ಇಂದಿನ ಕೆಟ್ಟ ಸಂಪ್ರದಾಯದ ನಡತೆಯ ರಾಜಕೀಯ ಬಿಡುವುದೇ?

ಶ್ರೀಯುತರು ದೇವಂಗೋಡಿ ಮನೆತನದ ಕುಶಾಲಪ್ಪನವರ ಮಗಳು ಗೀತಾಳನ್ನು ಮದುವೆಯಾಗಿ ಎರಡು ಗಂಡುಮಕ್ಕಳು ಪವನ್ ಮತ್ತು ಚಂದನ್ ಜೊತೆ ಸುಖ ಸಾಂಸಾರಿಕ ಜೀವನದಲ್ಲಿರುವ ಮತ್ತು ಜನಾಂಗಕ್ಕಾಗಿ ದುಡಿಯುವ ಹಂಬಲವಿರುವ ಇವರ ಆಶೋತ್ತರಗಳೆಲ್ಲಾ ನೆರವೇರಲೆಂದು ಆಶಿಸೋಣಾ.

ಲೇಖಿನ : ದೇವಂಗೋಡಿ ಗಿರೀಶ್, ಮೈಸೂರು

ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.

ಪತ್ರ ವಿಭಾಗ :



ಮಾನ್ಯರೆ,

ಮಾರ್ಚ್ 1-15ರ ನಿಮ್ಮ ಕೊಡಗು ಸಂಗಾತಿಯ ಪತ್ರಿಕೆಯಲ್ಲಿ ಪುಟ ಎರಡರಲ್ಲಿ "ಗೌಡ ಜನಾಂಗದವರಲ್ಲಿ ವಿನಂತಿ. ಭಿನ್ನಾಭಿಪ್ರಾಯವಿಲ್ಲದೆ ಎಲ್ಲರೂ ಗೌಡರೆನ್ನಬೇಕು" ಎಂಬ ಶಿರೋನ್ನಾಮದಿಂದ ಕೂಡಿದ ವಿವರಣೆಯನ್ನು ಓದಿದೆನು. ನನಗೆ ಆಶ್ಚರ್ಯಕರವಾಗಿದೆ ನಾನು ಅನೇಕ ಗ್ರಂಥಗಳನ್ನು ಓದಿದ್ದೇನೆ ಮತ್ತು ಪ್ರಾಂತ್ಯಗಳ ಅಥವಾ ದೇಶಗಳ ವಿವರಣೆಗಳನ್ನೂ ಓದುವಾಗ ಆಯಾ ಪ್ರದೇಶಗಳ ಜನಾಂಗಗಳ ಸಂಪ್ರದಾಯಗಳು ಮತ್ತು ಜನಾಂಗಗಳ ವರ್ಗೀಕರಣಗಳನ್ನು ಸಹ ಓದಿದ್ದೇನೆ. ಅಲ್ಲದೆ ಜನಗಳ ಆಡುವ ಭಾಷೆಗಳ ವಿವರಣೆಯನ್ನು ಸಹ ಸ್ವಲ್ಪ ಮಟ್ಟಿಗೆ ತಿಳಿದಿದ್ದೇನೆ. ಮೇಲಾಗಿ ಸರಕಾರದವರು ಹೊರಡಿಸಿರುವ ಸಮಿತಿಗಳ (ಆಯೋಗಗಳು) ವರದಿಗಳಲ್ಲೂ ಸಹ ಸಮಾಜದಲ್ಲಿನ ಜನಸಮುದಾಯಗಳ ವರ್ಗೀಕರಣಗಳನ್ನೂ ಸ್ಪಷ್ಟೀಕರಿಸಿರುತ್ತಾರೆ. ಜೊತೆಗೆ ಪ್ರಾಚೀನ ಇತಿಹಾಸದ ವೇದಗಳ ಕಾಲದ ಸಮಾಜದ ವಿವರಣೆಯನ್ನೂ ಸಹ ಹೋಲಿಸಿ ನೋಡುವಾಗ ನಿಮ್ಮ ಪತ್ರಿಕೆಯಲ್ಲಿ ನೀಡಿರುವ "ಗೌಡ" ಎಂಬ ಪದದ ಅರ್ಥವನ್ನು ಯಾವ ಮಟ್ಟದಲ್ಲಿ, ಯಾವ ವರ್ಗಕ್ಕೆ ಹೊಂದಿಸಬೇಕೆಂಬುದು ನನಗೆ ತಿಳಿಯದಾಗಿದೆ.

ಹೀಗಿರುವಾಗ ನಿಮ್ಮ ಪತ್ರಿಕೆಯಲ್ಲಿ "ಗೌಡ" ಎಂಬುದಾಗಿ ಬರೆಯಬೇಕೆಂದು ಗೌಡ ಜನಾಂಗದವರೆಲ್ಲರಿಗೂ ಆದೇಶ ನೀಡಿರುತ್ತೀರಿ. ಅಲ್ಲದೆ "ಗೌಡ" ಎಂಬುದರ ಜೊತೆಗೆ ಜನಾಂಗದ ಹೆಸರನ್ನು ಹೇಳಿಕೊಳ್ಳಬಾರದು ಎಂಬುದಾಗಿ ಸಹ ಗೌಡ ಜನಾಂಗದವರಲ್ಲಿ ವಿನಂತಿಸಿಕೊಂಡಿದ್ದೀರಿ. ಇದರ ಅರ್ಥ ಏನು ಎಂಬುದು ನನಗೆ ತಿಳಿಯದಾಗಿದೆ. "ಗೌಡ" ಎಂಬ ಪದವು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದದ್ದೇ ಅಥವಾ ದೇಶದ ಎಲ್ಲಾ ಜಿಲ್ಲೆಗಳ "ಗೌಡ" ಸಮಾಜದವರಿಗೆ ಅನ್ವಯಿಸುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ಏಕೆಂದರೆ ಪ್ರಾಚೀನ ಇತಿಹಾಸ ಕಾಲದಿಂದ ಹಿಡಿದು ವೇದಗಳ, ಮತ್ತು ಉಪನಿಷತ್ ಕಾಲದವರೆಗೆ ಅಂದಿನ ಸಮಾಜದ ವಿವರಣೆಗಳನ್ನು ನೋಡಿದರೆ "ಗೌಡ", "ಗಾವುಂಡ", "ಗ್ರಾಮದ ಮುಖಂಡ" ಎಂಬ ಪದಗಳು ಸಮಾಜದ ವರ್ಗಕ್ಕೆ ಒಂದಲ್ಲಾ ಒಂದು ರೀತಿ ಸಮಾಜದ, ಗ್ರಾಮದ ಮುಖಂಡರುಗಳಿಗೆ ಅನ್ವಯಿಸುವ ಪದವಾಗಿರುತ್ತದೆ. ಪತ್ರಿಕೆಯ ಹೇಳಿಕೆಯ ಪ್ರಕಾರ ಜನಾಂಗದ ಹೆಸರನ್ನು ಬರೆಸಬೇಡಿ, ಬರೀ "ಗೌಡ" ಎಂಬುದಾಗಿ ಬರೆಸಬೇಕು ಎಂದಿದ್ದೀರಿ.

ಅಲ್ಲದೆ ವಿದ್ಯಾ ಇಲಾಖೆಯ ದಾಖಲೆಗಳಲ್ಲಿ ಮತ್ತು ಕಂದಾಯ ಇಲಾಖೆಯಲ್ಲಿ "ಗೌಡ" ಎಂಬುದಾಗಿ ಮಾತ್ರ ಇರುವುದರಿಂದ ಬೇರೆ ಯಾವುದೇ ಶಬ್ದಗಳನ್ನು ಸೇರಿಸಬಾರದು ಎಂಬುದಾಗಿ ತಿಳಿಸಿರುತ್ತೀರಿ. ಅಂದರೆ ಮೇಲ್ಕಂಡ ಇಲಾಖೆಯವರುಗಳು ಯಾವ ಆಧಾರ ಮೇರೆಗೆ ಸಂದರ್ಭ, ಸನ್ನಿವೇಶಗಳಿಗೆ ಹೊಂದಿಕೊಂಡು ಬರೆದಿರಬಹುದು. ಜನಗಣತಿ (ಕಾನೇಶುಮಾರಿ) ಆಧಾರದಿಂದ ಬರೆದಿರುತ್ತಾರೆಯೆ ಅಲ್ಲದೆ ಸದರೀ ಪದವು ಸರಕಾರದಿಂದ ದೃಢೀಕರಿಸಲ್ಪಟ್ಟಿದಿಯೆ ಎಂಬುದನು ಸ್ಪಷ್ಟೀಕರಿಸಿ, ಕಾರಣ ನಾನು ಜನಾಂಗದ ಬಗ್ಗೆ ಅಧ್ಯಯನ ಮಾಡುತ್ತಿರುವುದರಿಂದ ನನಗೂ ಸಹ "ಗೌಡ" ಎಂಬ ಪದವನ್ನು ನನ್ನ ಬರವಣಿಗೆಯಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಆದಕಾರಣ ತಮ್ಮನ್ನು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತ ಮೇಲ್ಕಂಡ ಅಂಶದ ಬಗ್ಗೆ ಸತ್ಯಸಂಗತಿಯ ವಿಷಯವನ್ನು ತಿಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಟಿ. ಆರ್. ಮುದ್ದೇಗೌಡ
ಮೈಸೂರು

ಪತ್ರ -2

ವಿಷಯ : ಅರಮನೆ - ಗುರುಮನೆ - ವಿಚಾರ

ಮಾನ್ಯರೇ, ಹಿಂದಿನ ಕೊಡಗು ಸಂಗಾತಿ ಮಾರ್ಚ್ 15-31ರ ಪತ್ರಿಕೆಯಲ್ಲಿ ಸಂಪಾದಕರ ಲೇಖನದಲ್ಲಿ ಮೂಡಿ ಬಂದಿರುವ ವಿಷಯದ ಮೇಲೆ ತನ್ನ ವಿಶ್ಲೇಷಣೆ ಏನೆಂದರೆ ಕರ್ನಾಟಕದಲ್ಲಿಯೂ ಒಂದೊಂದು ಜಾತಿ ಅಥವಾ ಜನಾಂಗದವರಿಗೂ, ಒಂದೊಂದು ಮಠವಿದೆ. ಗುರುಗಳೂ ಇದ್ದಾರೆ ಎಂದು ಬರೆಯುತ್ತಾ ಅದೇ ರೀತಿ ದಕ್ಷಿಣ ಕನ್ನಡ ಮತ್ತು ಕೊಡಗಿನ ಗೌಡರಿಗೂ, ಒಂದು ಗುರುಮನೆ ಬೇಕು ಎಂಬ ಅಭಿಪ್ರಾಯ ಸೂಚಿಸಿದ್ದೀರಿ. ಅಲ್ಲದೆ ಈ ಗೌಡರಿಗೆ (ಕೊಡಗಿನ ಗೌಡರಿಗೆ) ಶೃಂಗೇರಿಯ ಜಗದ್ಗುರುಗಳು, ಗುರುಗಳಾಗಿದ್ದರು ಎಂದಿದ್ದೀರಿ. ನಿಮ್ಮ ಅಭಿಪ್ರಾಯದಂತೆ ಕೊಡಗಿನ ಗೌಡ ಜನಾಂಗವು ಶೃಂಗೇರಿ ಮಠದ ಭಕ್ತರು ಎಂದಾಯಿತು. ಅರ್ಥಾತ್, ಕೊಡಗಿನ ಗೌಡ ಜನಾಂಗವು ಶೈವ ಸಂಪ್ರದಾಯಸ್ತರು, ಆಚಾರ ವಿಚಾರ, ಸಂಸ್ಕಾರಗಳೆಲ್ಲವೂ ಶೈವ ಸಂಪ್ರದಾಯದಂತೆ ಆಚರಿಸತಕ್ಕವರೆಂದಾಯಿತು. ಮುಂದುವರೆದು ವಿಶ್ಲೇಷಣೆ ಮಾಡಿದರೆ ಜನಾಂಗದ ವರ್ಗೀಕರಣದಲ್ಲಿ ನೋಡುವುದಾದರೆ ಶೈವ ಪಂಗಡಕ್ಕೆ ಸೇರಿದವರೆಂದಾಯಿತು. ಶೈವ ಧರ್ಮವು ವೈದೀಕ ಧರ್ಮದೊಳಗೆ ಸೇರಿರುವುದರಿಂದ ಕೊಡಗಿನ ಗೌಡ ಜನಾಂಗವು ವೈದಿಕ ಧರ್ಮದ ಅನುಯಾಯಿಗಳು ಎಂದಾಯಿತು. ಅಂದರೆ ಕೊಡಗಿನ ಗೌಡ ಜನಾಂಗವು ಒಂದು ವರ್ಗದ (ಜಾತಿಗೆ) ಜನಾಂಗಕ್ಕೆ ಸೇರಿದವರೆಂದಾಯಿತು. ಅಂದರೆ ಸ್ಪಷ್ಟವಾಗಿ ಯಾವ ಜಾತಿಗೆ ಸೇರಿದವರು (ಜೈನ ಅಥವಾ ವೈಷ್ಣವ) ಎಂದಾಯಿತು. ನೀವು ಬರೀ ಗೌಡ ಜನಾಂಗವೆನ್ನುತ್ತೀರಿ ಅದು ಹೇಗೆ? ಮತ್ತೇ ಶೈವದ ಮಠದ (ಶೃಂಗೇರಿ ಗುರುಗಳು) ನಮ್ಮ ಗುರುಗಳು ಎನ್ನುತ್ತೀರಿ. ಒಂದಕ್ಕೊಂದು ಸಂಬಂಧ ಇರುವುದನ್ನು ಗುರುತಿಸಿಲ್ಲವೇಕೆ? ಗೌಡ ಎಂಬ ವರ್ಗದ ಜನಸಮುದಾಯವು ಜೈನ ಧರ್ಮದಡಿಯಲ್ಲಿ ಬರುತ್ತಾರೆಂದು ಒಪ್ಪಿಕೊಂಡ ಮೇಲೆ ಯಾವ ಜನಾಂಗ ಎಂಬುದು ತಿಳಿದಿಲ್ಲವೇಕೆ? ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ಅರಿವು ಇರುವಾಗ ಶೃಂಗೇರಿ ಗುರುಗಳು ಯಾವುದಕ್ಕೆ ಸೇರಿದವರು ಎಂಬುದು ಗೊತ್ತಿದೆ. ಆದರ ಭಕ್ತರು ಎಂದು ಒಪ್ಪಿರುತ್ತೀರಿ. ಆದರೂ ವರ್ಗಮೂಲ ಗೊತ್ತಿಲ್ಲದ ರೀತಿ ವಿವರಿಸುತ್ತೀರಿ. ಇದರ ಬಗ್ಗೆ ವಿವರಣೆ ಕೊಡುವುದು ಉತ್ತಮ.

ಮುಂದುವರಿದು ನೋಡಿದರೆ ಒಕ್ಕಲಿಗರ ಗುರುಗಳನ್ನು, ನಮ್ಮವರು, ನಮ್ಮ ಗುರುಗಳು ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ವಿಚಾರವನ್ನು ಜನಾಂಗದವರುಗಳ ಮೇಲೆ ಜವಾಬ್ದಾರಿ ಹೊರಿಸಿದ್ದೀರಿ ಇದು ಸರಿಯೆ?

ಇತಿಹಾಸದುದ್ದಕ್ಕೂ, ವೇದಗಳ ಪೂರ್ವಕಾಲದಿಂದ ಹೊಸ ಶಿಲಾಯುಗದವರೆಗೂ ಪ್ರಪಂಚದ/ದೇಶದ ವಿಷಯಗಳನ್ನು ಭೌಗೋಳಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಇತಿಹಾಸಕಾರರು ಪರಿಶೀಲಿಸಿದ್ದಾರೆ. ವಿಮರ್ಶಿಸಿರುವುದು ತಿಳಿಯುತ್ತದೆ. ವರ್ಣ ಭೇದಗಳು ಆಚರಣೆಗೆ ಬರುವುದಕ್ಕಿಂತ ಹಿಂದೆಯೆ ಮತ್ತು ತದನಂತರದ ಸಮಾಜದ ವರ್ಗ ಭೇದಗಳು ತಿಳಿಯುತ್ತದೆ.

ಮೊದಲಿನಿಂದಲೂ ಸಹ ಗುರು ಎಂಬುವರು ಇದ್ದರು ಎಂಬುದು ತಿಳಿಯುತ್ತದೆ. ಅದೇ ರೀತಿ ಅನುಸರಿಸಿ ಬಂದಿರುವಂತೆ ಈಗಲೂ ಸಹ, ಮತ ಪಂಥಗಳು, ಗುರು ಮಠಗಳು, ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಅದನ್ನು ಕೊಡಗಿನ ಗೌಡ ಸಮಾಜದವರೂ, ಅರಿತು, ಅರಿಯದ ರೀತಿಯಲ್ಲಿ ಇದ್ದಾರೆ ಏಕೆ ಎಂದು ಕೇಳಿದುದಾಗಿದೆ. ಉದಾ : ಪ್ರತಿಯೊಂದು ಸಮಾಜದವರುಗಳು ತಮ್ಮ ತಮ್ಮ ಸಮಾಜದ ಪದ್ಧತಿ ಅಥವಾ ಕಟ್ಟು ಕಟ್ಟಳೆಯಂತೆ ಸತ್ತಾಗ, ಹುಟ್ಟಿದಾಗ, ಹಬ್ಬ ಹರಿದಿನಗಳನ್ನು ಆಚರಿಸುವಾಗ, ಮುಖ್ಯವಾಗಿ ಮದುವೆ ಅಲ್ಲದೆ ಶುಭಕಾರ್ಯಗಳನ್ನು ನಡೆಸುವಾಗ, ಸಂಪ್ರದಾಯಬದ್ಧವಾಗಿ ಆಚರಿಸುತ್ತಾರೆ. ಅಲ್ಲದೆ ಅವರವರ ಧರ್ಮದ (ಶೈವ ಅಥವಾ ವೈಷ್ಣವ) ಪ್ರಕಾರ ಆಚರಿಸುತ್ತಿರುವುದು ವೇದ್ಯವಾಗಿರುತ್ತದೆ. ಗುರುವಿಲ್ಲದೆ ಯಾವ ಕೆಲಸವೂ ಕೂಡ ನಡೆಯುವುದಿಲ್ಲ. ವಿಚಾರಗಳು ಹೀಗಿರುವಾಗ, ಕೊಡಗಿನ ಗೌಡ ಜನಾಂಗವು ಈಗ ಗುರುವನ್ನು ಹೊಸದಾಗಿ ಹುಡುಕುವುದು ಮತ್ತು ಗುರುತಿಸಲು ಹೊರಟಿರುವುದು ಎಷ್ಟರ ಮಟ್ಟಿನ ಔಚಿತ್ಯ?

ಟಿ. ಆರ್. ಮುದ್ದೇಗೌಡ
ಮೈಸೂರು

ಗೌಡರ ವಿವಾಹಗಳು

ಕುಂಬಳದಾಳು ಗ್ರಾಮದ ಕುಂಜಿಲನ ಮಾದಪ್ಪನವರ ಪುತ್ರ ಪುಷ್ಪರಾಜನಿಗೂ, ಕಿಗ್ಗಾಲು ಗ್ರಾಮದ ಕುಂಚಪ್ಪ ಪೂವಯ್ಯನವರ ಮಗಳು ಭವಾನಿಗೂ 6-5-1999ರಂದು ಮೂರ್ನಾಡಿನ ಗೌಡ ಸಮಾಜದಲ್ಲಿ ನಡೆಯಿತು.

ಕುಂಬಳದಾಳು ಗ್ರಾಮದ ಕರಣಯ್ಯನ ಉತ್ತಪ್ಪನವರ ಮಗ ಧನುವಿಗೂ ಕಗ್ಗೋಡು ಗ್ರಾಮದ ಪುಳಂಜನ ಗಣಪತಿಯವರ ಮಗಳು **ಸಬಿತಳ** ಮದುವೆಯು 9-5-1999ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ನಡೆಯಿತು.

ಶಿವಮೊಗ್ಗ ಕೊಪ್ಪದ ನಿವಾಸಿ ಕರಣಯ್ಯನ ನಾಗರಾಜರ ಪುತ್ರಿ **ಪವಿತ್ರಳಿಗೂ** ತೀರ್ಥಹಳ್ಳಿ ಹೊಸಳ್ಳಿ ಗ್ರಾಮದ ರಾಮೇಗೌಡರ ಪುತ್ರ **ಗೋಪಾಲಕೃಷ್ಣನಿಗೂ** ಬಾಳ್ಗಾಡಿ ಕೊಪ್ಪದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ದಿನಾಂಕ 7-5-1999ರಂದು ನಡೆಯಿತು.

ಮೈಸೂರು ನಿವಾಸಿ ಜಾಗಿನಕೆರೆ ಡಾ. ಜೆ. ಜಿ. ವಿಶ್ವನಾಥಯ್ಯನವರ ಮಗಳು **ಶೃತಿಗೂ** ಬನ್ನೂರಿನ ಸಿದ್ದೇಗೌಡರ ಪುತ್ರ **ದೇವೇಗೌಡನಿಗೂ** ಮೈಸೂರಿಗೂ ನಂಜರಾಜಬಹದ್ದೂರ್ ಛತ್ರದಲ್ಲಿ ದಿನಾಂಕ 12-5-1999ರಂದು ವಿಜೃಂಭಣೆಯಿಂದ ನಡೆಯಿತು.

ನಾಪೋಕ್ಲುನಾಡಿನ ಯವಕಪಾಡಿ ಗ್ರಾಮದ ಮಂಜಂಡ್ರ ಕುಳ್ಳಪ್ಪನವರ ಪುತ್ರ **ತಮ್ಮಯ್ಯನಿಗೂ** ಮತ್ತು ಮೈಸೂರಿನ ಸುಣ್ಣದಕೆರೆ ನಿವಾಸಿ ಲೇಟ್ ಮಹದೇಶ್ವರವರ ಮಗಳು **ಸುನಂದಳಿಗೂ** ದಿನಾಂಕ 12-5-1999ರಂದು ಮೈಸೂರು ಒಂಟಿಕೊಪ್ಪಲಿನ ವೆಂಕಟರಮಣ ದೇವಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ಮಾಲ್ದಾರೆ ಪಾಣತ್ತಲೆ ದೇವಯ್ಯನವರ ಪುತ್ರ **ಕುಶಾಲಪ್ಪನಿಗೂ** ಆಲೂರು ಸಿದ್ದಾಪುರದ ಕೊಂಪುಳಿರ ರಾಮಪ್ಪನವರ ಪುತ್ರಿ **ಜಲಜಾಕ್ಷಿಗೂ** ದಿನಾಂಕ 16-5-1999ರಲ್ಲಿ ಕುಶಾಲನಗರ ಗೌಡ ಸಮಾಜದಲ್ಲಿ ನೆರವೇರಿತು.

ಮಡಿಕೇರಿ ನಿವಾಸಿ, ಗೌಡ ವಿದ್ಯಾಸಂಘದ ಉಪಾಧ್ಯಕ್ಷರೂ, ಗೌಡ ಸಮಾಜದ ನಿರ್ದೇಶಕರೂ ಆದ ಪಂಜಿಪಳ್ಳಿ ವೆಂಕಪ್ಪನವರ ಪುತ್ರ **ಮುರುಳಿಗೂ** ಮತ್ತು ಮೊಳ್ಳೆರ ಅಚ್ಚಯ್ಯನವರ ಪುತ್ರಿ **ಭಾರತೀಗೂ** ಮಡಿಕೇರಿಯ ಕೆಳಗಿನ ಗೌಡ ಕಲ್ಯಾಣಮಂಟಪದಲ್ಲಿ ದಿನಾಂಕ 23-5-1999 ರಂದು ಭಾರಿ ವಿಜೃಂಭಣೆಯಿಂದ ನಡೆಯಿತು.

ಹುದಿಕೇರಿ ನಿವಾಸಿ, ಗುಂಬೀರ ಶಾಂಭವಿ ಅಪ್ಪಣ್ಣಮ್ಮಯ್ಯ ಇವರ ಪುತ್ರ **ಪ್ರವೀಣ್‌ಗೂ** ಚೇರಂಬಾಣೆ ಗ್ರಾಮದ ನಾಳೀಯಮಂಡ ಸುಬ್ಬಮ್ಮಯ್ಯ ಇವರ ಪುತ್ರಿ **ಪೂರ್ಣಿಮಾಳಿಗೂ** ಪೊನ್ನಂಪೇಟೆಯ ಮುತ್ತಣ್ಣ ಮುತ್ತಮ್ಮ ಕಲ್ಯಾಣ ಮಂಟಪದಲ್ಲಿ ದಿನಾಂಕ 23-5-1999ರಂದು ಸಕಲ ವೈಭವದಿಂದ ನೇರವೇರಿತೆಂದು ತಿಳಿದು ಬಂದಿದೆ.

ರಂಗಸಮುದ್ರ ಗ್ರಾಮದ ಪರ್ಲಕೋಟಿ ಸೋಮಯ್ಯನವರ ಪುತ್ರ **ಮೋಹನನಿಗೂ** ಸೋಮವಾರಪೇಟೆಯ ಮಸಗೋಡು ಗ್ರಾಮದ ಸುಳ್ಳಕೊಡಿ ಕಾಳಪ್ಪನವರ ಪುತ್ರಿ **ಸವಿತಾಳಿಗೂ** ದಿನಾಂಕ 26-5-1999ರಂದು ಕುಶಾಲನಗರ ಗೌಡ ಸಮಾಜದಲ್ಲಿ ನೆರವೇರಿತು.

ಮದೆನಾಡಿನ ದೇಶಕೋಡಿ ಬೆಳ್ಳಪ್ಪನವರ ಪುತ್ರಿ **ಪೂರ್ಣಿಮಾಳಿಗೂ** ಹೊಸ್ಕೇರಿ ಗ್ರಾಮದ ಐಯ್ಯಂಡ್ರ ಶಿವಣ್ಣನವರ ಪುತ್ರ **ಶ್ರೀನಿವಾಸನಿಗೂ** ದಿನಾಂಕ 26-5-1999 ರಂದು ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು.

ಅರ್ವತ್ತೊಕ್ಲು ಗ್ರಾಮದ ಮೂಟೇರ ಮೋಟಯ್ಯನವರ ಪುತ್ರ **ಪ್ರಭಾಕರನಿಗೂ** ಯು ಚೆಂಬು ಗ್ರಾಮದ ಅಂಬಟೆಕಜೆ ಕುಶಾಲಪ್ಪನವರ ಪುತ್ರಿ **ಚಂದ್ರಕಲಾಳಿಗೂ** 27-5-1999ರಂದು ಕೊಯನಾಡು ಶ್ರೀ ಗಣೇಶ್ ಕಲ್ಯಾಣಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಣ್ಣ ಬಲಮುರಿ ಗ್ರಾಮದ ಕಟ್ರತನ ಉಲ್ಲಾಸನವರ ಪುತ್ರ **ರಾಜೇಶ್‌ನಿಗೂ** ಸೋಮವಾರಪೇಟೆ ತಾಲ್ಲೂಕಿನ ಸಿದ್ದಲಿಂಗಪುರ ಗ್ರಾಮದ ಅಮ್ಮಾಜೀರ ಸಂಣಪ್ಪನವರ ಪುತ್ರಿ **ಲತಾಳಿಗೂ** ದಿನಾಂಕ 30-5-1999ರಂದು ಮೂರ್ನಾಡಿನ ಗೌಡ ಸಮಾಜದಲ್ಲಿ ನಡೆಯಿತು.



✦ ಕೌಂಡಿನ್ಯ

ಧಾರವಾಹಿ -7

ಭಯದೊಂದಿಗೆ ಆಶ್ಚರ್ಯ !

ಅದರೊಂದಿಗೆ ದುಃಖ ಬೇಸರ !

ಛೇ ಛೇ..... ಇದೇನಿದು ! ಬದುಕಿರುವವರ ಫೋಟೋಕ್ಕೆ ಯಾರಾದರೂ ಹಾರ ಹಾಕುತ್ತಾರೆಯೇ?

ಈ ಹಳ್ಳಿಯವರಿಗೆ ಏನೂ ಗೊತ್ತಾಗೊಲ್ಲ !

ರೇವತಿ ಸೂಟ್‌ಕೇಸನ್ನು ಚಾಪೆಯ ಮೇಲೆ ಇರಿಸಿ ಈಗ ಮೀನಳ ಫೋಟೋದ ಹತ್ತಿರ ಬಂದಳು !

ಹಾರವನ್ನು ಕಂಡು ಮುಜುಗರವಾಯಿತು.

"ಸತ್ತ ಮೇಲೆ"

"ಹಾಗಾದರೆ ಮೀನಳ ಫೋಟೋಕ್ಕೆ ಹಾರ ಹಾಕಿದ್ದೀರ? ಛೇ.... ಛೇ.... ಮೊದಲು ತೆಗಿ.

ಅಜ್ಜಿ ಮತ್ತು ಮೊಮ್ಮಗ ಪರಸ್ಪರ ಮುಖ ನೋಡಿಕೊಂಡರು.

ಶ್ರೀಕಂಠ "ಅದು......... ಅದು........."

ರೇವತಿಗೆ ಅದೇನೋ ಅನುಮಾನ !

ಅಜ್ಜಿ ಮುಸಿ ಮುಸಿ ಅಳುತ್ತಿದೆ !

ರೇವತಿ ಗಾಬರಿಯಿಂದ "ಮತ್ತೆ..... ಏನಾಯಿತು !"

ಶ್ರೀಕಂಠ ದುಃಖದಿಂದ "ಮೀನ...... ಮೀನ....."

ಮೀನ "ಏನಾಯಿತು ಅವಳಿಗೆ?"

ಅಜ್ಜಿ ಜೋರಾಗಿ ಅಳುತ್ತಾ "ನಮ್ಮನ್ನೆಲ್ಲಾ ಬಿಟ್ಟು ಈ ಲೋಕದಿಂದಲೇ ಹೊರಟು ಹೋದಳು ಎಂದು ಸೆರಗನ್ನು ಬಾಯಿಗೆ ತುರುಕಿಕೊಂಡಳು.

ರೇವತಿ ತತ್ತರಿಸಿ ಹೋದಳು !

ಇದು..... ಇದು ನಿಜವೆ !

ಮೀನ....... ಮೀನ ಸತ್ತು ಹೋದಳೆ?

ಹೇಗೆ....... ಹೇಗೆ?

ಅದ್ಯಾವಾಗ ಸತ್ತಳು?

> **ಇಲ್ಲಿಯವರೆಗೆ...................................**
>
> ಪ್ರಸನ್ನ ರೇವತಿಯನ್ನು ಜೀಪಿನಲ್ಲಿ ಕರೆದುಕೊಂಡು ಬಂದು ಮೀನಳ ಮನೆಯ ಹತ್ತಿರ ಬಿಡುತ್ತಾನೆ. ರೇವತಿಗೆ ಗೆಳತಿಯ ಮನೆಯಲ್ಲಿ ಅಜ್ಜಿ ಮತ್ತು ಮೀನಳ ಸಹೋದರನ ಪರಿಚಯ ಆಗುತ್ತದೆ. ಮೀನಳ ಫೋಟೋಕ್ಕೆ ಹಾರ ಹಾಕಿರುವುದು ರೇವತಿಯ ಗಮನಕ್ಕೆ ಬರುತ್ತದೆ.
>
> **ಮುಂದೆ ಓದಿ...............**

ಅವಳು ಅದನ್ನು ತೆಗೆಯಲು ಕೈ ಹಾಕಿದಳು.

ಶ್ರೀಕಂಠ ಗಾಬರಿಯಿಂದ 'ಅರೆ..... ನೀವು ಏನು ಮಾಡ್ತಾ ಇದ್ದೀರಾ? ಫೋಟೋದ ಹಾರ ಏಕೆ ತೆಗೆಯುತ್ತಿದ್ದೀರಾ?'

ಅಜ್ಜವ್ವ ಹತ್ತಿರ ಬಂದರು.

ರೇವತಿ "ಶ್ರೀಕಂಠ..... ನೀನು ಎಲ್ಲಿಯತನಕ ಓದಿದ್ದೀಯ?

ಎಸ್. ಎಸ್. ಎಲ್. ಸಿ.

"ಮನುಷ್ಯನ ಫೋಟೋಕ್ಕೆ ಹಾರ ಯಾವಾಗ ಹಾಕ್ತಾರೆ ಅಂತ ನಿನಗೆ ಗೊತ್ತಿದೆ ತಾನೆ?" ಎಂದು ಕೇಳಿದಳು.

ದುಃಖ ಒತ್ತರಿಸಿಕೊಂಡು ಬರುತ್ತಿದೆ. ಅದರೊಂದಿಗೆ ಹತ್ತು ಹಲವಾರು ಸಂದೇಹಗಳು ಕಾಡುತ್ತಿದೆ ಅವಳನ್ನು !

ರೇವತಿಯ ಕಣ್ಣುಗಳು ಹನಿಗೂಡುತ್ತಿದೆ !

ಹೃದಯ........ ಹೃದಯ ಭಾರವಾಗುತ್ತಿದೆ !

ಎದೆ ಒಡೆದಂತೆ ಆಗುತ್ತಿದೆ.

ಈಗವಳು ಶ್ರೀಕಂಠನ ಭುಜಗಳನ್ನು ಹಿಡಿದುಕೊಂಡು 'ನನಗೆ........ನನಗೆ ನಂಬಿಕೆಯೇ ಬರುತ್ತಿಲ್ಲ'

"ಶ್ರೀಕಂಠನ ಕಣ್ಣುಗಳು ಹನಿಗೂಡಿದೆ !"

"ಇದು......... ಇದು ಹೇಗಾಯಿತು?"

ಶ್ರೀಕಂಠ ಕಣ್ಣೀರನ್ನು ವರೆಸಿಕೊಂಡನು.

ರೇವತಿ "ಮೀನ ನನಗೆ ಹದಿನೈದು ದಿನಗಳ ಹಿಂದೆ ಈ ಊರಿಗೆ, ಬರಲು ಕಾಗದ ಬರೆದಿದ್ದಳು" ಅಜ್ಜಿಯ ಅಳು ಜೋರಾಯಿತು.

ಶ್ರೀಕಂಠ ನಿಟ್ಟುಸಿರು ಚೆಲ್ಲಿದನು.

ರೇವತಿ "ಶ್ರೀಕಂಠ..... ಮೀನ ಸತ್ತಿದ್ದು ಯಾವಾಗ?"

"ಇವತ್ತಿಗೆ ಆರು ದಿನಗಳಾಯಿತು"

"ಏನಾಗಿತ್ತು ಅವಳಿಗೆ?"

"ಏನೂ ಆಗಿರಲಿಲ್ಲ."

ರೇವತಿ "ಏನೂ ಆಗದೆ ಅದು ಹೇಗೆ ಸತ್ತಳು ! ಪ್ಲೀಸ್..... ನನ್ನಿಂದ ಸಹಿಸಲು ಆಗುತ್ತಿಲ್ಲ. ಅದೇನು ಅಂತ ಹೇಳು........."

ಶ್ರೀಕಂಠ "ಅಕ್ಕ ಸತ್ತಿದ್ದಾಳೆ ಅಂದರೆ ನನಗೆ..... ನನಗೆ ಈಗಲೂ ಸಹ ನಂಬಿಕೆ ಬರುತ್ತಿಲ್ಲ. ಆದರೆ ಅವಳ ಹೆಣ ಈ ಊರಿನಿಂದ ಹೊರಗಿರೋ ಹುತ್ತದ ಹತ್ತಿರ ಬಿದ್ದಿತ್ತು!"

ಬೆಚ್ಚಿ ಬಿದ್ದಳು ರೇವತಿ !

ಹುತ್ತ....... ಸಂಪಿಗೆ ಪುರದ ಹುತ್ತ !

ಹತ್ತು ಅಡಿಗಳಿಗಿಂತಲೂ ಎತ್ತರಕ್ಕೆ ಬೆಳೆದಿರುವ ಮೂರು ಹುತ್ತಗಳು ಒಂದೇ ಕಡೆ ಸೇರಿದೆ.

ಪತ್ರಿಕೆಗಳಲ್ಲಿ ಸುದ್ದಿ ಓದಿದ್ದಳು !

ರಾಜ್ಯದಲ್ಲೇ ಇಂತಹ ದೊಡ್ಡ ಹುತ್ತ ಬೇರೆ ಎಲ್ಲೂ ಇಲ್ಲ ಎಂದು ಪತ್ರಿಕೆಯಲ್ಲಿ ಬಂದಿತ್ತು !

ಈಗ...... ಈಗ ಅಂತಹ ಆತ್ಮೀಯ ಗೆಳತಿ ಹುತ್ತದ ಹತ್ತಿರ ಸತ್ತು ಬಿದ್ದಿದ್ದಳು ಅನ್ನುತ್ತಿದ್ದಾನೆ.

ರೇವತಿ ಕಣ್ಣೀರನ್ನು ವರೆಸಿಕೊಂಡು "ಅಲ್ಲಿಗೆ ಮೀನ ಯಾಕೆ ಹೋಗಿದ್ದಳು?" ಎಂದಳು.

"ಅದೇ ಗೊತ್ತಿಲ್ಲ" "ಹೋಗುವಾಗ ನಿಮ್ಮಗ್ಯಾರಿಗೂ ಹೇಳಿರಲಿಲ್ಲವೆ?"

"ಇಲ್ಲ"

"ಅವಳಿಗೆ ಹಾವು ಕಚ್ಚಿದ್ದರಿಂದ ಸತ್ತಳೆ?"

ಇದನ್ನು ಕೇಳಿ ಅಜ್ಜಿ ಮತ್ತು ಶ್ರೀಕಂಠ ಭಯ, ಗಾಬರಿಯಿಂದ ಪರಸ್ಪರ ಮುಖ ನೋಡಿಕೊಂಡರು.

ಮುಖ ಭಯದಿಂದ ಬಿಳುಚಿಕೊಂಡಿದೆ.

ರೇವತಿಗೆ ಭಯದೊಂದಿಗೆ ಸಂದೇಹ ಬರುತ್ತಿದೆ. ಅಂತಹ ಭಯಾನಕ ಘಟನೆ ! ಇಲ್ಲಿ ಅದೇನು ನಡೆದಿದೆ ?

ಇವರೆಲ್ಲ ಹೇಳಲು ಹೆದರುತ್ತಿದ್ದಾರೆ !

ಬಾಗಿಲು ಬಡಿಯುತ್ತಿರುವ ಶಬ್ದ !

ಶ್ರೀಕಂಠ ಹೋಗಿ ಬಾಗಿಲನ್ನು ತೆಗೆದನು. ಬಂದವರು ಯಾರು ಎಂದು ಕುತೂಹಲದಿಂದ ನೋಡಿದಳು ರೇವತಿ !

ದೇವಸ್ಥಾನದ ಪೂಜಾರಿಯಂತೆ ಕಾಣುತ್ತಿದ್ದಾನೆ ! ಪಂಚೆ, ಶಲ್ಯ, ಭಂಗಿ, ಹಣೆಗೆ ವಿಭೂತಿ. ಕತ್ತಿನಲ್ಲಿ ರುದ್ರಾಕ್ಷಿ ಸರ ! ಹುಬ್ಬುಗಳ ನಡುವೆ ಕುಂಕುಮ, ಮುಖದಲ್ಲಿ ಗಾಂಭೀರ್ಯತೆ ಇದೆ.

ಶ್ರೀಕಂಠ ಅವರ ಹತ್ತಿರ ಹೋಗಿ ರೇವತಿಯ ಕಡೆ ಕೈ ತೋರಿಸುತ್ತಾ "ನನ್ನ ಅಕ್ಕನ ಗೆಳತಿ ಮೈಸೂರಿನವರು."

"ಏನಮ್ಮಾ ನಿನ್ನ ಹೆಸರು?........"

ರೇವತಿ ಪರಿಚಯ ಮಾಡಿಕೊಂಡಳು. ನಂತರ ಅವಳು "ನೀವು ಈ ಊರಿಗೆ ಬಂದು ಎಷ್ಟು ವರ್ಷಗಳಾಯಿತು?"

"ಕೇವಲ ಎರಡು ತಿಂಗಳು"

ಆಶ್ಚರ್ಯವಾಗುತ್ತಿದೆ ರೇವತಿಗೆ ! ತುಂಬು ಪ್ರಾಯದ ಈ ಯುವಕ ಈ ಹಳ್ಳಿಯಲ್ಲೇಕೆ ಪೂಜಾರಿ ಕೆಲಸ ಮಾಡಿಕೊಂಡಿದ್ದಾನೆ?

ರೇವತಿ "ಎರಡು ತಿಂಗಳಿಂದ ನೀವು ಇದೇ ಊರಿನಲ್ಲಿ ಇದ್ದೀರಾ? ನನ್ನ ಗೆಳತಿ ಹುತ್ತದ ಹತ್ತಿರ ಸತ್ತು ಬಿದ್ದಿದ್ದಳು ಅನ್ನುತ್ತಿದ್ದಾರೆ. ಅವಳು ಹೇಗೆ ಸತ್ತಳು? ಹುತ್ತದಲ್ಲಿದ್ದ ಹಾವು ಕಚ್ಚಿತೆ?"

ಅಜ್ಜಿ ಮೊಮ್ಮಗ ಭಯಗೊಂಡಿದ್ದಾರೆ.

ಆ ಪೂಜಾರಿ ಗಂಭೀರವಾಗಿ "ಮೀನ ಸತ್ತಿದ್ದು ಒಂದು ಹಾವಿನಿಂದ ಅಲ್ಲ ಕಣಮ್ಮ!"

"ಮತ್ತೇ... ಮತ್ತೇ?"

"ಹುತ್ತದಲ್ಲಿರುವ ಹಾವುಗಳೆಲ್ಲಾ ಇವಳ ಮೈತುಂಬಾ ಸುತ್ತಿಕೊಂಡಿದ್ದವು ! ಹತ್ತು ಜಾತಿಯ ಹತ್ತಾರು ವಿಷ ಸರ್ಪಗಳು ಇವಳ ದೇಹದಲ್ಲಿ ಸುತ್ತಿಕೊಂಡು ಒಂದು ಗಂಟೆಯ ಕಾಲ ಹರಿದಾಡಿತ್ತು !. ಯಾವ ಹಾವು ಕಚ್ಚಿತ್ತೊ...... ಹೇಗೆ ಸತ್ತಳೋ ಗೊತ್ತಿಲ್ಲ!?" ಎಂದನು ಆ ಯುವಕ ಪೂಜಾರಿ.

(ಮುಂದುವರೆಯುತ್ತದೆ)

ನಿರರ್ಥಕ (ಶೋಭಾನೆ ರಾಗ)

ಕಟ್ಟನಿಂತಿದ್ದ ಮುಟ್ಟುಹೋಗಿ ಮೈನೆರೆದೆ ನೋಡವ್ವ,
ಅದ್ ಮುಟ್ಟುಬ್ಯಾಡ ಇದ್ ಮುಟ್ಟುಬ್ಯಾಡಂತ ಮಾತಿ ಮಾತಿಗೂ
ಮೈಲಿಗೆಯ ಪ್ರಶ್ನೆಯನ್ನೆತ್ತಿ ಮೂಲೆಗೆ ಕೂರಿಸಿದೊ ನೋಡವ್ವ
ಮತ್ತೆ ಮುಟ್ಟುಂತ್ತೇಳಿ ಮಲ್ಲಿಗೆ ಹೂ ಮುಡಿಸಿ, ಹೊಸ ಸೀರೆ ಉಡಿಸಿ,
ನಾ ಮೈ ನೆರದೆ ಅಂತ ಜಗಕ್ಕೆ ಸಾರಿ ಸಾರಿ ಹೇಳಿದೊ,
ಐದಿನಂತ ಲಂಗ ಹಾಕಿ ಅಂಗಳಕ್ಕೆ ಆಡಿಕೆ ಹೋದೆ ನೋಡವ್ವ
ಕಣ್ಣ್ ಕೆಕ್ಕರಿಸಿ ಹಲ್ಲ್ ಮಸೇದ್ ಒಳಗೆಳೆದ್ ತಂದ್ ಲಂಗ ಬಿಚ್ಚಿಸಿ
ಸೀರೆ ಉಡಿಸಿ, ಕೈಗೆ ಬಳೆ ತೊಡಿಸಿದೋ, ಹಣೆಗೆ ಕುಂಕುಮ ಇಟ್ಟ್
ಸನ್ನನಾಗಲೇ ದೊಡ್ಡವಳನ್ನಾಗಿ ಮಾಡಿದೋ ನೋಡವ್ವ
ಪಾಠ ಓದಿಕೆ ಅಣ್ಣನೊಟ್ಟಿಗೆ ಪುಸ್ತಕ ಹಿಡ್ಕಂಡ್ ಕುದ್ದೆ ನೋಡವ್ವಾ
ಪಾಠ ಗೀಠ ಓದಿಕೆ ಕುದ್ದರೆ ನಾಳೆ ಗಂಡಂಗೆ ಮಾಡಿ ಹಾಕುದು ಯಾರೆಂದ್
ಹೆದ್‌ರಿಸಿ ಕಸ ಮುಸರೆ ತಿಕ್ಕಂಡ್ ಮನೆಯೊಳಗೆ ಇರವ್ಯಾಂತೆಳ್ದೋ ನೋಡವ್ವಾ
ಇದನ್ನೊಡಿ ಅಣ್ಣಯ್ಯ ಒಳಗೊಳಗೆ ಮುಸಿ ಮುಸಿತ ನೆಗೆಯಾಡಿದನವ್ವ,
ಹದಿನಾಲ್ಕಕ್ಕೆ ನಂಗೆ ಹೇಳದೆ ಕೇಳದೆ ಶೀಲ ಕೆಟ್ಟವನೊಟ್ಟಿಗೆ ಮದುವೆ ಮಾಡ್ಸಿದರವ್ವ
ನಂಗೆ ಮಾತ್ರ ಸತಿ ಸಾವಿತ್ರಿ ತರ ಇರಕುಂತೇಳಿ ಉಪದೇಶ ಮಾಡಿದೋ ನೋಡವ್ವ,
ಹದಿನೈದಕ್ಕೆ ಬಸಿರ್‌ಹೊತ್ತ್, ಉಸ್ಸೆಂದ್ ಹೆಣ್ಣ್‌ಕೂಸ್ ಹೆತ್ತೆ ನೋಡವ್ವ,
ಛೇ-ಛೀ-ಚೀ ಹೆಣ್ಣ್ ಹೆತ್ತ್ ಬುಡ್ತಲ್ಲ, ಶನಿ ಪಾಪಿತ್ತೇಳಿ ಮೂದಲಿಸಿದೋ ನೋಡವ್ವ,
ಮತ್ತೆ ಹದಿನಾರಕ್ಕೆ ಒಲ್ಲದ ಮನಸ್ಸಿಂದ ಒತ್ತಾಯಕ್ಕೆ ಬಸಿರಾದೆ ನೋಡವ್ವ,
ಈ ಸಲ ಮಾತ್ರ ಗಂಡ್ಮೂಸು ಹೆತ್ತೆ ನೋಡವ್ವ, ಹೆಣ್ಣಾಗಿ ಹುಟ್ಟಿದಕೆ
ಸಾರ್ಥಕ ಆತ್‌ತ್ತೇಳಿದರವ್ವ, ನಂಗೆ ಮಾತ್ರ ನಿರರ್ಥಕ ಎನಿಸಿತ್ ನೋಡವ್ವ

ನಂಗಾರ್ ತುಳಸಿ ಮೋಹನ್
ಜಿಲ್ಲಾ ಆಸ್ಪತ್ರೆ, ಮಂಡ್ಯ.

ನೆಟ್ಟ ಬೀಜವೂ ಹಠಮಾರಿ ಹೆಣ್ಣುಗಳು

ನೆಟ್ಟಿರುವರೊಂದು ಬೀಜ ||ನೆಟ್ಟ||
ಈ ಹಠಮಾರಿ ಹೆಣ್ಣುಗಳು
ನೆಟ್ಟಿರುವರೊಂದು ಬೀಜ
ಈ ಹಠಮಾರಿ ಹೆಣ್ಣುಗಳು ।
ಮೊಳಕೆಯೊಡೆದು ಸಸಿ ಮೂಡಿದೆ
ಬಯಸದೆ ನೀರು ಗೊಬ್ಬರ ||
ಮತ್ತೆ ಪ್ರೀತಿಯ ಉಪಚಾರ, ಸಹಕಾರ
ನೆಟ್ಟಿರುವರೊಂದು ಬೀಜ
ಈ ಹಠಮಾರಿ ಹೆಣ್ಣುಗಳು

ಬೇರಿಳಿಯಬೇಕು ಪಾತಾಳಕೆ
ಮರ ಬೇಕು ಮುಗಿಲೆತ್ತರಕೆ
ಕೊಂಬೆ ಬೆಳೆದು ಟಿಸಿಲೊಡೆದು
ಬಿಡಬೇಕು ಎಲೆ ಹೂ, ಹಣ್ಣು
ಚಪ್ಪರವಾಗಬೇಕು ಭೂಮಿಯಗಲಕೆ
ಅಚಲ ಅಮರವಾಗಬೇಕು ಆಲದಂತೆ
ನೆಟ್ಟಿರುವರೊಂದು ಬೀಜ
ಈ ಹಠಮಾರಿ ಹೆಣ್ಣುಗಳು

ನೆರಳಾಗಲಿ, ನೆರಳಾಗಲಿ ಬೇಗೆಯ ಬೆಂದವಗೆ
ದಾರಿ ಕಾಣದೆ ನೊಂದವಗೆ ।
ಮುಂದೆ ಬೆಳಕಾಗಲಿ ಪ್ರಗತಿಯ ಹಾದಿಯಲಿ
ನನಗಲ್ಲ ನಿನಗೆ ಮಾತ್ರವಲ್ಲ ಎಲ್ಲರಿಗೂ
ಜೀವಿಗಳೆಲ್ಲರಿಗೂ - ಇದೇ ಸಂಘಟನೆ
ಇದೇ ಸಂಘಟನೆ ಈ ಹಠಮಾರಿ
ಹೆಣ್ಣುಗಳು ನೆಟ್ಟ ಬೀಜದ ಗುಟ್ಟು

ಗೌಡ ಸಂಸ್ಕೃತಿ : (ಹಿಂದಿನ ಸಂಚಿಕೆಯಿಂದ....)

ಸತ್ತವರ ಶವಸಂಸ್ಕಾರ ಮತ್ತು ಅಂತಿಮ ಕ್ರಿಯೆ.

ಕೊಳ್ಳಿ ಕೂಡಿಸುವ ಕ್ರಮ :

ಮೃತರ ಶರೀರವನ್ನು ಶಾಸ್ತ್ರೋಕ್ತವಾಗಿ ದಹಿಸಿದ ನಂತರ, ಮರುದಿವಸ ಹೊತ್ತದೆ ಬಾಕಿ ಇರುವ ಕಟ್ಟಿಗೆಗಳನ್ನು ಒಟ್ಟುಗೂಡಿಸಿ ಪುನಃ ಉರಿಸುವ ಕ್ರಮಕ್ಕೆ ಕೊಳ್ಳಿ ಕೂಡಿಸುವುದು ಎಂದು ಹೇಳುವರು. ಹೊತ್ತದೆ ಬಾಕಿ ಇರುವ ಕಟ್ಟಿಗೆಗಳನ್ನು ಒಟ್ಟುಗೂಡಿಸಿ ಅಲ್ಲಿಗೆ ಹಾಲು ತುಪ್ಪ ಬಿಟ್ಟು ಪುನಃ ಬೆಂಕಿ ಹಚ್ಚಿ ಪೂರ್ಣ ಉರಿದ ನಂತರ ಊರವರು, ಮನೆಯವರು ಸ್ನಾನ ಮಾಡಿ ಮನೆಗೆ ಬರುವುದು.

ಮೂರರ ಶುದ್ಧ (ಬೂದಿ ಮುಚ್ಚುವುದು) : ಮೃತರ ಶವಸಂಸ್ಕಾರ ನಡೆದ ಮೂರನೇಯ ದಿನ ಬೂದಿ ಮುಚ್ಚುವ ಕ್ರಮ ಇರುವುದು. ಈ ದಿನ ಮಡಿವಾಳನನ್ನು ಕರೆಯಿಸಿಕೊಳ್ಳಬೇಕು. ಮಡಿವಾಳನು ತೆಂಗಿನ ನೀರನ್ನು ತುಳಸಿ ಕೊಡಿಯಿಂದ ಬೂದಿಗೆ ಚಿಮುಕಿಸಿ ಶವದ ಹಣೆಯಲ್ಲಿಟ್ಟಿದ್ದ ಹಣ ಅಥವಾ ಚಿನ್ನವನ್ನು ಹುಡುಕಿ ತೆಗೆದುಕೊಳ್ಳುತ್ತಾನೆ. ಅನಂತರ ಮೃತರ ಬೂದಿಯನ್ನು ಹರಿಯುವ ನದಿಗೆ ಬಿಡುವುದಾದರೆ ಮೊದಲು ಕಾಲು ಭಾಗದಿಂದ ನಂತರ ಮಧ್ಯಭಾಗದಿಂದ ಕೊನೆಗೆ ತಲೆ ಭಾಗದಿಂದ ಸ್ವಲ್ಪ ಸ್ವಲ್ಪ ಬೂದಿಯನ್ನು ತೆಗೆದು ಬಾಳೆ ಎಲೆಯಲ್ಲಿ ಕಟ್ಟಿ ಹೊಸ ಮಣ್ಣಿನ ಮಡೆಯಲ್ಲಿ ತೆಗೆದಿಡುವರು. ನಂತರ ಬೂದಿಯನ್ನು ಕಾಲುಭಾಗ ಬೇರೆ, ಮಧ್ಯಭಾಗ ಬೇರೆ, ತಲೆಯ ಭಾಗ ಬೇರೆ ಬೇರೆ ಮಾಡಿ ಮಧ್ಯದಲ್ಲಿ ಒಂದು ಗುಂಡಿಯನ್ನು ತೆಗೆದು ಮೊದಲು ಕಾಲುಭಾಗದ ಬೂದಿಯನ್ನೂ, ನಂತರ ಮಧ್ಯ ಭಾಗದ ಬೂದಿಯನ್ನು, ಕೊನೆಗೆ ತಲೆಯ ಭಾಗದ ಬೂದಿಯನ್ನು ಹಾಕಿ ಮುಚ್ಚಿ ದೂಪೆ ಮೆತ್ತುವುದು. ದೂಪೆಗೆ ಬಡಗು ಭಾಗದಲ್ಲಿ (ಉತ್ತರ) ಮೆಟ್ಟಲುಗಳನ್ನು ಮಾಡಿರಬೇಕು. ದೂಪೆಯ ಸುತ್ತಲೂ ಸರಳೆ ಸೊಪ್ಪನ್ನು ಕುತ್ತಿ ಸ್ನಾನ ಮಾಡಿ ಬರುವುದು. ಇಲ್ಲಿಗೆ ಬೂದಿ ಮುಚ್ಚುವ ಕ್ರಮ ಮುಗಿಯಿತು.

ನೀರು ನೆರಳಿಗೆ ಇಡುವ ಕ್ರಮ : ಶುದ್ಧ ದಿನದ ಮೊದಲ ರಾತ್ರಿ ಎಲ್ಲರು ಭೋಜನ ಮುಗಿಸಿ ಮೃತರು ಸತ್ತ ಸ್ಥಳವನ್ನು ಶುಚಿಗೊಳಿಸಬೇಕು. ಅಲ್ಲಿ ಗಾಳಿಸಿ, ಜಾಡಿಸಿ ನಯವಾದ ಬೂದಿಯನ್ನು ಇಲ್ಲವೆ ಅಕ್ಕಿಯ ಪುಡಿಯನ್ನು ಎರಡು ಅಡಿ ಅಗಲದಲ್ಲಿ ಎಲ್ಲೂ ಕಲೆಬಾರದ ರೀತಿಯಲ್ಲಿ ಹರಡಬೇಕು. ಆ ಬೂದಿಯ ಮೇಲೆ ಒಂದುಚೆಂಬು ನೀರು ಮತ್ತು ಒಂದು ಎಳನೀರನ್ನು (ಮೇಲ್ಭಾಗ ಮಟ್ಟವಾಗಿ ಕತ್ತರಿಸಿ) ಒಂದಕ್ಕೊಂದು ಅಡಿ ಅಂತರದಲ್ಲಿ ಇಡಬೇಕು. ಮೇಲಿನಿಂದ ಒಂದು ನೂಲಿನಲ್ಲಿ ಮಸಿ ತುಂಡನ್ನು ಕಟ್ಟಿ ನೀರಿಗೆ ಮುಟ್ಟುವಂತೆಯೂ, ಇನ್ನೊಂದು ನೂಲಿನಲ್ಲಿ ಅರಸಿಣದ ತುಂಡನ್ನು ಕಟ್ಟಿ ಎಳನೀರಿಗೆ ಮುಟ್ಟುವಂತೆಯೂ ಇಳಿಬಿಡುವುದು. ಅನಂತರ ಒಂದು ಕುಕ್ಕೆಯಲ್ಲಿ ಮೂರು ಸೇರು ಅಕ್ಕಿ, ಒಂದು ತೆಂಗಿನ ಕಾಯಿ, ಅಡಿಗೆಗೆ ಉಪಯೋಗಿಸುವ ಎಲ್ಲಾ ಮಸಾಲೆ ಸಾಮಾನುಗಳು (ಬೆಳ್ಳುಳ್ಳಿ ಮತ್ತು ಸಾಸಿವೆಯನ್ನು ಬಿಟ್ಟು) ಸ್ವಲ್ಪ ಸ್ವಲ್ಪ ಬಾಳೆ ಎಲೆಯಲ್ಲಿ ಕಟ್ಟಿಡಬೇಕು. ಒಂದು ಕುಂಬಳಕಾಯಿ, ಒಂದು ಮರ ಬಾಳೆಕಾಯಿ ಗೊನೆ, ಮುಂತಾದವುಗಳನ್ನು ಎಳನೀರು ಇಟ್ಟ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇಡಬೇಕು, ಕೆಲವರು ಮದ್ಯವನ್ನು ಕೂಡ ಇಡುವರು. ಇದಾದ ನಂತರ ಸುತ್ತು ಒಂದು ತೆರೆಮರೆ ಕಟ್ಟಿ, ಬೆಕ್ಕು, ನಾಯಿ, ಮನುಷ್ಯರಾರು ಹೋಗದಂತೆ ಏರ್ಪಡಿಸಿ ಆ ಕೋಣೆಯಲ್ಲಿ ಯಾವ ಬೆಳಕನ್ನು ಇಡದೆ, ಶಬ್ದವನ್ನೂ ಮಾಡದೆ ಜನರಾರು ತಿರುಗಾಡದಂತೆ ವ್ಯವಸ್ಥೆಯಾಗಿರಬೇಕು. ಎಲ್ಲರೂ ಕೋಣೆಯಿಂದ ಹೊರಬಂದ ನಂತರ, ಕುಂಟಿಗೆ ನಿಂತವನು ಒಂದು ಚೆಂಬಿನಲ್ಲಿ ನೀರು ತೆಗೆದು ಕೊಂಡು ಮನೆಯ ಮೆಟ್ಟು ಕಲ್ಲಿನಲ್ಲಿ ನಿಂತು ಸ್ವಲ್ಪ ನೀರನ್ನು ಸುತ್ತಲೂ ಚಿಮುಕಿಸಿ ಹಿಡಿದು ತನ್ನ ಪ್ರೀತಿಯ ಹೆಸರಿನಿಂದಲೇ ಕರೆದು "ಬಾಯಾರಿಕೆಗೆ ನಿನಗೆ ನೀರು ನೆರಳಿಗೆ ಇಟ್ಟಿದ್ದೇವೆ ಬಂದು ಹೋಗು" ಎಂದು ಗಟ್ಟಿಯಾಗಿ ಮೂರು ಬಾರಿ ಕೂಗಿ ಹೇಳಬೇಕು. ನಂತರ ಎಲ್ಲರೂ ಮಲಗುವುದು.

ಬೆಳಗಿನ ಜಾವ ನಾಲ್ಕು ಗಂಟೆಗೆ ಮುಂಚಿತವಾಗಿ ಎದ್ದು ಬಂದು ನೀರು ನೆರಳಿಗೆ ಇಟ್ಟಲ್ಲಿ ನೋಡುವುದು. ನೀರು ಯಾ ಎಳನೀರಿನ ಮಟ್ಟದಲ್ಲಿ ವ್ಯತ್ಯಾಸ ಕಂಡು ಬಂದರೆ ಅಥವಾ ಕೆಲವೊಮ್ಮೆ ಅಕ್ಕಿ ಹುಡಿ ಯಾ ಬೂದಿ ಚೆಲ್ಲಿದಲ್ಲಿ ಚಿಕ್ಕ ಚಿಕ್ಕ ಹೆಜ್ಜೆಯ ಗುರುತುಗಳು ಕಂಡು ಬಂದರೆ ಮೃತರ ಕೊಲೆ ಬಂದಿದೆಯೆಂಬ ನಂಬಿಕೆ. ಆ ನಂತರ ಕುಂಟಿಗೆ ನಿಂತವನು ಮನೆಯ ಮೆಟ್ಟುಕಲ್ಲಿನ ಮೇಲೆ ಕುಂಬಳಕಾಯಿ ಯನ್ನಿಟ್ಟು ಎಡಕೈಯಲ್ಲಿ ಕತ್ತಿಯಿಂದ ಕಡಿದು ಎರಡು ಭಾಗಮಾಡಿ, ಒಂದು ಭಾಗವನ್ನು ಪುನಃ ನಾಲ್ಕು ಭಾಗಗಳಾಗಿ ಮಾಡಿ ಒಂದು ಭಾಗ ಮಡಿವಾಳನಿಗೂ ಇನ್ನೊಂದು ಭಾಗ ಕ್ಷೌರಿಕನಿಗೂ ತೆಗೆದಿಡಬೇಕು. ಹಾಗೆಯೇ ಒಂದೊಂದು ಚಿಪ್ಪು ಬಾಳೆಕಾಯಿಯನ್ನು ಅವರಿಬ್ಬರಿಗ ತೆಗೆದಿಡಬೇಕು. ಉಳಿದೆಲ್ಲಾ ಅಡಿಗೆ ಸಾಮಾನುಗಳನ್ನು ಅಡಿಗೆ ಮಾಡುವುದರ ಜೊತೆಗೆ ಸೇರಿಸಿಕೊಳ್ಳುವುದು.

ಸರಕು ಕಳುಹಿಸುವ ಕ್ರಮ : ಮೃತಪಟ್ಟ ಮನೆಯವರಿಗೆ ಮೃತಪಟ್ಟವರ ಹೆಸರಿನಲ್ಲಿ ನಡೆಯುವ ಶುದ್ಧ ಉತ್ತರ ಕ್ರಿಯೆಗಳಲ್ಲಿ ಖರ್ಚು ವೆಚ್ಚಗಳಲ್ಲಿ ಹೆಚ್ಚಿನ ತ್ರಾಸದಾಯಕವಾಗದಿರಲಿ ಎಂದು ಸಹಾಯ ರೂಪದಲ್ಲಿ ಕಳುಹಿಸುವ ಒಂದು ಕಾಣಿಕೆ. "ಯಮನ ಬಿಟ್ಟಿ ಕೆಲಸ ಎಲ್ಲರೂ ಸೇರಿ ಮಾಡಿ" ಎಂದು ಹಿರಿಯರು ಹೇಳಿದ ಮಾತಿಗೆ ಇದು ಸಾಕ್ಷಿ. ಸರಕಿನಲ್ಲಿ ಬೆಳ್ತಕ್ಕಿ 3 ರಿಂದ 5 ಸೇರು, ಕುಸುಲಕ್ಕಿ 3 ರಿಂದ 5ಸೇರು, ತೆಂಗಿನಕಾಯಿ 3 ರಿಂದ 5, ಬಾಳೆಗೊನೆ, ಹುರುಳಿ, ಬೂದು ಕುಂಬಳಕಾಯಿ, ಅಕ್ಕಿಹುಡಿ, ಈರುಳ್ಳಿ ಕೊತ್ತಂಬರಿ ಎಲೆ ಅಡಿಕೆ ಮುಂತಾದ (ಸಾಸಿವೆ, ಬೆಳ್ಳುಳ್ಳಿ ಬಿಟ್ಟು) ಎಲ್ಲಾ ವಸ್ತುಗಳನ್ನು ಕೊಟ್ಟ ಹೆಣ್ಣು ಮಕ್ಕಳು, ಸಮೀಪದ ಬಂಧುಗಳು ನೆರೆಕರೆಯವರು ಈ ಕ್ರಮವನ್ನು ಹೆಚ್ಚಾಗಿ ಪಾಲಿಸುವರು.

ದೂಪೆಯ ಅಲಂಕಾರ : ಮೂರರ ಶುದ್ಧದಂದು ದೂಪೆಯ ಸುತ್ತ ಸುತ್ತಿದ ಸರಳೆ ಸೊಪ್ಪನ್ನು ತೆಗೆದು ಸುತ್ತಲೂ ಶುಚಿಗೊಳಿಸಿ ಪುನಃ ಬೇರೆ ಸರಳೆ ಸೊಪ್ಪು ಕುತ್ತಿ, ದೂಪೆಯ ನಾಲ್ಕು ಮೂಲೆಗಳಿಗೆ ಒಂದೊಂದು ಚಿಕ್ಕ ನಾಲ್ಕು ಕಂಬಗಳನ್ನು ನೆಟ್ಟು ಅದಕ್ಕೆ ನಾಲ್ಕು ಬಾಳೆಯ ಕಂದಾಗಳನ್ನು ಕಟ್ಟಿ ತಳಿರಾತೋರಣದಿಂದ ಅಲಂಕರಿಸುವುದು. ದೂಪೆಯ ಮೆಟ್ಟಲು ಇರುವ ಬಡಗು ಭಾಗದಲ್ಲಿ ತೆರೆದುಕೊಂಡಿರುವಂತೆ ಬಾಗಿಲನ್ನು ಇಡುವುದು. ನಂತರ ಮೂರು

ನಾಲ್ಕು ಅಡಿಗಳಷ್ಟು ಅಂತರ ಬಿಟ್ಟು ಇನ್ನೊಂದು ಬೇಲಿ ಮಾಡುವುದು. ಇದಕ್ಕೂ ಮಾವಿನ ಸೊಪ್ಪಿನಿಂದ ತೋರಣ ಕಟ್ಟುವುದು. ಒಳ ಅಂಕಣವು ಕುಟುಂಬದವರೆಗೆ ಮಾತ್ರ ದೂಪೆಗೆ ಸುತ್ತು ಬರುವುದಕ್ಕೆ ಇರುವ ಸ್ಥಳ. ಹೊರ ಅಂಕಣವು ಕೊಟ್ಟ ಹೆಣ್ಣುಗಳು, ಊರವರು, ನೆಂಟರಿಷ್ಟರು ಮತ್ತು ಎಲ್ಲಾ ಇತರರಿಗೂ ಇರುವ ಅಂಕಣ. ಹೊರ ಅಂಕಣಕ್ಕೂ ನೇರ ಬಾಗಿಲು ಇರಬೇಕು. ಒಳ ಅಂಕಣಕ್ಕೆ ಕುಟುಂಬದವರಲ್ಲದೆ ಇತರರು ಬರುವಂತಿಲ್ಲ.

ಜಾಲಗೂಡು ಮಾಡುವುದು : ಜಾಲಗೂಡು ಎಂದರೆ ದೂಪೆಗೆ ಪೊಂಗಾರೆ ಮರದಿಂದ ಸತ್ತವರಿಗಾಗಿ ಮಾಡುವ ಒಂದು ರೀತಿಯ ಮನೆ. ದೂಪೆಯ ನಾಲ್ಕು ಭಾಗಗಳಿಗೆ ಪೊಂಗಾರೆಯ ನಾಲ್ಕು ಕಂಬಗಳನ್ನು ನೆಟ್ಟು ಮೇಲ್ಭಾಗ ಚೌಕಟ್ಟಿನಿಂದ ಕೂಡಿಸಿ ಅದೇ ಮರದ ಗಳಗಳನ್ನು ಮಾಡಿ ಅದರದೇ ಹಲಗೆಯನ್ನು ಮಾಡಿನ ಹಂಚಿನಂತೆ ಮರದ ಆಣಿಗಳಿಂದಲೇ ಹೊಡೆಯುತ್ತಾರೆ. ಮೇಲಿನಲ್ಲಿ ಒಂದು ಮುಗುಳಿ ಮಾಡಿಟ್ಟು ಒಂದು ಪತಾಕೆ (ಬಾವುಟ) ಹಾರಿಸುತ್ತಾರೆ. ಬಡಗು ಭಾಗವನ್ನು ಬಿಟ್ಟು ಉಳಿದ ಭಾಗಕ್ಕೆಲ್ಲಾ ತಳಿರುತೋರಣಗಳಿಂದಲೂ, ಬಣ್ಣದ ಕಾಗದಗಳಿಂದಲೂ ಅಲಂಕರಿಸಿ ಅರಸಿನ ಬಣ್ಣ ಹಚ್ಚಿ ದೂಪೆಗೆ ಸರಿಯಾಗಿ ನಿಲ್ಲಿಸಿರಬೇಕು. ಇದನ್ನು ಹೆಚ್ಚಿನ ಭಾಗ ಬಡಗಿಗಳಿಂದಲೇ ಮಾಡಿಸುತ್ತಾರೆ. ಇದನ್ನು ಹಿಂಗಾರ ಹೂವಿನಿಂದ ಅಲಂಕರಿಸುತ್ತಾರೆ. ನೋಡುವುದಕ್ಕೆ ಇದು ಬಹಳ ಸುಂದರವಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕ್ರಮವು ಹೆಚ್ಚು ಪ್ರಚಲಿತವಾಗಿರುತ್ತದೆ.

– ಮುಂದುವರೆಯುತ್ತದೆ

ಬಾಳ್ ಪದ (ಬಾಳ್ ಪಾಟ್)

ಬಾಳಿ ಬಾಳಿ ನಮ್ಮ ಮಕ್ಕಳೆ, ಕಾವೇರಮ್ಮನ ಮಡ್‌ಲಿ
ಬಾಳಿ ಬಾಳಿ ನಮ್ಮ ಮಕ್ಕಳೆ, ಇಗ್ಗುತಪ್ಪನ ನೆರಳ್‌ಲಿ
ವೆಂಕಟರಮಣನ ಅನುಗ್ರಹ ನಿಮಿಗುಟ್ಟು, ಒಟ್ಟೀಗೆ ಪದ್ಮಾವತಿ ದಯವುಟ್ಟು,
ಭಗವತಿ, ಚಾಮುಂಡಿ ಕರುಣೆಯು ನಿಮಿಗುಟ್ಟು, ಓಂಕಾರೇಶ್ವರನ ಕೃಪೆವುಟ್ಟು ||ಬಾಳಿ ಬಾಳಿ||
ನಾಲ್‌ಬೆಟ್ಟದ ಕೋಡ್‌ನ ಮೇಲೆ, ನಿತ್ತುಟು ನಮ್ಮ ಕೊಡ್‌ಗ್ ದೇಶ
ಜಮ್ಮದ ಭೂಮಿ ನಮ್ಮದ್ ಮಕ್ಕಳೆ, ಚಿನ್ನದ ಮಣ್ಣ್ ನಮ್ಮದ್
ಗುರು ಕಾರೋಣರ ಆಶೀರ್ವಾದ ನಿಮಿಗುಟ್ಟು, ಹಿರಿಯರ ಮಾತ್‌ನ ಮೀರ್‌ಬಡಿ
ನಾಡ್‌ನು ನುಡಿನು ಮರಿಬಡಿ ಮಕ್ಕಳೆ, ನಿಮ್ಮ ಹೆತ್ತವ್ವ ನೋಡಲ್ ತಂಪಿರ್‌ಲಿ ||ಬಾಳಿ ಬಾಳಿ||
ಹಬ್ಬಕ್ಕೆ ಹರಿಸೇವೆಗೆ ಸೇರೋಕು ಮಕ್ಕಳೆ, ದೆವ್ವ ದೇವ್ರುನ ಮರಿಬಡಿ
ಹುಟ್ಟಿದ ಮಣ್ಣ್‌ನ ಮರಿಬಡಿ ಮಕ್ಕಳೆ, ಕೊಡ್‌ಗ್‌ಗೆ ಕೀರ್ತಿ ನೀವು ತರೋಕು
ನಂದಾ ದೀಪ ಬೆಳ್‌ಗಿದಂಗೆ ಬೆಳ್‌ಗಿ, ಬಾಳೆಗಿಡ ಬೆಳ್ದಂಗೆ ಬೆಳಿಯನಿ
ವಿದ್ಯಾಬುದ್ಧಿ ಕಲಿಯಕ್ಕು ಮಕ್ಕಳೆ, ಮಣ್ಣ್‌ನ ಮರ್ಯಾದೆ ಕಾಪಾಡೋಕು ||ಬಾಳಿ ಬಾಳಿ||
ಬೆಳಿಗೆದ್ದ್ ಸ್ವಾಮಿನ ನೆನೆಯಕು ಮಕ್ಕಳೆ, ಇಗ್ಗುತಪ್ಪ ಕಾವೇರಮ್ಮನ ಮರಿಬಡಿ
ಎಲ್ಲೇ ಇದ್ದರೂ ಹೆಂಗೇ ಇದ್ದರೂ, ಗುರ್‌ಕಾರೋಣರ ನೀವು ನೆನೆಯೊಕು
ಹಬ್ಬ, ಹುಣ್ಣಿಮೆ ಮಾಡೋಕು ಮಕ್ಕಳೆ, ಕೈಲು ಮೂಹುರ್ತ ಹುತ್ತರಿ ಆಚ್‌ರ್‌ಸೋಕು
ಸಂಕ್ರಾಂತಿ ಹಬ್ಬನು ಗೊತ್ತಿರಕು, ಮಕ್ಕಳೆ, ಕಿಡ್ಡಾಸ ಹಬ್ಬನ ಮರಿಬಡಿ ||ಬಾಳಿ ಬಾಳಿ||
ಸಂಪ್ರದಾಯನ ಬುಡ್‌ಬಡಿ ಮಕ್ಕಳೆ, ಹಾಡ್ ಹಸೆನ ಮರಿಬಡಿ
ನೆಂಟ್‌ರ್ ಮನೆಗೆ ಬಾಕನ ಮಕ್ಕಳೆ, ಒಂದು ಚೊಂಬುನೀರ್ ನೀವು ಕೊಡೋಕು
ಕಾಲ್ ಹಿಡ್ದ್ ಗೌರವ ಕೊಡೊಕು, ಊಟ ಉಪಚಾರ ನೀಡೋಕು
ನೆಂಟ್ರ್‌ನ ವೇಷಲಿ ಬಂದವೆ ದೇವ್ರುಗ, ಅವರ ಮನ್ಸ್‌ನ ನೊಯಿಸ್‌ಬಡಿ ||ಬಾಳಿ ಬಾಳಿ||
ಹಿರಿಯರ ಪಾಡ್ಡನ ಕಲಿಯಕು ಮಕ್ಕಳೆ, ಶೋಭಾನೆ ಹಾಡ್‌ನ ಹಾಡೋಕು,
ಹುತ್ತರಿ ಕೋಲಾಟ ಆಡೋಕು ಮಕ್ಕಳೆ ಜಾನಪದ ನೃತ್ಯಮಾಡೋಕು
ಯುಗಾದಿ ಹಬ್ಬಲಿ ಬೇವು ಬೆಲ್ಲ, ಒಟ್ಟಿಗೆ ನೀವು ತಿಂದಂಗೆ
ಒಬ್ಬರಿಗೊಬ್ಬ ಸಿಹಿ ಕಹಿ ಹಂಚಿಕಂಡ್ ಒಟ್ಟೀಗೆ ನೀವು ಬಾಳೋಕು ||ಬಾಳಿ ಬಾಳಿ||
ನಮ್ಮ ಸಂಘ ಸಂಸ್ಥೆನ ಬೆಳ್ಸೊಕು ಮಕ್ಕಳೆ, ದಾನ ಧರ್ಮನ ಮಾಡೋಕು
ಇಂದ್ ನೀವು ಮಾಡ್‌ದ ದಾನ, ನಾಳೆ ಕಾದದೆ ನಿಮ್ಮ ಮಕ್ಕಳ
ಎಲ್ಲೆ ಹೋದರು ಬಾಳಿ ಮಕ್ಕಳೆ, ನಮ್ಮತನನ ಮರಿಬಡಿ
ಬಾಳಿ ಬಾಳಿ ಬಾಳಿ ಮಕ್ಕಳೆ, ಕಾವೇರಮ್ಮ ಕಾಪಾಡಲಿ ||ಬಾಳಿ ಬಾಳಿ||

ಬಿಟ್ಟೀರ ಚೋಂದಮ್ಮ ಶಂಭು

ಮೇಪತ ಹೈದ

ನಮ್ಮಲ್ಲಿತ್ತ್ ಮೇಪತ ಹೈದ
ನೋಡಿಕೆ ಭಾರಿ ಸೋಕುನ ಹೈದ
ಬುದ್ದಿಲಿ ಮಾತ್ರ ಮೈಂದ ಹೈದ
ದನಗಳ ಹೊಡ್ಕಂಡ್ ಗುಡ್ಡೆಗೆ ಹೋದು
ಹೋಕನ ಅಡ್ಕೆನ ಹೆಕ್ಕಂಡ್ ಹೋದು
ಗುಡ್ಡೆನ ಕರೆನ ಅಂಗಡಿಗೆ ಹೋದು
ಚಾಯ, ಕಾಫಿ, ಕುಡ್ಕಂಡ್ ಇರ್ದು ||
ಓಂಬತ್ತ್ ಬಾಕನ ದನಗಂಳು ಇಲ್ಲೆ
ಕೇಳು ಅಂವ ಹೇಳ್ದ್ ಉಮ್ಮಪ್ಪ ಗೊತ್ತಿಲ್ಲೆ
ದನಂಗ ಎಲ್ಲ ಮೇದ್‌ಕಂಡ್ ಇದ್ದೊ
ಮರದ ಬುಡಲಿ ನಾ ಕುದ್ದ್‌ಕಂಡ್ ಇದ್ದೆ ||
ಬೀಜದ ಸಮಯಲಿ ಹೆಕ್ಕಿಕೆ ಹೋದು
ಕೊಡಿಗೆ ಹತ್ತಿದ್ ಗೆಲ್ಲ್‌ನೆ ಕಡಿಯೊದು
ಕರೆಲಿ ಇದ್ದ ಬಾಳೆ ಮರ ಕಮ್ಮು ಹತ್ತುದು
ಬೆಂಡನ ಕಾಯಿಗ ಬಿಡ್‌ಂಗಿಸಿ ಇಡ್ದು||
ಕರುಗಳ ಮೇಯ್ಸಿಕೆ ತೋಟಕೆ ಹೋದು
ಕಮ್ಮುನ ದೈನ ಚಿರಿಗೆ ಕಡಿಯೊದು
ಕೇಳಿರೆ ಅಂವ ಸುಳ್ಳ್‌ನೆ ಹೇಳ್ದು
ಮತ್ತೊಮ್ಮೆ ಹೇಳ್ದು, ಸುಮ್ಮನೆ ಕಡ್‌ದೆ ||
ಉಂಬಕೆ ಮಾತ್ರ ಭಾರೀ ಬಿಸಣ
ಪ್ರಾಯಲಿ ಮಾತ್ರ ಹದ್ನಾಲ್ಕ್ ವರ್ಸ
ಯಾರೂ ಇಲ್ಲದ ತಬ್ಬಲಿ ಕೂಸು
ಮಾತ್‌ಲಿ ಮಾತ್ರ ಭಾರೀ ಪೋಸುಕಾ ||
ಅಜ್ಜಿನೆ ಕುದ್ರ್‌ಸಿ ಬುದ್ಧಿನೆ ಹೇಳ್ದು
ಇಲ್ಲದ ಬುದ್ಧಿನ ಎಲ್ಲಿಂದ ತಾದು
ಹಂಞ ಹೇಳಿರೆ ಅಂವ ಮರ್ಟ್‌ಕಂಡ್ ಇರ್ದು
ಹುಚ್ಚತನ ಬಂದದ್ ಕೊಳ್ಳಿಲಿ ಹೋದು ||

ಶ್ರೀಮತಿ ನಿಡ್ಯಮಲೆ ವೇದಾವತಿ ಅನಂತ

ದೆಹಲಿ ಗೌಡ ಸಮಾಜದ ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು, ಮತ್ತು ಸಮುದ್ರ ಸಂಶೋಧನಾ ಯೋಜನೆಗಳ ಮಾರ್ಗದರ್ಶಕರು ಹಾಗೂ ಸಾಗರ ವಿಜ್ಞಾನಿಯಾದ "ಶ್ರೀ ನಿಡ್ಯಮಲೆ ಅಪ್ಪಯ್ಯ ಮಾಧವ"

ದೆಹಲಿ ಕರ್ನಾಟಕ ಸಂಘವು ರಾಷ್ಟ್ರದ ರಾಜಧಾನಿಯಲ್ಲಿರುವ ಪ್ರತಿಷ್ಠಿತ ಸಂಘಗಳಲ್ಲೊಂದು. ಸಂಘಕ್ಕೆ ಈಗ ಸುವರ್ಣ ಮಹೋತ್ಸವದ ಸಂಭ್ರಮ. ಕಳೆದ 50ವರ್ಷಗಳಿಂದ ಸಂಘವು ರಾಜಧಾನಿಯಲ್ಲಿ ಕನ್ನಡ ಪರ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿದ್ದು, ಎಲ್ಲ ಕನ್ನಡಿಗರ ಆಶೋತ್ತರಗಳ ಪ್ರತೀಕವಾಗಿದೆ. ಪ್ರಸ್ತುತ ಸಂಘದ ಅಧ್ಯಕ್ಷರಾಗಿರುವ ಶ್ರೀ ಕೆ. ಆರ್. ನಾಗರಾಜ್ ಅವರು ತಮ್ಮ ದೂರದರ್ಶಿತ್ವ, ಸಂಘಟನಾ ಚತುರತೆ, ನಿರಂತರ ದುಡಿಮೆಯಿಂದ ಸಂಘದ ಪ್ರಗತಿಗೆ ಕಾರಣರಾಗಿದ್ದಾರೆ. ಅದಕ್ಕಾಗಿ ಅವರು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಸಂಘವೂ ಸರಕಾರದ ಪ್ರಶಸ್ತಿ ಮನ್ನಣೆಗೆ ಪಾತ್ರವಾಗಿದೆ. ಈ ಸಂಘದ ಪದಾಧಿಕಾರಿಗಳಿಗಾಗಿ ಪ್ರತಿ ಎರಡು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಈ ಬಾರಿಯ ಚುನಾವಣೆಯು ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದಿದ್ದು, ಅದರಲ್ಲಿ ಶ್ರೀ ಎನ್. ಎ. ಮಾಧವ ಅವರು ಭಾರೀ ಬಹುಮತದಿಂದ ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಅವರು ಕ್ರಿ. ಶ. 2001ನೇ ಇಸವಿಯ ವರೆಗೂ ಸಂಘದ ಬಹುಮುಖೀ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ದುಡಿಯಲಿದ್ದಾರೆ.

ಶ್ರೀ ಎನ್. ಎ. ಮಾಧವ ಅವರು ಮೂಲತಃ ಕೊಡಗು ಜಿಲ್ಲೆಯ ಭಾಗಮಂಡಲದವರು. ಪ್ರಖ್ಯಾತವಾದ ನಿಡ್ಯಮಲೆ ಮನೆತನದವರು. ಇವರ ತಂದೆಯ ಹೆಸರು ಶ್ರೀ ನಿಡ್ಯಮಲೆ ಅಪ್ಪಯ್ಯನವರು. ಸುಳ್ಯದ ಸುದ್ದಿ ಬಿಡುಗಡೆ ಪತ್ರಿಕೆಯ ಸಂಪಾದಕರಾದ ಡಾ. ಯು. ಪಿ. ಶಿವಾನಂದರ ತಂಗಿ, ಸರೋಜಾ ಅವರು ಮಾಧವರ ಪತ್ನಿ. ಮೂರು ಮಕ್ಕಳ ತಂದೆಯಾಗಿರುವ ಅವರು ಇದೀಗ ತಮ್ಮ ಸೌಜನ್ಯಶೀಲ ನಡವಳಿಕೆ, ಹಿತ-ಮಿತವಾದ ಮಾತು, ಸ್ನೇಹಶೀಲತೆ ಮತ್ತು ಕಾರ್ಯತತ್ಪರತೆಯಿಂದಾಗಿ ದೆಹಲಿಕನ್ನಡಿಗರ ನಡುವೆ ಮನೆ ಮಾತಾಗಿದ್ದಾರೆ.

ಶ್ರೀ ಮಾಧವ ಅವರು ಎಳೆತನದಿಂದಲೂ ತುಂಬ ಪ್ರತಿಭಾವಂತ ವಿದ್ಯಾರ್ಥಿಯೆಂದು ಪ್ರಸಿದ್ಧರಾಗಿದ್ದಾರೆ. ಅವರನ್ನು ಬಾಲ್ಯದಿಂದಲೂ ಬಲ್ಲ ಅವರ ಗೆಳೆಯರು ಮತ್ತು ಬಂಧುಗಳು ಮಾಧವ ಅವರ ವಿಶೇಷ ಬುದ್ಧಿವಂತಿಕೆಯನ್ನು ಸ್ಮರಿಸಿಕೊಳ್ಳುತ್ತಾ ಬಾಲ್ಯದಲ್ಲಿ ಅವರನ್ನು 'ಮಂಡೆ ಮಾಧವ' ಎಂದು ಕರೆಯುತ್ತಿದ್ದುದನ್ನು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಭಾಗಮಂಡಲ ಮತ್ತು ಮಡಿಕೇರಿಗಳಲ್ಲಿ ತನ್ನ ಆರಂಭಿಕ ವಿದ್ಯಾಭ್ಯಾಸವನ್ನು ಮುಗಿಸಿದ ಅವರು ಮುಂದೆ ಸುರತ್ಕಲ್ಲಿನ ಕರ್ನಾಟಕ ರೀಜನಲ್ ಇಂಜಿನೀಯರಿಂಗ್ ಕಾಲೇಜಿನಿಂದ,ಸಿವಿಲ್ ಇಂಜಿನೀಯರಿಂಗ್‌ನಲ್ಲಿ ಬಿ. ಇ. ಮತ್ತು ಎಂ. ಟೆಕ್ ಪದವಿಯನ್ನು ಪಡೆದರು. ಮುಂದೆ ಶ್ರೀ ಮಾಧವ ಅವರು ಹಲವಾರು ಶೈಕ್ಷಣಿಕ ಮತ್ತು ವೃತ್ತಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಪ್ರಸಿದ್ಧರಾದರು. ಪಣಂಬೂರಿನ ನವಮಂಗಳೂರು ಬಂದರು ನಿರ್ಮಾಣದಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದ ಅವರು ಅನಂತರ ಮುಂಬೈಯ ಪ್ರಖ್ಯಾತವಾದ ಟಾಟಾ ಕನ್ಸಲ್ಟಿಂಗ್ ಇಂಜಿನೀಯರ್ಸ್‌ನಲ್ಲಿ ಮೆರೈನ್ ಮತ್ತು ಹೈಡ್ರಾಲಿಕ್ ವಿಭಾಗದಲ್ಲಿ ಎರಡು ವರ್ಷಗಳ ಕಾಲ ದುಡಿದರು. ಇದೀಗ ಅವರು ದೆಹಲಿಯ ಪ್ರಖ್ಯಾತವಾದ ಇಂಜಿನೀಯರ್ಸ್ ಇಂಡಿಯಾ ಲಿಮಿಟೆಡ್ (EIL)ನಲ್ಲಿ ಮೆರೈನ್ ಟೆಕ್ನೋಲಿಜಿಸ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ತನ್ನ ವೃತ್ತಿಯಲ್ಲಿ ಅಪಾರ ಹಿಡಿತ ಸಾಧಿಸಿರುವ ಅವರು ಇದೇ ಆಧಾರದ ಮೇಲೆ ಜಗತ್ತಿನ ಪ್ರಮುಖ ನಗರಗಳಿಗೆ ಭೇಟಿ ನೀಡಿದ್ದಾರೆ. ಸಮುದ್ರದಾಳದಲ್ಲಿ ನಡೆಸುವ ಬಗೆ ಬಗೆಯ ಸಂಶೋಧನಾ ಯೋಜನೆಗಳ ಗುಣಮಟ್ಟದ ಬಗ್ಗೆ ಶ್ರೀ ಮಾಧವ ಅವರ ಶಿಫಾರಸು ಪತ್ರ ಬೇಕೇ ಬೇಕು. ಪ್ರಖ್ಯಾತವಾದ ಬಾಂಬೇ ಹೈ ಯೋಜನೆಗೂ ಮಾಧವರು ಮಾರ್ಗದರ್ಶನ ಮಾಡಿದ್ದಾರೆ.

ಹೀಗೆ ನಾಡಿನ ಪ್ರಖ್ಯಾತ ಸಾಗರವಿಜ್ಞಾನಿಯಾಗಿರುವ ಶ್ರೀ ಮಾಧವ ಅವರು ವೈಯಕ್ತಿಕವಾಗಿ ತುಂಬ ಸರಳ ಸಜ್ಜನಿಕೆಯ ಮನುಷ್ಯ. ಸಮಾಜ ಸೇವೆಯನ್ನು ಕರ್ತವ್ಯವೆಂಬಂತೆ ಅವರು ಮಾಡುತ್ತಾರೆ. ಪ್ರಸ್ತುತ ದೆಹಲಿ ಗೌಡ ಸಮಾಜದ ಅಧ್ಯಕ್ಷರಾಗಿರುವ ಅವರು ಸಾಂಸ್ಕೃತಿಕವಾಗಿ, ನಿರ್ಲಕ್ಷಿತವಾಗಿರುವ ಗೌಡ ಸಮುದಾಯಕ್ಕೆ ಒಂದು ಆತ್ಮವಿಶ್ವಾಸವನ್ನು ತುಂಬಿದ್ದಾರೆ. ಎಳೆಯ ತಲೆಮಾರಿನವರನ್ನು ಸದಾ ಹುರಿದುಂಬಿಸುವ ಅವರು ದೆಹಲಿ ಕರ್ನಾಟಕ ಎಜ್ಯುಕೇಷನ್ ಸೊಸೈಟಿಯ ಸದಸ್ಯರಾಗಿಯೂ ಆಯ್ಕೆ ಆಗಿದ್ದಾರೆ. ಕಲೆ, ಸಾಹಿತ್ಯ, ಸಂಸ್ಕೃತಿಯ ವಿಷಯದಲ್ಲಿ ತುಂಬು ಆಸಕ್ತಿ ಇರುವ ಮಾಧವರು ಇದೀಗ ರಾಜಧಾನಿಯ 'ಮುಖ್ಯ ವ್ಯಕ್ತಿತ್ವ' ಗಳಲ್ಲಿ ಒಂದಾಗಿರುವುದು ನಮ್ಮೆಲ್ಲರ ಹೆಮ್ಮೆಗೆ ಕಾರಣವಾಗಿದೆ.

ಲೇಖಕ : ಡಾ. ಪುರುಷೋತ್ತಮ, ಬಿಳಿಮಲೆ
ದೆಹಲಿ

ಸಿಆರ್‌ಪಿಎಫ್‌ಗೆ ಭರ್ತಿ

ಕೇಂದ್ರಿಯ ಕಾಯ್ದಿಟ್ಟ ಮೀಸಲು ರಕ್ಷಣಾ ಪಡೆಗೆ (ಸಿಆರ್‌ಪಿಎಫ್) ಜುಲೈ ರಿಂದ ಭರ್ತಿ ಕಾರ್ಯ ನಡೆಯಲಿದೆ. ಇದರಲ್ಲಿ ಒಟ್ಟು 65 ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಎಡಿಐಜಿಪಿ, ಜಿಸಿ, ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು-64 ಇವರಿಗೆ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಜೂನ್ 10 ಕೊನೆಯ ದಿನವಾಗಿದ್ದು, ಈ ಕುರಿತ ಹೆಚ್ಚಿನ ವಿವರಗಳಿಗೆ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಜಾಹೀರಾತನ್ನು ಗಮನಿಸುವಂತೆ ಇಲಾಖೆ ಕೋರಿದೆ.

ನಾನ್ ಯಾಗೋಳು ಕಾಣ್‌ವ ಹಕ್ಕಿಗಳ ಬಗ್ಗೆ ಒಂದ್ ಸಣ್ಣ ಪ್ರಬಂಧ

ನಾನ್ ಯಾಗೋಳು ಬ್ಯಾರೆ ಬ್ಯಾರೆ ಜಾತಿ ಹಕ್ಕಿಗಳ್ನ ನೋಡ್ವೆ. ಅವುಗಳ ಕೆಲವು ಚಟುವಟಿಕೆಗಳ್ನ ಸನ ನಾನ್ ಗಮನಿಸಿನೆ. ಅವು ಯಾವುದ್‌ತೇಳ್ರೆ ಮನೆಹಕ್ಕಿ (ಗುಬ್ಬಚ್ಚಿ), ಚಿಟ್ಟೆ ಹಕ್ಕಿ, ಕೊಟ್ಟ್‌ಮುಡ್ಡ ಮತ್ತೆ ಗಿಣಿ, ಮರಕೊಡುಪ್ಪುವ ಹಕ್ಕಿ ಇನ್ನ್ ಸುಮಾರ್ ಒಳೊ. ಅವರ ಹೆಸ್ರ್‌ಗ ಎಲ್ಲ ನಂಗೆ ಗೊತ್ಲೆ. ಹಂಗ್ಯಾಗಿ ನಂಗೆ ಅವುಗಳ್ನ ಹೆಸ್‌ರಿಸಿಕೆ ಕಷ್ಟ ಆದೆ. ನನ್ನ ಮನೆ ಅಂಗಳಲಿ ಒಂದು ಪೇರಲಕಾಯಿ ಮರ ಮತ್ತೆ ಕಲರ್ ಕಲರ್ ದಾಸೋಳ ಹೂನ ಗಿಡ, ಮದ್‌ರಂಗಿ ಮರ ಉಟ್ಟು. ಮಳೆಗಾಲಲಿ ಪೇರಲಕಾಯಿ ಹಣ್ಣ್ ಆದೆ. ತುಂಬ ಜಾಸ್ತಿ ಇದ್ದದೆ. ಅಂದರೆ ನಮಿಗೆ ತಿಂಬಕೆ ಆದುಲೆ. ಯಾಕೆತೇಳ್ರೆ ಮಳೆಗಾಲ ಆದಕಾರಣ ಶೀತ ನೆಗ್‌ಡಿಂತೇಳಿ ಯಾರೂ ತಿಂಬಕೆ ಹೋದುಲೆ, ರುಚಿಸನ ಇರ್ದುಲೆ. ಹಂಗ್ಯಾಗಿ ಪೇರಲ ಹಣ್ಣ್ ಹಕ್ಕಿಗಳ್‌ಗೆ ಆಹಾರ ಆದೆ, ಈ ಹಕ್ಕಿಗಳಿಗೆ ದೂರ ದೂರ ಹೋಪ ಕೆಲ್ಸ ಇರ್ದುಲೆ. ಇಂತದೇ ಒಂದ್ ಕಡೆ ಹಣ್ಣ್ ಉಟ್ಟುತ ಗೊತ್ತಾದರೆ ಅವು ಯಾಗೋಳು ಅಲ್ಲಿಗೆ ಬಂದವೆ. ಹಂಗೇ ಈ ಹಕ್ಕಿಗ ಯಾಗೋಳ್ ನಮ್ಮ ಮನೆ ಪೇರಳಮರಕ್ಕೆ ಬರ್ತಿದ್ದೊ. ನಂಗೆ ಕಾಲೇಜ್‌ಗೆ ರಜ ಇದ್ದರೆ ಈ ಹಕ್ಕಿಗಳ ಚಟುವಟಿಕೆಗಳ್ನ ನೋಡ್ವೇ ಕೆಲ್ಸ. ಅವು ಎಂತ ಮಾಡ್ವೆ, ಹೆಂಗೆ ಮರ್ಬ್ವೆ, ಅವರ ಕಲರ್ ಹೆಂಗೆ ಉಟ್ಟುತ ನೋಡ್ತಾ ಇದ್ದನೆ. ಅವು ಹೆಂಗೆ ಹಣ್ಣ್ ತಿಂದವೆ, ಮತ್ತೆ ಮರ್ಬ್‌ಕಂಡ್ ಎರ್ಡ್ ಕಚ್ಚಾಡ್ದು ಹೆಂಗೆ. ಅವು ನಮ್ಮಂತವು ಬಾದು ಗೊತ್ತಾದರೆ ಸಾಕ್ ಕಿವಿಕೊಟ್ಟ್ ಆಲ್ಸಿವೆ, ಮತ್ತೆ ಬ್ಯಾಗ ಅವರ ಕೂಟ್‌ಕಾರರಿಗೆಲ್ಲ ಸುದ್ದಿಕೊಟ್ಟ್ ಬುರ್ರತೇಳಿ ಹಾರಿ ಬುಟ್ಟವೆ. ಚಿಟ್ಟೆ ಹಕ್ಕಿತೇಳ್ವ ಹಕ್ಕಿ ನಿಮಿಗೆಲ್ಲ ಗೊತ್ತಿರ್ಕಿಲೆ ಕಂಡದೆ. ಈ ಹಕ್ಕಿ ನೋಡಿಕೆ ತುಂಬಾ ಲಾಯ್ಕ್ ಇದ್ದದೆ. ಈ ಹಕ್ಕಿನ ಕಲರ್ ಹೆಂಗೇತೇಳ್ರೆ ಕಪ್ಪು ಮತ್ತೆ ಅರ್‌ಶಿಣ. ಇದ್ ಜಾಸ್ತಿ ರಸ ಇರ್ವ ಹೂಗೆ ಬಂದದೆ. ನಮ್ಮನೆಲಿ ಇದ್ ದಾಸೊಳ ಹೂಗೆ ಬಂದದೆ. ಕೊಂಬೆ ಮ್ಯಾಲೆ ಕುದ್ದ್‌ಕಂಡ್ ಹೂನ ರಸ ಹೀರ್ದ್. ಅದ್ ಚಿಕ್ ಚಿಕ್ ತೇಳಿ ಮರ್ಬದೆ. ಅದ್ ಹಿಂಗೆ ಮರ್ದ್‌ಕಾಕ್‌ನ ನಂಗೆ ಗೊತ್ತಾದೆ. ಓ ಚಿಟ್ಟೆಹಕ್ಕಿ ಬಾತ್‌ತೇಳಿ. ನಾನ್ ಎಲ್ಲಿ ಇದ್ದರೂ ಓಡಿ ಬಂದ್ ಬುಟ್ಟನೆ. ಯಾಕೆತೇಳೆ, ನಂಗೆ ಹಕ್ಕಿಗತೇಳ್ರೆ ತುಂಬಾ ಇಷ್ಟ. ಕೆಲವು ಸಲ್ಪ ಎಂತಾದೆತೇಳ್ರೆ ನಾನ್ ಯಾಗೋಳು ನೋಡ್ವ ಹಕ್ಕಿಗ ನಂಗೆ ಕಾಂಬಕೆ ಸಿಕ್ಕುದುಲೆ. ಅದರ ಬದ್ಲಿಗೆ ಬ್ಯಾರೆ ಹಕ್ಕಿನ ಕಂಡನೆ. ಇದ್ ಯಾಕೆತೇಳ್ರೆ ಈ ಹಕ್ಕಿಗಳ ಶರೀರ ಒಂದೇ ಪ್ರತ್ಯೇಕ ವಾತವರಣಕ್ಕೆ ಹೊಂದಿಕಂಡಿದ್ದದೆ ಗಡ. ಈ ವಾತವರಣಲಿ ಕೆಲವ್ ಸಲ ಬದಲಾವಣೆಗ ಆದವೆ. ಈ ಬದಲಾವಣೆಗಳಿಂದ ತಮ್ಮನ್ನ ಕಾಪಾಡಿಕಂಬಕೆ, ಬ್ಯಾರೆ ಕಡೆ ಹೋಗಿಬುಟ್ಟವೆಗಡ. ಅದ್ಕೆ ವಲಸೆ ಹೋದೂತ ಹೇಳ್ವೆ. ನಾನ್ ಯಾಗೋಳ್ ಮತ್ತೆ ಹೊತ್ತ್ ಹೊತ್ತಿಗೆ ನೋಡ್ವ ಹಕ್ಕಿಗತೇಳ್ರೆ ಮನೆಹಕ್ಕಿ. ಅವ್ಕ ನಮ್ಮ ಹೆದರಿಕೇನೇ ಇರ್ದುಲೆ. ಯಾಕೇತೇಳ್ರೆ ಅದ್ ಯಾಗೋಳು ಮನೆ ಹತ್ರನೇ ಇದ್ದವೆ. ಅವು ಮನೆ ಹತ್ರನೇ ಯಾಕೆ ವಾಸ ಮಾಡ್‌ವೆತೇಳ್ರೆ ಅವರ್ನ ಬ್ಯಾರೆ ಹಕ್ಕಿಗಳಿಂದ ರಕ್ಷಿಸಿಕಂಬಕೆ. ಈ ದುಷ್ಟ ಹಕ್ಕಿಗ ಮನ್ಸರ್ ಇರ್ವ ಕಡೆ ಬಾದುಲೆ. ಹೆದ್ರಿಕೆ ಬ್ಯಾರೆ ಹಕ್ಕಿಗಳ್ನ ಮನ್ಸರ್ ತಿಂದವೆ. ಈ ಹಕ್ಕಿನ ತಿಂಬುದುಲೆ ಹಂಗ್ಯಾಗಿ ಅವ್ಕೆ ಹೆದ್ರಿಕೆನೆ ಇಲ್ಲೆ.

ಒಂದ್ ದಿನ ನಾನ್ ಮನೆ ಮುಂದುಗಡೆ ಬೆಂಚಿಮ್ಯಾಲೆ ಕುದ್ದಿದ್ದೆ. ಆಗ ಪೇರಲಮರಕೆ ಮೂರ್ ಗಿಣಿಹಕ್ಕಿಗ ಬಂದೊ. ಅವ್ ಹಣ್ಣ್ ತಿಂಬಕೆ ಸುರ್ ಮಾಡ್ದೊ. ಆ ಹಣ್ಣ್ ಅಡಿ ಕೊಂಬೆಲಿ ಇತ್ತ್. ನಾನ್ ಅವು ಎಂತ ಮಾಡ್ದೊ, ಇವ್ ಹೆಂಗೆ ತಿಂದ್‌ವೇತ್ ಸೊಲ್ಪ ಹತ್ರಂದ ನೋಡ್ನೆ ತೇಳಿ ಮೇಲೆ ಏಳಿಕೆ ನೋಡ್ಯಾಕನ ಆ ಹಕ್ಕಿಗ ಹಾರಿ ಹೋದೊ. ಆಗ ನಂಗೆ ಎಂತ ಗೊತ್ತಾತ್‌ತೇಳ್ರೆ ಹಕ್ಕಿಗ ತುಂಬ ಸೂಕ್ಷ್ಮ ಸ್ವಭಾವದವು ಮತ್ತೆ ಈ ಹಕ್ಕಿಗ ಚಪಲ ಚಿತ್ತದ ಪ್ರಾಣಿಗ ಸಹ ಆಗಿರುದರ್‌ಂದ ಅವ್‌ಗಳ್ನ ಹಿಡಿಯಕೆ ಆದ್ನೆ ಮತ್ತೆ ಹತ್ರಂದ ನೋಡ್ವೇತ ಗ್ಯಾನ ಸನ ಮಾಡ್ದು ಬ್ಯಾಡ.

ನಮ್ಮನೆ ಮುಂದ್‌ಗಡೆ ಒಂದ್ ದೊಡ್ಡ ಮದ್‌ರಂಗಿ ಮರ ಉಟ್ಟು. ಅದರ್ಲಿ ಒಂದು ಕೊಟ್ಟ್‌ಮುಡ್ಡ ಹಕ್ಕಿ ಗೂಡ್‌ಕಟ್ಟಿತ್ತ್. ಅದ್ ಯಾಗೋಳ್ ಆ ಗೂಡಿಗೆ ಬರ್ತಾ ಇತ್ತ್. ಒಂದ್ ದಿನ ನಾನ್ ಅಂಗಳಲಿ ನಿತ್ತ್‌ಕಂಡ್ ಇರ್ಯಾಕನ ಆ ಹಕ್ಕಿ ಅತ್ತ ಇತ್ತ ಹಾರ್ತಾ, ಮರ್ಬ್ತಾ ಇತ್ತ್. ಇದ್ಯಾಕೆ ಹಿಂಗೆ ಮರ್ಬದೆ ಆ ಗೂಡ್‌ಲಿ ಎಂತ ಉಟ್ಟುತ ನೋಡೊಕುತ್ತೇಳಿ ಗ್ಯಾನ ಮಾಡ್ವೆ. ಅದರ ನೋಡೇ ನೋಡೋಕುತೇಳ್ವ ಕುತೂಹಲ ನಂಗೆ. ನನ್ನ ಅಮ್ಮ ಹೇಳ್ವೋ ಅದರ ನೋಡ್‌ಬಡ, ನೋಡ್ರೆ ಆ ಹಕ್ಕಿ ಗೂಡಿಗೆ ಬಾದುಲೆತ. ನಾನ್ ಅವರ ಮಾತ್ ಕೇಳದೆ ಆ ಗೂಡ್‌ನ ತೆಗ್ದ್ ನೋಡ್ವೆ. ಅದರ್ಲಿ ಮೂರ್ ಮೊಟ್ಟೆ ಇತ್ತ್. ಸಣ್ಣ ಮೊಟ್ಟೆಗ, ಅದರ ಮ್ಯಾಲೆ ಸಣ್ಣ ಸಣ್ಣ ಚುಕ್ಕಿಗ ಇದ್ದೊ. ನೋಡಿಕೆ ತುಂಬ ಲಾಯ್ಕ್ ಇದ್ದೊ. ನಾನ್ ಮತ್ತೆ ಆ ಮೊಟ್ಟೆನ ಗೂಡ್‌ಲಿ ಇಟ್ಟ್‌ಬುಟ್ಟೆ. ಅಂದ್‌ನವರೆಗೆ ಗೂಡಿಗೆ ಬರ್ತಾ ಇದ್ದ ಹಕ್ಕಿ ನಾನ್ ನೋಡ್ದ ಮ್ಯಾಲೆ ಬಾತೇಲೆ. ಆಗ ನಂಗೆ ಆತ್ ಛೇ ಎಂತ ಕೆಲ್ಸ ಮಾಡಿಬುಟ್ಟೆ. ಸುಮ್ಮನೆ ಆ ಮೊಟ್ಟೆಗಳ್ನ ತಬ್ಬ್‌ಲಿ ಮಾಡಿಬುಟ್ಟೆಲಾ ತೇಳಿ ಬೇಜಾರ್ ಆತ್. ಅಮ್ಮನ ಮಾತ್ ಕೇಳಕಾಯ್ತ್‌ತೇಳಿ ನಂಗೆ ಆತ್. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲ ಇಲ್ಲೆ ತೇಳಿ ಇನ್ನ್ ಮುಂದೆ ಹಿಂಗ ಮಾಡ್ದುಲೆಂತ ತೀರ್ಮಾನ ಮಾಡ್ವೆ. ಈ ಹಕ್ಕಿಗ ನಮ್ಮ ಪ್ರಕೃತಿಗೆ ಒಂದ್ ರೀತಿ ಸೊಬಗ್‌ನ ತಂದ್ ಕೊಟ್ಟವೆ. ಬರೀ ಪ್ರಕೃತಿ, ಮರ ಗಿಡ ಇದ್ದರೆ ಸಾಲ್ದ್ ಅದರ ಒಟ್ಟಿಗೆ ಈ ಕಲರ್ ಕಲರ್, ಬ್ಯಾರೆ ಬ್ಯಾರೆ ಜಾತಿ ಹಕ್ಕಿಗ ಇದ್ದರೆ ಮಾತ್ರ ಅದರ ಸೌಂದರ್ಯ ಹೆಚ್ಚಾದೆ. ಹಸ್ರ ಪ್ರಕೃತಿನ ಒಟ್ಟಿಗೆ ಈ ಹಕ್ಕಿಗಳ್ದ್ ಚಲನವಲನ, ಅವರ ಮರ್ಬಟ ಇವ್ ಪ್ರಕೃತಿಗೆ ಹೆಚ್ಚಿನ ಸೌಂದರ್ಯ ತಂದ್‌ಕೊಟ್ಟವೆ. ಹಂಗೇ ಪ್ರಕೃತಿನ ಸೌಂದರ್ಯ ಹೆಚ್ಚಕೆ ಕಾರಣ ಆದ ಈ ಸುಂದರ ಹಕ್ಕಿಗಳ್ನ ರಕ್ಷಣೆ ಮಾಡಿಕೆ ನಾವು ಶ್ರಮ ಪಡ್ವೊ.

ಕರಣ್ಯೆಯ್ಯನ ಸಂಧ್ಯ ಕಾಳಪ್ಪ (ವೃಂದ)
ಕುಂಬಳದಾಳು

ಪೊನ್ನಣ್ಣನ ಅಮೇರಿಕಾ ಟೂರ್

ಸಂತೆಗೆ ಹೊರ್ಬ್ದ ಪೊನ್ನಣ ರಸ್ತೆ ಕರೆಲಿ ಬಂದ್ ಬಸ್ಸ್‌ನ ಪಾರಕಾದ್‌ಕಂಡ್ ನಿತ್ತಿತ್ತ್. ಆಗ ಬೈಕ್‌ಲಿ ಬಂದ ಮಾದುನ ಕಂಡ್ ಕೈ ಅಡ್ಡಹಾಕಿ ನಿಲ್ಸಿ, 'ಇಷ್ಟ್ ಟ್ರಿಮ್ಮಾಗಿ ಹೊರ್ಟ್‌ಬುಟ್ಟೊಳಲ ! ದೂರವಾ?' ಅಂತ ಕೇಳ್ತ್. 'ಹೂಂ, ನಾನೀಗ ಅಮೇರಿಕಾಕ್ಕೆ ಹೊರ್ಬದ್ ನೀನೂ ಬರುವಂಗಿದ್ದರೆ ಬಾ, ಹಿಂದೆ ಕುದ್ದ್‌ಕ'ತ ಹೇಳ್ತ್. ಈ ಮಾತ್ ಕೇಳಿ ಪೊನ್ನಣ್ಣ ಹಾವು ಮೆಟ್ಟಿದವರ ಹಂಗೆ ಒಮ್ಮೆಗೆ ಎರಡ್ ಹೆಜ್ಜೆ ಹಿಂದಕೆ ಹಾಕಿ ತಲೆ ಬೊಗ್ಗಿಸಿಕಂಡ್ ನಿತ್ತತ್. ಅವನ್ನೊಮ್ಮೆ ಅಡೀಂದ ಕೊಡೀವರೆಗೆ ನೋಡ್ದ ಮಾದು ಮುಂದಕೆ ಹೋತು.

ಕಾಫಿ ತೋಟಗಳ ನೊಡೂಲಿ ಸುತ್ತಿ ಬಳ್‌ಸಿ ಸಾಗುವ ಆ ರಸ್ತೇಲಿ ತೋಟದ ಕೆಲ್ಸದವರ್ನ ಬುಟ್ರೆ ಬೇರೆ ಜನರ ಓಡಾಟ ಬಾಳ ಕಮ್ಮಿ. ಮುಂದಕೆ ಹೋದ ಮಾದು ಬೈಕ್ ನಿಲ್ಸಿ ಯಾರೊಟ್ಟಿಗೋ ಮಾತಿಗೆ ಸುರುಮಾಡ್ತ್. ಕಣ್ಣಿಗೆ ಕಾಣ್ಣದೆ ಇದ್ದರೂ ಅಂವ ಆಡುವ ಮಾತ್ ಅಸ್ಪಷ್ಟವಾಗಿ ಕೇಳ್ತಿತ್ತ್. ತನ್ನ ಬಗ್ಗೇನೇ ಅಂವ ಮಾತಾಡ್ತಾ ಇರ್ದುತೇಳುದರ್ಲಿ ಪೊನ್ನಣಂಗೆ ಅನುಮಾನನೇ ಇತ್ಲೆ.

ಛೇ ! ನನ್ನ ಮರ್ಯಾದೆ ಮೂರು ಕಾಸಿಗೆ ಹರಾಜಿ ಆಗುವ ಹಾಗೆ ಆತಲೆ ! ಎಲ್ಲವ್ರೂ ನನ್ನ ಬಗ್ಗೆ ಎಷ್ಟ್ ಕೇವಲವಾಗಿ ಮಾತಾಡುವೆ ! ನನ್ನ ಅದೃಷ್ಟ ಲಾಯಿಕಾಗಿದ್ದಿದ್ದರೆ ಇಂದ್ ಇದೇ ಬಾಯಿ ಮೆಲೆ ಬೆರಳಿಟ್ಟ್ ಕಂತ್ ಇವು ನನ್ನನ ನೋಡಕ್ಕಾಗಿತ್ತ್. ಎಲ್ಲ ನನ್ನ ಹಣೆಬರಹ ಎಂತ ಮಾಡಿಕೆ ಆದೆತ ತನ್ನಷ್ಟಕ್ಕೇ ಹೇಳಿಕಂಡತ್.

ಹೊಸದಾಗಿ ಮಾಡುವ ಕೂಪು ರಸ್ತೆ ಕೆಲ್ಸಕ್ಕೆ ಬುಲ್ಡೋಜರ್ ತರ್ಸಿದ್ದೊ. ಪೊನ್ನಣನ ಮನೆಂದ ಆ ರಸ್ತೆಗೆ ಸುಮಾರ್ ಒಂದು ಮೈಲಿ ದೂರ ಇರ್ದು ಅಷ್ಟೇ. ಒಮ್ಮೆ ಅಲ್ಲಿಗೆ ಬಂದ ಪೊನ್ನಣಂಗೆ ಬುಲ್ಡೋಜರ್ ಮಾಡುವ ಕೆಲ್ಸ ನೋಡಿ ಬಾಳಾ ಆಶ್ಚರ್ಯ ಆತ್. ಅಲ್ಲಿಂದಿತ್ತ ಪುರ್ಸೊತ್ತಾಕನ ಎಲ್ಲ ಅಲ್ಲಿಗೆ ಬಾದು ಅವನ ಅಭ್ಯಾಸ ಇವನ ಹಂಗೇ ಅಲ್ಲಿಗೆ ಅಪ್ಪಣು, ತಮ್ಮು, ಬೋಜು ಎಲ್ಲ ಬಾತಿದ್ದೊ. ಬುಲ್ಡೋಜರ್ ಡ್ರೈವರ್ ಮಣಿ ಪರಿಚಯ ಆಗಿ ಸೊಲ್ಪ ದಿನಲೇ ಒಳ್ಳೆ ಸ್ನೇಹಿತ ಆತ್.

ಮಣಿ ಎಷ್ಟ್ ದೇಶಗಳ್ನ ಸುತ್ತಿ ಬಂದವನೋ ಯಾರಿಗೆ ಗೊತ್ತು? ಅವನ ಮಾತ್ ಕೇಳಿಕಂತೂ ಬಾಳ ರಸ. ಎಲ್ಲಕ್ಕಿಂತ ಹೆಚ್ಚಾಗಿ ಅಂವ ಹೇಳುವ ಅವನ ಫಾರಿನ್ ಅನುಭವಗಳಂತೂ ಕಣ್ಣ್‌ದ್‌ರ ಕಾಣುವಂಗಿರ್ತಿತ್ತ್. ಇದರ್ನೆಲ್ಲ ಕೇಳ್‌ಕನ ಇವುಕ್ಕೂ ಮನ್ಸ್‌ಲಿ ಅಲ್ಲಿಗೆ ಹೋಗುವ ಆಸೆ. ಆದರೆ ಬಾಯಿ ಬುಟ್ಟ್ ಕೇಳ್ದು ಹೆಂಗೆ? ಇವರ ಮನ್ಸ್‌ಲಿರ್ದು ಮಣಿಗೆ ಗೊತ್ತಾತ್ತೋ ಏನೋ, ಒಂದಿನ ತಮಾಷಿಗೆ, - ನಿಮಿಗೆ ಫಾರಿನ್‌ಗೆ ಹೋಗುವ ಆಸೆ ಇದ್ದರೆ ಹೇಳಿ, ಅದ್ಕೆ ಬೇಕಾದ ವ್ಯವಸ್ಥೆ ನಾನೇ ಮಾಡ್ನೆತ ಹೇಳ್ತ್, ಇವ್ಕೆ ಅದೇ ಬೇಕಾಗಿತ್ತ್. ಈ ಮಾತ್ ಕೇಳಿ ಇವ್ಕೆ ಖುಷಿಯೇ ಖುಷಿ. ಅಲ್ಲಿಂದ ಮುಂದಕೆ ಮಣಿಗೆ ಶುಕ್ರದೆಸೆ ! ಅಲ್ಲಿಗೆ ಮುಟ್ಟ, ಬರೀ ಸ್ನೇಹಿತನಾಗಿದ್ದ ಅವಂಗೆ ಈಗ ರಾಜಮರ್ಯಾದೆ ! ಅವರಿಗೆ ಬೀಡಿಗೆ ಬದ್ಲಾಗಿ ಸಿಗರೇಟ್ ತಂದ್ ಕೊಟ್ಟೊ. ಮನೆಲಿ ಏನಾದರ್ ಗದ್ದಾಳ ಇದ್ದರೆ ತಪ್ಪದೆ ಬುತ್ತಿ ತಾತಿದ್ದೊ. ಕಾಡ್‌ನ ಹಾದಿಲಿ ನಡ್ಕಕನ ಅವನ ಕಾಲಿಗೆ ಹತ್ತುವ ಜಿಗಣೆಗಳ ಕಿತ್ತ್ ಬಿಸಾಡಿಕೆ ಇವು ತಯಾರಾಗಿರ್ತಿದ್ದೊ. ಅಂವ ಎಲ್ಯಾದರ್ ಕೂರೊಕುತ ಗ್ಯಾನ ಮಾಡ್ದೇ ತಡ ಸೊಪ್ಪು ಮುರ್ದ್ ಹಾಕಿ ಅವನ ಸೀಟ್ ರೆಡಿಯಾಗಿರ್ತಿತ್ತ್. ಪೇಟೆಗೆ ಹೋಕನ ಇವು ಎಂದೂ ಹೋಗದೆ ಇದ್ದ ಬಾರ್, ಹೋಟೆಲ್‌ಗಳಿಗೆಲ್ಲ ಕರ್‍ಕಂಡೋಗಿ ಸಮಾ ಕುಡ್ಸಿ, ತಿನ್ಸಿದೊ.

ಬೆಂಗ್ಳೂರಿಗೆ ಹೋಗಿ ಬಾಕನ ಮಣಿ ಒಳ್ಳೆ ಸುದ್ದಿನೇ ತಂದಿತ್ತ್. ಅವನ ಬಾಸ್ ಬಾರೀ ದೊಡ್ಡ ವ್ಯಾಪಾರಿ. ಹೊರದೇಶಗಳಲ್ಲೇ ಹೆಚ್ಚಾಗಿ ಅವರ ವ್ಯವಹಾರ. ಎಲ್ಲಾ ಕಡೆ ಅವ್ಕೆ ತುಂಬಾ ಬೇಕಾದವು ಒಳೊ. ಅವರೊಟ್ಟಿಗೆ ಮಾತಾಡಿ ಸ್ನೇಹಿತರ್ನ ಅಮೇರಿಕಾಕ್ಕೆ ಕಳ್ಸಿಕೆ ಎಲ್ಲಾ ಏರ್ಪಾಡ್ ಮಾಡಿಕಂಡೇ ಬಂದುಟು.

'ವಿಮಾನ ಟಿಕೇಟ್, ಅದ್, ಇದ್ ತೇಳಿ ಸುರೂಲಿ ಖರ್ಚಿಗೆ ಸುಮಾರ್ ದುಡ್ಡು ಬೇಕಾದೆ. ನೀವು ಹತ್ತತ್ತೆ ಸಾವಿರನಾದ್ರೂ ಕೊಡಕು' ನನ್ನಕ್ಕಲೆ ಒಂದು ಲಕ್ಷ ಉಟ್ಟು. ಹೆಚ್ಚಿಗೆ ಖರ್ಚು ಏನೇ ಇದ್ದರೂ ನಾನ್ ಆದುಡ್ಡುಲಿ ಮಾಡ್ನೆತ ಮಣಿ ಹೇಳ್ತ್.'

ಅವನೆದ್‌ರ ಎಂತ ಮಾತಾಡದಿದ್ದರೂ ಈ ಹತ್ತ್ ಸಾವಿರ ಎಲ್ಲವರ ತಲೆ ಬಿಸಿ ಮಾಡ್ತ್. ಅಲ್ಲಿನ ಒಂದು ಡಾಲರ್ ನಮ್ಮ ನಲವತ್ತೆರಡ್ ರೂಪಾಯಿಗಳಿಗೆ ಸಮ ಗಡ. ಹಂಗಾಗಿ ನಾವು ಖರ್ಚು ಮಾಡುವ ಹಣ ಎಷ್ಟೇ ಇದ್ದರೂ ಅದರ್ನ ಒಂದೇ ತಿಂಗಳ್ಲಿ ಅಲ್ಲಿ ಸಂಪಾದನೆ ಮಾಡಕ್‌ತೇಳಂವ ಧೈರ್ಯನೂ ಇತ್ತ್. ಆದರೆ ಈಗ ಅಷ್ಟ್ ದುಡ್ಡು ತರುವ ಬಗೆ? ಇದರ ಬಗ್ಗೆನೇ ಗ್ಯಾನ ಮಾಡಿಕಂಡ್ ಕುದ್ದಿದ್ದ ಪೊನ್ನಣಂಗೆ ಕಡೆಗೂ ಒಂದು ಉಪಾಯ ಹೊಳ್ತ್. ಅಮೇರಿಕಾಕ್ಕೆ ಹೋದ ಮೇಲೆ ಇಲ್ಲಿ ಗದ್ದೆ ಕೆಲ್ಸ ಮಾಡೊವು ಯಾರ್? ಮತ್ತೆ ಸುಮ್ಮನೆ ಎತ್ತ್‌ಗಳ್ನ ಮಾಡಿಕ್ಯಂಡ್ ಪ್ರಯೋಜನ ಇಲ್ಲೆ. ಇನ್ನ್ ಅಜ್ಜನ ಕಾಲದ ಕೇಪುನ ಕೋವಿ, ಅದೂ ಈಗ ಬೇಕಾಗಿಲ್ಲೆ. ಎತ್ತ್ ಮತ್ತೆ ಕೋವಿ ಮಾರಿ ಸಿಕ್ಕಿದ ಐದೂವರೆ ಸಾವಿರ ರೂಪಾಯಿಂದ ಅವನ ಕಷ್ಟ ತೀರುವಂಗಿತ್ಲೆ. ಈ ಬ್ಯಾಜರಲ್ಲಿ ಅವಂಗೆ ಊಟನೂ ಸರಿಯಾಗಿ ಸೇರ್ತಿತ್ಲೆ. ಗಂಡನ ಅವಸ್ಥೆ ಕಂಡ್ ಲಕ್ಷ್ಮಿಗೆ ಕರ್‌ಳ್ ಚುರುಗುಟ್ಟಿತ್. ಗಂಡನ ಕಷ್ಟ ಸುಖಗಳ್ನ ಸಮವಾಗಿ ಹಂಚಿಕಂಬೊದು ಅವಳ ಕರ್ತವ್ಯನೂ ಹೌದು. ಹಂಗಾಗಿ ತನ್ನ ಕೈಲಾದ ಸಹಾಯ ಮಾಡುವ ಮನ್ಸ್ ಮಾಡ್ತ್.

ಮಕ್ಕಳಿಗೆ ಹೊಸ ಬಟ್ಟೆ ಹೊಲ್ಸೊಕು ಮತ್ತೆ ನಂಗೂ ಒಂದೆರಡ್ ಒಳ್ಳೆ ಸೀರೆ ತಕಣಕುತ ಗ್ಯಾನಮಾಡಿ ಸುಮಾರ್ ಸಮಯಂದ ಕೂಡಿ ಮೊಡ್ಗಿದ್ದ ದುಡ್ಡುನ ಲೆಕ್ಕಮಾಡಿ ನೋಡ್‌ಕನ ಎರ್ಡ್ ಸಾವಿರದ ಮುನ್ನೂರು ರೂಪಾಯಿ ಇತ್ತ್. ಚಿನ್ನದ ತಾಳಿಚೈನ್ ತೆಗ್ದ್ ಕರಿಮಣಿ ಸರಕೆ ತಾಳಿನ ಚುರ್ದ್ ಹಾಕಂಡತ್ತ್. ಜೊತೆಗೆ ಎರ್‌ಡ್ ಚಿನ್ನದ ಬಳೆಗಳೂ ಇತ್ತ್. ಎಲ್ಲ ಸೇರ್ಸಿ ಗಂಡನ ಕೈಗೆ ಕೊಟ್ಟಿತ್.

ತನ್ನ ಹೆಣ್ಣ್ ನಿಜವಾಗಿಯೂ ಭಾಗ್ಯಲಕ್ಷ್ಮಿನಂಗೇ ಕಂಡತ್ ಪೊನ್ನಣ್ಣಂಗೆ. ಆದರೆ ತಾಳಿಚೈನ್ ತಕಣಿಕೆ ಮಾತ್ರ ಅವಂಗೆ ಮನ್ಸ್ ಬಾತ್ಲೆ. 'ದೇವರ ದಯೆಂದ ನಾವು ಗ್ಯಾನ ಮಾಡ್ದಂಗೇ ಎಲ್ಲಾ ಆದರೆ ಇದರ ಅಪ್ಪನಂತದ್ ಮಾಡ್ಸರ್ಕ್, ನೀವೇನೂ ಬ್ಯಾಜರ ಮಾಡಿಕಂಬಡಿ'ತ ಲಕ್ಷ್ಮಿನೇ ಧೈರ್ಯ ಹೇಳ್ತ್. ಅವಳ ಉಪಕಾರಕೆ

ಪ್ರತಿಯಾಗಿ ಎಂತ ಹೇಳೂಕುತ ಅವಂಗೆ ಗೊತ್ತಾತ್ಲೆ. ಆ ಖುಷೀಲಿ ಅವಳ್ನ ಗಟ್ಟಿಯಾಗಿ ತಬ್ಬಿಕಂಡ್ ಮೊಕ ತುಂಬಾ ಮುತ್ತು ಕೊಟ್ಟಿತ್. ಅಂತೂಸಮಾಧಾನ ಆಗದೆ ಅವಳ್ನ ಉಪ್ಪು ಮೂಟೆ ಮಾಡಿಕಂಡ್ ಅಂಗಳಲ್ಲೆಲ್ಲಾ ಕೆಪಣ್ಬಾಡ್ತ್. ಇನ್ನೂ ನಿಮ್ಮ ಹುಟುಗಾಟ ಕಮ್ಮಿ ಆತ್ಲೆತ ಕೊಸರಾಡಿ ಅವನ ಕೈಂದ ಬುಡ್ಸಿಕಂಡ ಲಕ್ಷ್ಮಿ ಜಾರಿಹೋದ ಸೀರೆನ ಸರಿಮಾಡಿಕಂಡ್, 'ಈ ಮಂಗನಾಟ ಎಲ್ಲ ಬುಟ್ಟ್ ಮುಂದೆನ ಕೆಲ್ಸ ನೋಡಿ'ತ ಹೇಳಿ ಒಳಗೆ ಹೋತು:

ಮಣಿನೊಟ್ಟಿಗೆ ಬೆಂಗ್ಳೂರಿಗೆ ಬಂದ ಪೊನ್ನಣ ಮತ್ತೆ ಅವನ ಜೊತೆಯವು ಹೋಟೆಲ್‌ಲಿ ರೂಂ ಮಾಡ್ರೊ. ರಾತ್ರಿ ಊಟ ಮಾಡಿ ಮೆಜೆಸ್ಟಿಕ್‌ಲಿ ಸೊಲ್ಪ ಹೊತ್ತು ಸುತ್ತಾಡಿ ಬಂದ ಮೇಲೆ ಮಣಿ ಫೋನ್ ಎತ್ತಿಕಂಡ್ ಯಾರೊಟ್ಟಿಗೋ ಸುಮಾರ್ ಹೊತ್ತು ಮಾತಾಡ್ತ್. ಮತ್ತೆ 'ನಮ್ಮ ಬಾಸ್ ಈಗ ಅರ್ಜೆಂಟಾಗಿ ಸಿಂಗಾಪುರಕ್ ಹೊರ್ಡ್ನೊಳೊ. ಹಂಗಾಗಿ ನಿಮ್ಮೊಟ್ಟಿಗೆ ಮಾತಾಡಿಕೆ ಪುರ್ಸೊತ್ತು ಇಲ್ಲೆ ಗಡ. ಅವರ ಮಾತ್ ಯಾಗೊಳು ಕಡ್ಡಿ ಮುರ್ದಂಗೇ. ತುಂಬಾ ಬಿಜಿಯಾಗಿರ್ಕನ ಅವರೊಟ್ಟಿಗೆ ಮಾತಾಡ್ನೂ ಸರಿಯಲ್ಲ. ನಾನ್ ಡೆಲ್ಲಿವರೆಗೆ ಅವರೊಟ್ಟಿಗೆ ಹೋಗಿ ನಿಮಿಗೆ ಬೇಕಾದ ಎಲ್ಲಾ ಏರ್ಪಾಡ್‌ಗಳ್ನ ಮಾಡಿಕಂಡ್ ಬನ್ನೆ. ನಾನ್ ಬಾಕೆ ಇನ್ನೂ ಹತ್ತ್ ಹನ್ನೆರಡ್ ದಿನ ಆದು. ಅಷ್ಟೊತ್ತಿಗೆ ನೀವು ನಾನ್ ಹೇಳ್ದಂಗೆ ಎಲ್ಲ ತಯಾರಿ ಮಾಡಿಕಂಡಿರಿ. ಇಂದ್ ರಾತ್ರಿ ಇಲ್ಲೇ ಒಳ್ದ್ ಹೊತಾರೆ ಊರಿಗೆ ಹೋಗಿ'ತ ಹೇಳಿ ಅವರ ಕೈಲಿದ್ದ ದುಡ್ಡು ಕೇಳಿಕಂಡ್ ಹೋತು.

ಬೆಂಗ್ಳೂರುಂದ ಬಂದ್ ಒಂದು ವರ್ಷ ಆಗ್ತಾ ಬಂದುಟು. ಇನ್ನೂ ಮಣಿನ ಪತ್ತೇ ಇಲ್ಲೆ. ಅಂವ ಇಂದ್ ಬಾದು, ನಾಳೆ ಬಾದುತ ಪಾರ್ ಕಾದ್ ಕಾದ್ ಅವರ ಫಾರಿನ್ ಆಸೆ ಎಲ್ಲ ಬತ್ತಿ ಹೋಗ್ತಾ ಉಟ್ಟು, ಲಕ್ಷ್ಮಿನ ಬೋಳು ಕುತ್ತಿಗೆ, ಮಕ್ಕಳ ಹರ್ಕ್ ಬಟ್ಟೆ ಕಾಂಬಕನ ಪೊನ್ನಣಂಗೆ ಹೊಟ್ಟೆ ಬೆಂದದೆ. ಜೊತೆಗೆ ಜನರ ಹಂಗಿಸುವ ಮಾತ್ ಕೇಳಿ ಕೇಳಿ ಸಾಕಾಗಿ ಹೋವುಟು. ಈಗೋಳೂ ಪೊನ್ನಣ ಮತ್ತೆ ಅವನ ಜೊತೆಯವು ಪುರ್ಸೊತ್ತು ಸಿಕ್ಕಕನ ಕೂಪು ರಸ್ತೆಗೆ ಮುಟ್ಟ ಹೋಗಿ ಸುತ್ತಲೂ ಬೆಳ್ದ್ ನಿತ್ತಿರುವ ಮರಗಳ ಕೊಡಿ ನೋಡಿಕಂಡ್ ಕುದ್ದಿದ್ದವೆ. ಹಿಂದೆ ಅಷ್ಟೊಂದು ಖುಷೀಲಿ ಮಾತಾಡಿಕಂಡಿದ್ದ ಅವು ಈಗ ಮಾತ್ ಬರದವರಂಗೆ ಆಗೊಳೊ.

ಚಾಂಗನ ಸಿ. ಪೂವಯ್ಯ
ಮೊಣ್ಣಂಗೇರಿ.

ದಾಖಲಾತಿ

ಕರ್ನಾಟಕ ನಾಟಕ ಅಕಾಡೆಮಿಯು ರಂಗಭೂಮಿಯ ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡುತ್ತಿರುವ ಕಲಾವಿದರ ವಿವರಗಳನ್ನು ದಾಖಲಾತಿ ರೂಪದಲ್ಲಿ ಹೊರ ತರಲು ಉದ್ದೇಶಿಸಿದೆ.

ಕಲಾವಿದರು ತಮ್ಮ ಸಾಧನೆಗಳ ವಿವರ ಹಾಗೂ ಇತ್ತೀಚಿನ ಎರಡು ಭಾವಚಿತ್ರಗಳನ್ನು ಜೂನ್ 10ನೇ ತಾರೀಖಿನ ಒಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು-2, ಇವರಿಗೆ ಕಳಿಸುವಂತೆ ಅಕಾಡೆಮಿಯ ರಿಜಿಸ್ಟ್ರಾರ್ ಕೋರಿದ್ದಾರೆ.

ಮಾನವೀಯತೆ

ಅಂದ್ ರಾತ್ರಿ 10-30 ಆಗಿಬುಟ್ಟುಟು, ಅಮಾಸೆ ಬೇರೆ, ನಮ್ಮ ಅಂಗೈ ಕೂಡ ಕಣ್ಣಿಗೆ ಕಾಣದಷ್ಟ್ ಕತ್ತಲೆ. ಜೋರಾಗಿ ಬೀಸ್ತ ಇದ್ದ ಗಾಳಿಂದಾಗಿ ಮಳೆ ತಾರಮಾರ ಹೊಡಿಯತ್ತಿತ್ತ್. ಆ ಜಡಿ ಮಳೆದ್ ಬಿರುಸ್‌ನ ತಡ್ಕಂಡ್ ಒಂದ್ ಅಜ್ಜಿ ಮುರ್ನಾಲ್ ಬಸ್‌ಸ್ಟ್ಯಾಂಡ್‌ನ ಅಡಿ ನಿತ್ತ್‌ಕಂಡಿತ್ತ್. ಆ ಮಳೆ, ಗಾಳಿದ್ ಶಬ್ದನ ಸೀಳಿಕಂಡ್ ದೂರಲಿ ಮೋಟಾರ್‌ಬೈಕ್ ಶಬ್ದ ಕೇಳಿ ಬಾಕನ ಅಜ್ಜಿ ಕಷ್ಟಲಿ ನಡ್ಕಂಡ್ ಬಂದ್ ರೋಡ್ ಬದೀಲಿ ನಿತ್ತ್‌ಕಂಡ್ ಕೈ ತೋರ್ಸಿತ್. ರಭಸಲಿ ಬರ್ತಾ ಇದ್ದ ಮೋಟಾರ್‌ಬೈಕ್ "ಕ್ರೀಂಚ್"ತ ಬ್ರೇಕ್ ಶಬ್ದ ಮಾಡಿಕಂಡ್ ಅಜ್ಜಿ ನಿತ್ತ ಜಾಗನ ದಾಟಿ ಸ್ವಲ್ಪ ದೂರಲಿ ನಿತ್ತತ್. ಅಜ್ಜಿ ಕಾಲೆಳ್ದ್‌ಕಂಡ್ ಬೈಕ್‌ಸವಾರನ ಹತ್ರ ಹೋಕಾಕನ ಅಂವ ಅವನ ಹೆಲ್ಮೆಟ್‌ದ್ ಗಾಜಿನ ಮೇಲೆ ಎತ್ತಿ "ಎಲ್ಲಿಗೆ?" ತ ಕೆರ್ಳಿತ್. ಮುಖದ ಮೇಲೆ ರಾಚಿ ಹೊಡೆಯುತ್ತಿದ್ದ ಮಳೆಂದಾಗಿ ಅಜ್ಜಿ ಎಂತ ಹೇಳ್ತ್ತ ಅಂವಂಗೆ ಗೊತ್ತಾಗದೆ ಇದ್ದರೂ ಅವಳ ಕೂರ್ಸಿಕಂಡ್ ಹೊರ್ಟತ್. ಆ ಅಜ್ಜಿ ಟೌನ್ ಮಧ್ಯಲಿ ಇದ್ದ ಸರ್ಕಾರೀ ಆಸ್ಪತ್ರೆ ಹತ್ರ ಇಳ್ದ್ ಅಂವಂಗೆ ಕೈ ಜೋಡ್ಸಿ ಮುಗ್ದ್ ಅವನ ಹೆಸ್ರ್ ಮತ್ತೆ ಅಡ್ರೆಸ್ ಕೇಳಿಕಂಡತ್.

ಈ ಘಟನೆ ನಡ್ದ್ ಎರ್ಡ್ ವಾರ ಕಳ್ದ ಮೆಲೆ ಆ ಮೋಟಾರ್ ಬೈಕ್ ಸವಾರನ ಮನೆ ಬಾಗಿಲ್‌ತಟ್ಟಿದ ಶಬ್ದ ಆತ್. ಪೋಸ್ಟ್‌ಲಿ ಅಂವಂಗೆ ಒಂದ್ ದೊಡ್ಡ ಕಲರ್ T. V. ಬಂದಿತ್ತ್. ಅದರ ಜೊತೆಲಿ ಅಂವನ ಹೆಸರಿಗೆ ಒಂದ್ ಪತ್ರ ಕೂಡ ಇತ್ತ್. ಅದರ್ಲಿ ಹಿಂಗೆ ಬರ್ದಿತ್ತ್:

ಅಂದ್ ರಾತ್ರಿ ನಂಗೆ ನೀವ್ ಮಾಡ್ದ ಸಹಾಯನ ನನ್ನ ಕೊನೆ ಉಸಿರಿರೋವರೆಗೂ ನಾನ್ ಮರಿಯಕ್ಕಾದುಲೆ. ಆ ಜಡಿ ಮಳೆ ನನ್ನ ಬಟ್ಟೆನ ಮಾತ್ರ ಅಲ್ಲ, ನನ್ನ ಆತ್ಮವಿಶ್ವಾಸನ ಕೂಡ ನೆನೆಸಿಬುಟ್ಟಿತ್ತ್. ಆಗ ನೀವ್ ದೇವರ ಹಂಗೆ ಬಂದ್ ಸಹಾಯ ಮಾಡಿದ್ರಿ ನಿಮ್ಮಿಂದಾಗಿ ನಾನ್ ಆಸ್ಪತ್ರೆಗೆ ಬೇಗ ತಲುಪಿ ಕೊನೆ ಉಸಿರೆಳೆಯುತ್ತಿದ್ದ ನನ್ನ ಗಂಡನ ಮುಖನ ಅವು ಸಾಯಕೆ ಮುಂದೆ ನೋಡುವಂಗೆ ಆತ್. ನಾನ್ ನನ್ನ ಮಂಙ್ಳನೊಟ್ಟಿಗೆ ಈ ಊರ್ನೇ ಬುಟ್ಟ್ ಮುಂಬಯಿಗೆ ಹೋಗ್ತಾ ಒಳೆ. ನಿಮ್ಮ ನಿಸ್ವಾರ್ಥ ಸೇವೆಗೆ ದೇವ್ರು ನಿಮ್ಮನ ಸದಾ ಸಂತೋಷವಾಗಿ ಇಡ್ಲಿ.

ಎಡಿಕೇರಿ ಸುದರ್ಶನ
ಬೆಂಗಳೂರು

ಹೇ, ನನ್ನ ಸಂಗಾತಿಯೇ
ಕೊಡಗು ಸಂಗಾತಿಯೇ,
ಆತುರವೇ ದುಃಖ
ಸಮಾಧಾನವೇ ಸುಖ
ವೆಂಬುದನ್ನು ಅರಿತು
ಮುನ್ನಡೆಯುತ್ತಿರಿ

ಗೋವಿಂದಮ್ಮನ ಮೋಹಿನಿದೇವಯ್ಯ
ಹೆಬ್ಬಾಳು, ಮೈಸೂರು

ನಮ್ಮ ಅರೆಭಾಷೆ ಬಗ್ಗೆ ಒಂದು ಚಿಂತನೆ - ಸಲಹೆ 1

ಗುಡ್ಡೆಮನೆ ರಮೇಶ್‌ನವು ಮಾರ್ಚ್ 15ರ 6ನೇ ಸಂಚಿಕೇಲಿ ನಮ್ಮ ಅರೆಭಾಷೆ ಬಗ್ಗೆ ಪ್ರೀತಿಪಟ್ಟ್ ನಮ್ಮ ಭಾಷೆಯ ಮಹತ್ವದ ಬಗ್ಗೆ ವಿವರವಾಗಿ ಬರ್ದದ್ ತುಂಬಾ ಸಂತೋಷ. ನಂಗೆ ಕೂಡಾ ನಮ್ಮ ಅರೆಭಾಷೇಲಿ ಮಾತಾಡ್ದುತ್ತೇಳಿರೆ ತುಂಬಾ ಇಷ್ಟ. ಯಾಕೆತ್ತೇಳಿರೆ ಈ ಭಾಷೆನಷ್ಟ್ ಲಾಯಕ್ಕಾಗಿ, ಮೆತ್ತಂಗೆ, ರಾಗ ಎಳ್ದ್ ಸಾಧು ನಮ್ಮ ಭಾವನೆಲಿ ಬಾಯಿ ತುಂಬಾ ಸಂಭೋದನೆ ಮಾಡಿಕಂಡ್ ಮಾತಾಡುವವರ ನೋಡಿರೆ ನಮ್ಮಂತಹ ಒಬ್ಬ ಸಾಧು ಜನ ಬೇರೆಲ್ಲೂ ಇರ್ಲಿಲ್ಲತ್ತೇಳುವ ಅಭಿಪ್ರಾಯ ಬಂದದೆ.

ಅಲ್ಲದೆ ಸಾಮಾನ್ಯವಾಗಿ ನಮ್ಮ ಜನಾಂಗದ ಜನರ ಮುಖ ಲಕ್ಷಣ, ಚಹರೆ, ಮಂದಗತಿ ವರ್ತನೆ. ಸಮಾಧಾನದ ಗುಣ ಇವೆಲ್ಲಾ ಕಂಡದೆ. ಒಟ್ಟಾರೆ ನಮ್ಮ ಅರೆಭಾಷೆ ಗೌಡ್‌ರು A honest and harmless peoplesತೇಳ್ದು ನನ್ನ ಅಭಿಪ್ರಾಯ.

ನಮ್ಮ ಅರೆಭಾಷೆ ಶಾಸ್ತ್ರ, ಸಂಸ್ಕೃತಿ ಇದ್‌ಲ್ಲಾ ನೋಡಿರೆ ನಮ್ಮ ಭಾಷೆಗೆ ತುಂಬಾ ಹಳೇಕಾಲದಿಂದ ಮುಂದವರ್ದ ಸಂಸ್ಕೃತಿ ಇದ್ದ್‌ತ ಗೊತ್ತಾದೆ ಈ ಭಾಷೆನ ನಮ್ಮ ಹಳೆ ತಲೆಮಾರುನವು ಮಕ್ಕಳಿಗೆ ಪ್ರೀತಿಲಿ ಕಲ್ಸಿಕೊಟ್ಟ ಮಾತ್ರ ಭಾಷೆ ಆಗುಟ್ಟು. ನಮ್ಮ ಜನರ. ಭಾಷೆ ಮತ್ತೆ ನಡುವಳಿಕೆ. ವ್ಯವಹಾರಗಳ ಸ್ವಲ್ಪ ವಿಮರ್ಶೆ ಮಾಡಿ ನೋಡಿರೆ ನಮ್ಮ ಗತ್ತ್, ಗಡ್ಸ್ ಇಲ್ಲದ ಶೈಲಿ, ನಯ ಭಯಲಿ ಸಮಾಧಾನಲಿ ಮೆತ್ತಂಗೆ ಮಾತಾಡುವ ಈ ಅಭ್ಯಾಸ ಬಲ ಈಗಿನ ಕಾಲಕ್ಕೆ ಅಷ್ಟ್ ಸರಿ ಹೋದುಲ್ಲೆ.

ನಾನ್ ನೋಡ್ದಂಗೆ ನಮ್ಮ ಅಪ್ಪಂದರ್, ಅಜ್ಜಂದರ್ ಆಗಿನ ಕಾಲಲಿ ಶೇಕಡ ಎಪ್ಪತ್ತೈದ್‌ಜನ ಬಹಳ ಬಡವರಾಗಿದ್ದೋ ಯಾಗ ನೋಡ್ರೂ ಗದ್ದೆ, ತರಕಾರಿ ತೋಟದ ಕೆಲ್ಸ ಇಲ್ಲೆ ಬೇರೆ ಮನೆಯವರ ಕೂಲಿ ಕೆಲ್ಸ ಮಾಡಿಕಂಡಿದ್ದೊ. ಮನೆ ತುಂಬಾ ಮಕ್ಕ ತುಂಬಾ ಬಡತನ, ಹಂಗಾಗಿ ಉಂಬಕೆ ಬಿತ್ತನೆ ಹೊಲಗೆ ತಕೊಂಬೊದು. ವಾರಕೆ ಬೇರೆಯವರ ಭೂಮಿ, ಮಾಡ್ದು ಇತರ ಖರ್ಚಿಗಳಿಗೆ ಕೂಲಿ ಮಾಡ್ದು. ಹಂಗಾಗಿ ನಮ್ಮ ಅಜ್ಜಂದರ್ ಅಪ್ಪಂದರ್ ಯಾಲಕ್ಕಿ, ಕಾಫಿ ತೋಟತ ಮಾಡಿಕೆ ಆತ್‌ಲ್ಲೆ, ವಿದ್ಯಾಭ್ಯಾಸ, ಉದ್ಯೋಗ, ವ್ಯಾಪಾರ ತೇಳುವ ಧೈರ್ಯ ಮಾಡಿಕೆ ಆತ್‌ತ್ತಿಲ್ಲೆ ಯಾಕೆತ್ತೇಳಿರೆ ಆಗಿನ ಕಾಲಲಿ ನಮ್ಮ ಹಿರಿಕರಾದ ಈ ಸಾದು ಜನಂಗ, ದಡ್ಡ ಜನ, ಬೇರೆಯವರ ಶೋಷಣೆಗೆ ಒಳಗಾಗಿ ಗೌರವ ಮರ್ಯಾದಿನ ಪಡಿಕಣೆಕ್ಕಾಗದೆ ಆಯುಷ್ಯನ ಮುಗ್ಸಿಕಂಡ ಜನ.

ಆದ್ರೇ ಈಗ ಹಂಗಿಲ್ಲೆ ಆ ಹಳೇಕಾಲ ಮುಗ್ದ್‌ಹೋತ್ ವಿದ್ಯೆಲಿ, ಉದ್ಯೋಗಲಿ ಈಗಿನ ನಮ್ಮ ಮಕ್ಕ ಎದೆ ತಟ್ಟಿ ಎದ್ದ್ ನಿಂತೊಳೋ ಎಲ್ಲಾ ಕ್ಷೇತ್ರಲಿ ಧೈರ್ಯ ಆಗಿ ಮುನ್ನುಗ್ಗಿ ಹೋಗ್ತಾ ಒಳೊ ಉದ್ಯೋಗಲಿ ಆಸ್ತಿ ಅಂತಸ್ತ್‌ಗಳ್‌ಲಿ ಸರ್ಕಾರಿ ಚಾರ್‌ರಿಲಿ, ರಾಜಕೀಯ ರಂಗಲಿ ಕೂಡಾ ಮುಂದುವರ್ದ್ ತಮ್ಮ ಸ್ಥಾನಮಾನನ ಸಂಪಾದನೆ ಮಾಡಿಕಂಡ್ ಬೇರೆ ಪಂಗಡದವರಂಗೆ ಸರಿಸಮಾನರಾಗಿ ಮುಂದುವರ್ದೊಳೊ. ನಮ್ಮ ಅಪ್ಪಂದರ್ ಆ ಕಾಲಲಿ ಹೋದಲೆಲ್ಲಾ ಅವಹೇಳನ ಮಾಡ್ಸಿಕಂಡ, ಪೆಟ್ಟ್ ತಿಂದ್‌ಕಂಡ್ ಬರ್ತ್‌ದೋ. ನಮ್ಮವು ಮೋಸಕೆ ಶೋಷಣೆಗೆ ಗುರಿ ಆದ ಉದಾಹರಣೆ ಎಷ್ಟೋ ಉಟ್ಟು. "ಬೊಗ್ಗಿದವಂಗೆ ಗುದ್ದ್ ಹೆಚ್ಚ್" ತೇಳ್ದಂಗೆ ನಮ್ಮ ಅಜ್ಜಂದರ್ ಅಂದ್ ಮಾಡ್ಸಿಕಂಬೊ ತಿಂದೊ. ಆದ್ರೆ ಈಗಿನ ನಮ್ಮ ಮಕ್ಕ ಯಾವುದಕ್ಕೂ ಹೆದ್ರುದಲ್ಲೆ. ಕೊಟ್ಟವಂಗೆ ತಿರುಗಿ ಕೊಡುವ ತಾಕತ್ ಬಂದುಟ್ಟು. ಅಂತುಸಾ ನಮ್ಮ ಜಾತಿ, ಭಾಷೆ, ನಮ್ಮ ಅಪ್ಪ, ಅಪ್ಪಂದರ್ ಕಲ್ಸಿಕೊಟ್ಟ, ನಯಭಯ, ಮೊದ್ಲ್‌ಹೋಗಿ ಬೊಗ್ಗಿ ನಮಸ್ಕಾರ ಹೊಡ್ದ್ ಮಾತಾಡ್ದುವ ಗುಣ ಇದೆಲ್ಲಾ ನಮ್ಮ ನಮ್ಮೊಳಗೆ ಈಗೀಗ ಕಮ್ಮಿ ಆಗುಟ್ಟ್.

Face is the Index of the mind ತಾ ಹೇಳ್ದು ಎಲ್ಲದಕ್ಕೂ ಗೊತ್ತಿದ್ದ ವಿಚಾರ, ಆದ್ರೇ ನಾನ್ ಹೇಳ್ದು Our Language Index of the mind. ಅದರಲ್ಲಿಸ ನಮ್ಮ ಅರೆಭಾಷೆ ಗೌಡರುಗಳ ಬಗ್ಗೆ ಹೇಳಕ್ಕುತಾದ್ರೆ ಇವರ Face and Language itself Index of the mind ತಾ ನಾ ಈ ಲೇಖನಲಿ ಹೇಳಿಕೆ ಹೊರ್‌ಟೊಳೆ. ಹಿಂಗೆ ನಾವು ಆಡುವ ಮಾತಿನ ಬಗ್ಗೆ ವಿಸ್ತಾರ ಆಗಿ ವಿವರಿಸಿಕೆ ಹೋದ್ರೆ ಒಂದ್ ದೊಡ್ಡ ಪುಸ್ತಕ್‌ನ ಬರಿಯಕ್ಕಾದೆ. ಅದ್ ಈಗ ಬೇಡ. ನಮ್ಮ ಗೌಡ ಜನಲಿ ಇನ್ನೂ ಒಂದು 50% ಜನ ಬೇರೆಯವರೊಟ್ಟಿಗೆ ವ್ಯವಹಾರ ಜ್ಞಾನಲಿ ಸಾ ಈ ಹಳೇಕಾಲದ ಶೈಲಿನೇ ಪಾಲ್ಸಿಕಂಡ್ ಬರ್ತಾಒಳೊ.

ಒಬ್ಬ ಮನುಷ್ಯನ ಮೊಖ ನೋಡಿ ಅದರ ಲಕ್ಷಣದಿಂದಲೇ ಅಂವ ಎಷ್ಟರಮಟ್ಟಿಗೆ ಬುದ್ಧಿವಂತ ಇರ್ದು. ಅಂವನ್ನೊಟ್ಟಿಗೆ ಹೆಂಗೆ ವ್ಯವಹಾರ ಮಾಡಕ್ಕ್‌ತ್ತಾ ನಮ್ಮ ನಿಮ್ಮಂತವು ಅಂದಾಜ್ ಮಾಡಿಬುಟ್ಟನೆ. ಅದೇ ಮೊಖಿನ ಒಬ್ಬ ಶಾಸ್ತ್ರದಂವ ನೋಡ್ರೆ ಅವನ ಒಳ್ಳೆದ್ ಕೆಟ್ಟದ್, ಆಂವನ ವ್ಯವಹಾರಂಗೆ, ಅಂತಸ್ತ್ ಹಿಂದೆ ಆದರ ಮುಂದೆ ಬಾದು ಎಲ್ಲಾ ಹೇಳಿ ಬುಟ್ಟದೆ. ಹಂಗೆ ಒಬ್ಬ ಮನೋವಿಜ್ಞಾ: ಆ ಮುಖಿನ ನೋಡಿರೆ ಆ ಮನುಷ್ಯನ ಮಿದುಳು ಎಷ್ಟ್ ಸಾರ್ಪ್(ಚೂಟಿ ಆಗ್‌ಟ್ಟು) ಆಂವಂಗೆ ಕುಂದುಕೊರತೆಗ, ನ್ಯೂನತೆಗಳೇನೇನ್ ಉಟ್ಟು, ಅವನ ಆರೋಗ್ಯದ ಬಗ್ಗೆ ಕೂಡಾ ಹೇಳಿಕೊಟ್ಟದೆ. ಹಂಗೆ ನಾವು ಮಾತಾಡಿಕಾಕನ ಆ ಮಾತನ್ ದಾಟಿ. ಶೈಲಿ, ದರ್ಪ, ಸ್ತರ, ಚಮತ್ಕಾರ, ಹಾವ ಭಾವಂಗ ಇವನೆಲ್ಲಾ ಅಂದಾಜ್ ಮಾಡಿಬುಡಕ್ಕ್. ನಾವ್ ಆಡುವ ಭಾಷೆ ಸಾ ನಮ್ಮ ಬುದ್ಧಿವಂತಿಕೆ ತೋರ್ಸಿ ಕೊಡುವ ಕನ್ನಡಿ ಆಗಿದ್ದದೆ. "ಮಾತೆ ಮುತ್ತು, ಮಾತೇ ಮೃತ್ಯು" ಮಾತ್ ಒಂದು ಕಲೆ ಆಗಿರಕ್ಕು. ಆ ಮಾತ್‌ನ ಒಂದ್ ಕೊಲೆ ಆಕೆ ಆಗದ್. ಮಾತಾಡಿರೆ ಮುತ್ತ್ ಅರಳಿದಂಗೆ ಇರೋಕು.......... ಹಿಂಗೆ ಇದರ ಅಲಂಕಾರಗಳ ಹೇಳಿಕೆ ತುಂಬಾ ತುಂಬಾ ಉಟ್ಟು.

ಅಲ್ಲದೆ ನಾವು ಆಡುವ ಮಾತ್‌ನ ಸ್ಟೈಲಿಗ ಒಬ್ಬೊಬ್ಬ ಒಂದೊಂದು ಶೈಲಿಲಿ ಮಾತಾಡಿವೆ. ಹಂಗೆ ಬೇರೆ ಬೇರೆ ಶೈಲಿಲಿ ಮಾತಾಡುವ ಜನಕೆಲ್ಲಾ ಅವರ ಮಾತ್ ಮಟ್ಟಕ್ಕೆ ತಕ್ಕಂಗೆ ಸರ್ಟಿಫಿಕೇಟ್‌ಗ ಕೂಡ ಸಿಕ್ಕದೆ. ಉದಾಹರಣೆಗೆ :

1. ರಾಗ ಎಳ್ದ್, ತಲೆಕೆರ್ಕಂಡ್, ಅರ್ಧಮರ್ದ ಬಹಳ ವಿನಯಲಿ ಮಾತಾಡವವಂಗೆ "ಇಂವ ಒಂದ್ ಸರಿಯಾದ ಬಕ್ರ ನಂಗೆ"

2. ನಾವು ಅವುಕೆ ಉಪದೇಶ ಮಾಡಿಕಂಡ್ ತುಂಬಾ ಸಹಾಯ ಮಾಡುವವರಂಗೆ ಆಶ್ವಾಸನೆ ಕೊಟ್‌ಕಂಡ್ ಮಾತಡ್ರೆ "ಇಂವ ಒಬ್ಬ ಡೊಂಗಿ" (ಪಕ್ಕಾ 420)

ಈತರ ನೂರಾರ್ ತರದ ವರ್ಸಗಳಿಗೆ ನೂರಾರು ತರದ ಸರ್ಟಿಪಿಕೇಟ್‌ಗ ಉಟ್ಟು. ಆದ್ರಂದ ನಾವು ಒಬ್ಬೊರೊಟ್ಟಿಗೆ ಮಾತಾಡಿಕಾಕನ ನಮ್ಮ ಮಾತ್ ಅವುಕೆ ಖುಷಿ ಆಗುವಂಗೆ ಮಾತಾಡಕ್ಕು, ಗಂಭೀರ ಆಗಿ, ಕಂಡಿಷನ್ ಆಗಿ ಒಳ್ಳೆ ಹುರುಪಲಿ ಸಂತೋಷಲಿ ಮಾತಾಡೊಕು. ಅದ್ ಇನ್ನೊಬೊಂಗೆ ಉತ್ತೇಜನ ಕೊಡುವಂಗೆ ಇರೋಕು.

ನಮ್ಮಲ್ಲಿ ಕೆಲವು ಜನ ಹೆಂಗೆ ಇದ್ದವೆತೇಳ್ರೆ, ಉದಾಹರಣೆಗೆ, ಒಂದ್‌ಹತ್ತ್ ಜನ ಒಂದ್ ಗುಂಪ್ ಸೇರಿಕಂಡ ಯಾವುದೋ ಒಂದು ವಿಚಾರನ ನಿಂತ್‌ಕಂಡ್ ಚರ್ಚೆ ಮಾಡುತಾ ಒಳೊತ್ತೇಳಿ ಇಟ್ಕಣಿ. ಆ ಗುಂಪುಲಿ ನಮ್ಮ ಒಬ್ಬ ಜನನ ನೀವು ಬೇಗನೆ ಗುರ್ತ್ ಹಿಡ್ದ್ ಬುಡಕ್ಕ್. ಆ ವ್ಯಕ್ತಿ ದೊಡ್ಡ ಪದವೀಧರನೆ ಆಗಿರ್‍ಲಿ, ಒಬ್ಬ ಸಾಮಾನ್ಯ ಮನುಷ್ಯನೇ ಆಗಿರ್‍ಲಿ, ಇವು ಅವರ ಮದ್ಯಲಿ ಮಾತಾಡಿಕಾಕನ ಇವನ ಹಾವಭಾವ, ಮಾತ್‌ನ ಧಾಟಿ ಎಲ್ಲಾ ಒಂದ್ ತರ ಮೆದುವಾಗಿದ್ದದೆ. ಹಠಲಿ, ಗತ್ತಾಗಿ ನಂದೇ ನಡಿಯೋಕುತ್ತೇಳುವ ವಾದ ಇರ್ದುಲೆ. ಮತ್ತೆ ಕೆಲವು ಬೇರೆ ಭಾಷೆಯವರ ಮಾತ್‌ನೇ ಮಾತಾಡಿಕೆ ಪ್ರಯತ್ನ ಪಟ್ಟ್‌ಕಂಡ್ ಅವರ ವಿಶ್ವಾಸನ ಗಳಿಸಿಕೆ ಪೇಚಾಡಿವೆ ಗೌಡತ್ತೇಳ್‌ಕಣಿಕೆ ನಾಚ್ಕೆ ಅವುಕೆ. ನೀವು ಕೆಲವು ತಮಿಳ್ ಜನರ ಮುಸ್‌ಲ್ಮಾನ್ ಜನ ನೋಡ್ದೇಳಿರಿ. ಅವೆಲ್ಲಾವುಕೆ ನಮ್ಮ ಭಾಷೆ ಬರ್ತ್ ಇದ್ರೂ ಅವ್ರ ಭಾಷಲೇ ನಮ್ಮೊಟ್ಟಿಗೆ ಮಾತಾಡಿವೆ. ಯಾಕೆತ್ತೇಳ್ರೆ ಅವರ ಭಾಷಲೇ ಮಾತಾಡ್ದು ಅವರ ಭಾಷಾಹಕ್ಕ್‌ತ್ತೇಳಿ ತಿಳ್ಕೊಂಡೊಳೊ. ಆದ್ರೆ ನಾವ್ ಮಾತ್ರ ಅವರ ಭಾಷಲಿ ಮಾತಾಡಿಕಂಡ್ ಅವುಕೆ ನಾವು ಬಹಳ ವಿಧೇಯರಾಗಿ ಒಳೊತ್ತೇಳಿ ತೋರ್‍ಸಿಕಂಡವೆ. ನಮ್ಮ ಜಾತಿಲಿ ಎಲ್ಲಾ ಜನ ಹಿಂಗೆ ಮಾತಾಡುದಿಲೆ. ನಮ್ಮಲ್ಲಿ ಕೆಲವು ಜನ ಮಾತ್ರ ಇನ್ನೂ ಕೆಲವು ಜನಕ್ಕೆ ಅವರ ಎದೆ ಒಳಗೆ ಮನಸ್ಥೈರ್ಯ ಬಾತ್‌ಲ್ಲೆ. ಕೀಳರಿಮೆ ಜಾಸ್ತಿ ನೀನ್‌ತ್ತೇಳ್‌ಕನ ನಿನ್ನ ಅಪ್ಪತ್ತೇಳುವ ಎದೆಗಾರಿಕೆ ಬಾತ್‌ಲ್ಲೆ, ಇದಕೆಲ್ಲಾ ನಮ್ಮ ಬಳಗ, ನಮ್ಮ ಪರಿಸರ, ನಮ್ಮ ಹಳೇಕಾಲದ ನಡಪೇ ಮುಖ್ಯ ಕಾರಣ.

ನಾವು ಬೇರೆಯವರೊಟ್ಟಿಗೆ ಯಾವುದಾದರೂ ವ್ಯವಹಾರ ಮಾಡಿಕಾಕನ ನಮ್ಮ ಹಳೇ ಕಾಲದ ಗುಂಗ್‌ನ ಬುಟ್ಟ್ ಒಳ್ಳೆ ಹುರುಪ್‌ಲಿ, ಖುಷೀಲಿ, ಮನ್ಸ್ ಬಿಚ್ಚಿ ಧೈರ್ಯಲಿ, ಸ್ವಲ್ಪ ಗಾಂಭೀರ್ಯಲಿ, ಗಡ್ಸ್‌ಲಿ ಮಾತಾಡಿಕೆ ಶುರು ಮಾಡೊಕು, ನಾವು ಮಾತಾಡುವ ಮಾತ್‌ಲಿ ಒಳ್ಳೆ ಆಕರ್ಷಣೆ ಇರೋಕು. ಎಷ್ಟೋ ಜನ ಕೊಟ್ಟ ಸಾಲನ ವಸೂಲಿ ಮಾಡಿಕೆ ಹೋದ್ರೆ ಕೂಡಾ ಇವುಕೆ ಒಂದ್ ಮಾತ್‌ನ ಜಬರ್‌ದಸ್ತಾಗಿ ದರ್ಪಲಿ ಮಾತಾಡಿಕಾದ್ಲೆ ದೊಡ್ಡದಂಗೆ, ಹ್ಯಾಪೆಮೊರೆ ಮಾಡಿಕಂಡ ತಲೆಕೆರಕಂಡ್ ಮುಲಾಜಿಗೆ ಕೇಳ್ದಂಗೆ ಕೇಳಿವೆ. ಇದರ್‌ದ ಆವುಕೆ ಕೊಟ್ಟದುಡ್ಡ್ ವಾಪಾಸ್ ಸಿಕ್ಕುದಿಲ್ಲೆ. ತಿರುಗಿ ಎರಡ್ ಬೈಗೋಳು ತಿಂದ್‌ಕಂಡ್ ಬಂದವೆ. ನಮ್ಮ ಜನಲಿ ಶೇಕಡ 90ಜನಕ್ಕೆ ಕೆಟ್ಟ ಮಾತ್‌ಲಿ ಒಳ್ಳೆ ಒಂದ್ ಬೈಗೋಳ ಬಗ್ಯೋಕೆ ಖಂಡಿತಾ ಬಾದುಲೆ. ನಮ್ಮಲ್ಲಿ ಒಳ್ಳೆತನ ಬೇಕು. ಮಾತ್‌ಲಿ ವಿನಯ ಬೇಕು. ಆದ್ರೇ ಅದೇ ಅತೀ ಹೆಚ್ಚಿಗೆ ಇರ್ಕಾಗ್‌ದ್. ನಮ್ಮ ಮಾತ್‌ಲಿ ಕಂಡಿಷನ್ ಇರೋಕು. ಹಠ ಇರೋಕು. ಚಾಲಾಕ್‌ತನ ಬೇಕು. ಇನ್ನೂ ಕೂಡಾ ನಮ್ಮ ಜನ ಸೊಡ್ಡರಂಗೆ ಮಾತಾಡಿಕಂಡ್ ಬೇರೆಯವರಿಂದ ಇವು ಬಹಳ ಒಳ್ಳೆ ಸಾಧು ಜನತ್ತೇಳುವ ಸರ್ಟಿಪಿಕೇಟ್ ಬೇಡ. ಇನ್ನೂ ನಮ್ಮ ಜನರ ಶೋಷಣೆ ಆಕೆ ಅವಕಾಶ ಕೊಡ್ದುಬ್ಯಾಡ. ಅವರವರ ಸ್ಥಾನಮಾನಕ್ಕೆ ತಕ್ಕಂಗೆ ನಮ್ಮ ಆಡು ಭಾಷಲಿ ದರ್ಪ, ಹಠ, ಗಾಂಭೀರ್ಯ, ಅಧಿಕಾರ, ಒತ್ತಾಯ, ಇದ್ದೇ ಇರೋಕು. ಇಲ್ದೇ ಇದ್ರೆ ನಾವು ಹಳೇ ಕಾಲದವರಂಗೆ ಮುಂದಕ್ಕೂ ಸೋಲ್ ಅನುಭವಿಸಿಕಂಡೇ ಹಿಂದೆ ಬೀಳಿಕ್ಕಾದೆ. ನಮ್ಮ ಕೆಲವು ಮೂಲಭೂತ ಹಕ್ಕ್‌ಗಳಸ ನಮ್ಮಿಂದ ಪಡ್ದ್‌ಕಂಬಕೆ ಸಾಧ್ಯ ಆದುಲ್ಲೆ.

ಬರೀ ಮಾತ್‌ಲೇ ಎಷ್ಟೊಜನ ನಮ್ಮಲ್ಲಿ ದೊಡ್ಡ ದೊಡ್ಡ ಆಸ್ತಿ ಅಂತಸ್ತ್‌ನ ಮಾಡಿಕಂಡವರ ನೋಡ್ತಾ ಒಳೊ ಬರೀ ಎದೆಗಾರಿಕೆ ಇಲ್ಲದ ಮಾತ್‌ಲಿ ಎಷ್ಟೋ ಜನ ಅವರ ಆಸ್ತಿ ಅಂತಸ್ತನ ಕಳಮಟ್ಟದ ಜನ ನೋಡ್ತಾ ಒಳೊ. ಅಂತದರ್ಲಿ ನಾವ್ ಪೆದ್ದ್‌ತನ ತೋರ್‍ಸಿಕಣದೆ ಕಷ್ಟಕ್ಕೆ ಗುರಿ ಆಗದಂಗೆ ನಮ್ಮ ಮಾತ್‌ನ ದಾಟಿನ ಸ್ವಲ್ಪ ಲಾಯಕ್‌ಲಿ ರೂಡಿಸಿಕಂಡ ನಮ್ಮ ಗೌಡ್‌ರುಗ ಇನ್ನೂ ಹೆಚ್ಚ್ ಸ್ಥಾನಮಾನ ಗಳಿಸಿಕಂಬೋಕುತ್ತೇಳಿ ನಾನ್ ಆಸೆ ಪಟ್ಟನೆ.

ನಮ್ಮ ಅರೆಭಾಷೆಗೆ ಎಲ್ಲಾ ಕಡೆ ಜಯ ಸಿಕ್ಕಲಿ

ನಮ್ಮ ಗೌಡ ಸಂಗಾತಿ ಪತ್ರಿಕೆ ಇದ್‌ಕ್ಕೆ ಬೆಂಗಾವಲಾಗಿ ನಿಲ್ಲಲಿ

ಕೊಡಗು ಸಂಗಾತಿ ನಮ್ಮ ಗೌಡ ಭಾಷೆಗೆ, ಸಂಸ್ಕೃತಿಗೆ ಹಿಡ್ದ ಮಂಕ್‌ನ ಬುಡ್ಸಲಿ

ನಮ್ಮ ಅರೆಭಾಷೆಗೆ, ನಮ್ಮ ಆಡು ಭಾಷೆಗೆ ನಮ್ಮ ಹುಟ್ಟು ಭಾಷೆಗೆ ಜೈ , ಜೈತಾ ಹೇಳ್ನೊ.

ಶಂಕರನ ಬಸಪ್ಪ, ಮೈಸೂರು

ಸೇನಾ ಭರ್ತಿ

ಭಾರತೀಯ ಸೇನಾ ಸೈನಿಕ ಹುದ್ದೆಗಳಿಗೆ ಮುಕ್ತ ಭರ್ತಿ ಕಾರ್ಯ ಜೂನ್ 4 ರಂದು ತಮಿಳುನಾಡಿನ ನೀಲಗಿರಿ ಜಿಲ್ಲೆಯಲ್ಲಿರುವ ವೆಲ್ಲಿಂಗ್ಟನ್‌ನಲ್ಲಿ ನಡೆಯಲಿದೆ. ರಾಜ್ಯದ ಆಸಕ್ತ ಅಭ್ಯರ್ಥಿಗಳೂ ಈ ಭರ್ತಿ ಕಾರ್ಯದಲ್ಲಿ ಭಾಗವಹಿಸ ಬಹುದು. ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ 21 ವರ್ಷ ವಯೋಮಿತಿಯ ಒಳಗಿನ ಅಭ್ಯರ್ಥಿಗಳು ಹಾಜರಾಗ ಬಹುದು. ಎದೆಯ ಸುತ್ತಳತೆ 77/82 ಸೆಂ. ಮೀ., ಎತ್ತರ 165 ಸೆಂ. ಮೀ. ಹಾಗೂ ತೂಕ 50 ಕಿಲೊ ಗ್ರಾಂ ಇರಬೇಕು.

ವೆಲಿಂಗ್ಟನ್‌ನಲ್ಲಿರುವ ಮದ್ರಾಸ್ ರೆಜಿಮೆಂಟಲ್ ಸೆಂಟರ್ ಕ್ರೀಡಾಂಗಣದಲ್ಲಿ ನಡೆಯುವ ಭರ್ತಿ ಕಾರ್ಯಕ್ಕೆ ಹಾಜರಾಗಲು ಇಚ್ಛಿಸುವವರು ಮೂಲ ದಾಖಲೆಗಳ ಜತೆಗೆ ನಾಲ್ಕು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ತಮ್ಮೊಂದಿಗೆ ತರುವಂತೆ ಸೂಚಿಸಲಾಗಿದೆ.

ಅಮರ ಸುಳ್ಯದ ಬಂಡಾಯ 'ಕೊಡಗು ದಂಗೆ' (ಲಾವಣಿ)

ಹೇಳುವೆ ಕೇಳಿರಿ ಅಮರ ಸುಳ್ಯದ । ದಂಗೆಂಯ ಕಥೆಯನ್ನು ।
ಬ್ರಿಟೀಷರ ಎದುರಲಿ ಕ್ರಾಂತಿಯ ಮಾಡುತ । ಮಡಿದಿಹ ವೀರರ ವಿಷಯವನು ।

ಕೊಡಗನು ಆಳುತ ಬ್ರಿಟೀಷರಿದ್ದರು । ಹತ್ತೊಂಭತನೆ ಶತ ಮಾನದಲಿ ।
ಅವರ ದಬ್ಬಾಳಿಕೆ, ನಡೆಯುತಲ್ಲಿತ್ತು । ಅಂದಿನಕಾಲದಿ ನಾಡಿನಲಿ।
ಜಾತೀಯತೆಯಲಿ ಒಗ್ಗಟಿಲ್ಲದ । ಅವಿಧ್ಯಾವಂತರಕಾಲವದು ।
ಬ್ರಿಟೀಷರ ಆಳ್ವಿಕೆ ಕೊನೆಗೊಳಿಸಿದವರ । ಕೀರ್ತಿಯು ನಿಲ್ಲಲಿ ಅಮರ ಇದು ।
ದೇಶದ ಪ್ರಜೆಗಳ ಬಲಹೀನತೆಯನು । ಇಂಗ್ಲಿಷಿನವರು ಕಂಡರದು ।
ಇಂಡಿಯಾ ದೇಶದ ನಾಳಿದ ಬ್ರಿಟೀಷರ । ಕಥೆಯನು ಬರೆದರೆ ಮುಗಿಯದದು ।
ಇಂಗ್ಲೀಷಿನವರ ದಬ್ಬಾಳಿಕೆ ಎಂದರೆ । ದೇಶದ ಜನರನೆ ಖಂಡಿಸುತ
ಮುಗಿಲಿನ ಎತ್ತರ ಏರಿದರವರು । ಪ್ರಜೆಗಳನೆಲ್ಲಾ ದಂಡಿಸುತ ।

ಅಮರ ಸುಳ್ಯವು ಬ್ರಿಟೀಷರ ವಶಕೆ । ಹೋಗಿಹ ಅಂಥಾ ಸಮಯದಲಿ ।
ಕೊಡಗನು ಆಳುತ ಇದ್ದನು । ವೀರ ರಾಜೇಂದ್ರನು ಹರುಷದಲಿ ।
ಕೊಡಗಿನ ಭಾಗವೇ ಆಗಿತ್ತಾಗ । ಈಗಿನ ಸುಳ್ಯವೆ ಅಂದಿನಲಿ ।
ಇಂಥಾ ಸುಳ್ಯವು ಬೆಳೆಯುತ ನಿಂತಿದೆ । ಕೊಡಗಿಗೆ ತಾಗುತ ಅಂಚಿನಲಿ ।
ಬ್ರಿಟೀಷರ ಕೊಡಗಿಗೆ ಬಂದಾ ಕೂಡಲೆ। ಪುತ್ತೂರು, ಸುಳ್ಯ, ಬೆಳ್ಳಾರೆಯನು ।
ಸೇರಿಸಿ ದಕ್ಷಿಣ ಕನ್ನಡ ಜಿಲ್ಲೆಗೆ । ಆಳಲು ಹೊರಟರು ಕೊಡಗನ್ನು ।
ಚಿಕ್ಕವೀರರಾಜನ ಪದವಿಯ ಕಿತ್ತು । ಬ್ರಿಟೀಷರು ಅವರ ದರ್ಭಾರನ್ನು ।
ತೋರಲು ಹೊರಡಲು ಸಹಿಸದೆ ಆದರು । ನಾಡಿನ ಪ್ರಮುಖರು ಅವರನ್ನು ।
ಸುಳ್ಯದ ಊರಿನ ಅಪ್ಪಯ್ಯ ಗೌಡರು । ನೋಡುತ ಬ್ರಿಟೀಷರ ದರ್ಭಾರನ್ನು ।
ಮನದಲ್ಲಿ ಕೆಂಡವ ಕಾರತ ಬಿಸಿ ಹೊಗೆ । ಆವರಿಸಿತ್ತು ಅವರನ್ನು ।
ಮನದಲಿ ದುಃಖವು ಇಮ್ಮಡಿಯಾಗಲು । ನೆಲೆಯಾಗಲು ಮುಂದೆ ಕೊಡಗನ್ನು ।
ಬಯಸುತ ಬಂದರು ಬಂಧುಗಳ ಜತೆ । ಬೀಳ್ಕೊಡುತಲಿ ಆ ಸುಳ್ಯವನ್ನು।
ಸುಳ್ಯವ ತೊರೆದು ಕೊಡಗಲಿ ನೆಲೆಸಿದ । ಆ ಊರಿಗೆ ಹೆಸರು ಗುಡ್ಡೆ ಮನೆ ।
ಸಿರಿತನ ಬಡತನವೆಲ್ಲವ ಕಂಡಿಹಾ ಆ ಊರಿಗೆ ಅವರದು ಹೊಸತುಮನೆ ।

ಹುಟ್ಟಿದ ಊರನು ತೊರೆಯುತ ಬಂದಿಹ । ಅಪಯ್ಯ ಗೌಡರು ಬ್ರಿಟೀಷರನೇ ।
ನೆನಯುತ ಬ್ರಿಟೀಷ ಗರ್ವವ ಮುರಿಯಲು । ಮುಂದಾಗಿ ನಿಂತರು ಅದು ತಾನೆ ।
ಸುಳ್ಯದ ಸೀಮೆಯ ರಾಮಪ್ಪ ಗೌಡರು । ಅಪ್ಪಯ ಗೌಡರ ಬೆಂಬಲಕೆ ।
ಹೋದರು ಹುಲಿಕುಂದ ನಂಜಯ್ಯನವರೂ । ಬ್ರಿಟೀಷರೆದುರು ಹೋರಾಟಕ್ಕೆ ।
ಚಿಕ್ಕವೀರರಾಜನ ರಾಜ ಪದವಿಯ । ಕಿತ್ತಿಹ ಬ್ರಿಟೀಷರು ಕೊಡಗಿನಲಿ ।
ಇಟ್ಟರು ಅವನನು ಮಂಗಳೂರಲಿ । ಕಳ್ಳರ ಹಾಗೆ ಜೈಲಿನಲಿ ।
ಅಪ್ಪಯ್ಯ ಗೌಡರು ಸೈನವ ಕಟ್ಟಲು । ಕೊಡಗು ಮಂಗ್ಳೂರಿನ ಮುಂಖಂಡರನು ।
ತಾನೆ ಸಂದಿಸಿ ಒಂದೆಡೆ ಸೇರಿಸಿ । ನುಡಿದರು ದಂಗೆಯ ತಂತ್ರವನು ।
ಆದರೆ ಒಂದೆಡೆ ಕೆಲವರು ಕೊಡಗಲಿ । ಬ್ರಿಟೀಷರನೆ ಬೆಂಬಲಿಸಿ ।
ನಂಬಿಕೆ ದ್ರೋಹವ ಮಾಡಲು ಹೊರಟರು । ತಮ್ಮಯ ಏಳಿಗೆ ಹಂಬಲಿಸಿ ।
ಅಪ್ಪಯ್ಯ ಗೌಡರು ಎದೆಗುಂದದೆ ತಾನು । ಊರುರುಗಳನ್ನು ಸುತ್ತಾಡಿ ।
ಸೇನೆಯ ಕಟ್ಟುತ ನುಡಿದರು ಕಿವಿಯಲಿ । ಬ್ರಿಟೀಷರ ರುಂಡವ ಚೆಂಡಾಡಿ ।

ದಂಗೆಯು ನಡೆಯಿತು ಮಿಂಚಿನ ವೇಗದಿ । ಕನ್ನಡ ಜಿಲ್ಲೆಯಲಿ ।
ಕಂಗಾಲಾಯಿತು ಬ್ರಿಟೀಷರ ಸೈನವು । ನಾಡವರೆದ್ದಿಹ ದಂಗೆಯಲಿ ।
ಹಾರಿಸಲಾಯಿತು ಬಾವುಟವಾಗ । ಎತ್ತರವೇರುತ ಗುಡ್ಡದಲಿ ।
ಸಂತಸದಿಂದಲಿ ಊರಿನ ಜನ । ಕುಣಿದಾಡಿದರು ಜಯಕಾರದಲಿ ।
ಅಪ್ಪಯ ಗೌಡರ ಮುಂದಾಳತ್ವದಿ । ಬ್ರಿಟೀಷರ ಸೊಕ್ಕನು ಮಣಿಸಿದರು ।
ಬ್ರಿಟೀಷರ ಮೇಲಿನ ಸೇಡಿನ ಕಿಡಿಯನು । ಬಿಸಿಯುಸಿರಿಂದಲೆ ತಣಿಸಿದರು ।
ಇಂಗ್ಲೀಷರೆದುರಲಿ ದಂಗೆಯ ಏಳಲು । ರಾಮ ಗೌಡರು ಜನ ಸೇರಿಸುತ ।
ಪಂಗಡ ಬೇರೆಯ ಮಾಡುತ ಹೋದರು । ಇಂಗ್ಲೀಷರನ್ನು ಎದುರಿಸುತ ।
ರಾಮಗೌಡರ ಸೈನಿಕರನ್ನು । ನೋಡುತ ಬ್ರಿಟೀಷರು ತತ್ತರಿಸಿ ।
ಓಡಲು ಇವರು ಬ್ರಿಟೀಷರನ್ನು । ಹಾಕಿದರಂದು ಕತ್ತರಿಸಿ ।
ಸ್ವತಂತ್ರ್ಯ ಪಡೆಯಲು ರಾಮ ಗೌಡರು । ಅಪ್ಪಯ ಗೌಡರು ಮುಂದಾಗಿ ।
ಕಾಣುತಲಿರುವರು ಕಥೆಯಲಿ ಅವರು । ಆಳತೆಯ ಮೈಲಿನ ಕಲ್ಲಾಗಿ ।

ಅಂದಿನ ದಂಗೆಯ ವಿಷಯವು ಅಮರ । ಸುಳ್ಯದ ದಂಗೆಯಾಗಿ
ಬಿರುದನು ಪಡೆಯುತ ನಿಂತಿದೆಯಿಂದು । ಮನದಲಿ ನೆನೆಯಾಗಿ ।
ಅಮರಸುಳ್ಯದ ದಂಗೆಯಲಂದು । ಬ್ರಿಟೀಷರು ಕೆಲವರು ಓಡ್ಯೋಗಿ ।
ಕಟ್ಟುತಲಿ ಹೊಸ ಸೈನ್ಯವ ಕೊಡಗಲಿ । ನಿಂತರು ಯುದ್ಧಕೆ ಅಣಿಯಾಗಿ ।
ಭಾರತ ದೇಶದ ಪ್ರಜೆತಾನೆಂಬುದ । ಮರೆಯು ಕೊಡಗಲಿ ಕೆಲ ಜನರು ।
ಬ್ರಿಟೀಷರ ಸ್ನೇಹವ ಮಾಡುತ ಚಾಡಿಯ । ಹೇಳುತಲಿದ್ದರು ಅವರೆದುರು ।
ತನ್ನಯತಾಯಿಯ ಮಡಿಲಲಿ ಹೊತ್ತು । ಹೆತ್ತತಾಯಿಗೆ ವಂಚಿಸುತ ।
ಭಾರತ ದೇಸದಿ ಬದುಕುತಲಿರುವ । ನೀಚರ ಕರೆವಿರಿ ಏನೆನ್ನುತ್ತ ?।
ಕೊಡಗಲಿ ದಂಗೆಯ ಕ್ರಾಂತಿಯ ಯೋಧರ । ಯುದ್ಧದ ತಂತ್ರದ ಗುಟ್ಟನ್ನು ।
ತಿಳಿಸುತಲಿದ್ದರು ಕೆಲವರು ಆಳಿಸಲು । ಕ್ರಾಂತಿಯ ವೀರರ ಹುಟ್ಟನ್ನು ।
ಕೊಡಗಲಿ ದಂಗೆಯು ನಡೆಯಿತು ಕ್ರಾಂತಿಯ । ವೀರರ ಎದುರು ಇಂಗ್ಲೀಷರಿಗೆ ।
ಮಡಿದರು ಜನ ಸೆರೆ ಹಿಡಿದರು ಅವರು । ಜಯವಾಯಿತು ಅಂದು ಬ್ರಿಟೀಷರಿಗೆ ।

ತನ್ನ ಸೇನೆಯು ಹಿಮ್ಮೆಟ್ಟುತಲಿದ್ದರು । ಅಪ್ಪಯ ಗೌಡರು ಕೊನೆತನಕ ।
ವೀರಾವೇಶಧಿ ಸೆಣೆಸಿದರವರು । ಕ್ರಾಂತಿಯು ಮುಗಿಯುವ ಆತನಕ ।
ಅಪ್ಪಯ್ಯ ಗೌಡರು ಕದನದ ಬಳಿಕ । ತನ್ನ ಹೆಂಡತಿ ಮಕ್ಕಳ ನೋಡಲಿಕೆ ।
ಹೋದರು ಅವರ ಕೆಚ್ಚೆದೆ ಮನದಲಿ । ಮೂಡಿದ ವಿಷಯ ತಿಳಿಸಲಿಕೆ ।
ಹೆಂಡತಿ ಮಕ್ಕಳ ಕರೆದಿಂತೆಂದರು । ಹೋಗುವೆ ಮರಳಿ ನಾ ಕದನಕ್ಕೆ ।
ಕದನದಿಕಾದುತ ಮಡಿದರೆ ತಾನು । ಸಿಗಲಾರೆನು ನಿಮಗೆ ನೋಡಲಿಕೆ ।
ಕಂಬನಿ ಸುರಿಸುತ ಹೆಂಡತಿ ಮಕ್ಕಳು । ಗೋಳಿಟ್ಟರು ಮಡಿದರೆ ಕದನದಲಿ ।
ಬಾಳಿನ ಹೊರೆಯನು ಹೊರುವವರಾರು । ಕೇಳಿದಲೆಲ್ಲರು ವ್ಯಸನದಲಿ ।
ತಲೆಯನು ಸವರುತ ಹೆಂಡತಿ ಮಕ್ಕಳ । ಎದುರಲಿ ಮುಗುಳ್ನಗೆ ಸೂಸುತ್ತ ।
ಬಾಚಿ ತಬ್ಬಿ ಮುದ್ದಾಡುತ ನುಡಿದರು । ದುಃಖದ ಮುಖಗಳ ನೋಡುತ್ತ ।

ಪ್ರಜೆಗಳ ಸುಖಕೆ ಸ್ವತಂತ್ರ ಪಡೆಯಲು । ಕದನದಿ ಮಡಿದರು ಚಿಂತಿಲ್ಲ ।
ಪರಕೀಯರಾಳ್ವಿಕೆ ಸಹಿಸುತ ತಾನು । ಭಾರತದೇಶದಿ ಬಾಳೊಲ್ಲ ।
ನಾಲ್ಕೆ ದಿವಸದ ಬಾಳುವೆಯಾದರು । ವೀರರ ಮರಣವೆ ನನಗಿರಲಿ ।
ಭೂಮಿತಾಯಿಗೆ ಕೈ ಮುಗಿಯುತ ನುಡಿದರು । ಜಯಅಪಜಯಗಳು ನಿನಗಿರಲಿ ।
ಬ್ರಿಟೀಷರ ಜತೆಯಲಿ ಪ್ರೆಂಚರು ಸೇರುತ । ಬ್ರಿಟ್ರೀಷ್ ಸೇನೆಯ ಹಿರಿದಾಯ್ತು ।
ಅಪ್ಪಯ ಗೌಡರ ರಾಮ ಗೌಡರ । ಕ್ರಾಂತಿಯ ಸೇನೆಯು ಬರಿದಾಯ್ತು ।
ಇಂಗ್ಲೀಷ್ ಸೇನೆಯ ನೋಡುತ ಅಪ್ಪಯ ಗೌಡರ । ಸೇನೆಯು ಹೋರಾಡಿತು ।
ಅಪ್ಪಯ ಗೌಡರ ರಾಮಗೌಡರ । ತೋಳಿನ ಬಣವೆ ಕುಸಿದೋಯ್ತು ।
ಆಗಲೆ ಅಪ್ಪಯ ಗೌಡರ ಸೆರೆ । ಹಿಡಿಯುತ ಕೋಳವ ತೊಡಸಿದರು ।
ರಾಮಗೌಡರ ಕೈಗಳಕಟ್ಟುತ । ಸಂತಸದೊಕುಳಿಯಾಡಿದರು ।
ಇನ್ನೂ ಕೆಲವರು ದಂಗೆಯ ವೀರರ । ಮುಖಂಡರನ್ನು ಬಂಧಿಸುತ ।
ಜೈಲೊಳಗಿಟ್ಟು ಹಿಂಸೆಯಕೊಟ್ಟರು । ಭಾರತದ ಪ್ರಜೆಗಳ ಖಂಡಿಸುತ ।

ಕೆದಂಬಾಡಿಯ ವೀರ ರಾಮಗೌಡರನು । ಸಕಲರ ಎದುರಲಿ ಮಂಗ್ಳೂರಿನಲಿ ।
ಏರಿಸಲಾಯಿತು ಗಲ್ಲಿಗೆ ಆಗ । ಕಂಬನಿಗೆರೆದರು ಜನರೆಲ್ಲಾ ।
ಕೊಡಗಿನ ಜಿಲ್ಲೆಯ ಸಿಂಹವೆ ಆದ । ಅಪ್ಪಯ ಗೌಡರು ಕೊಡಗಿನಲಿ ।
ಏರಿಸಲಾಯಿತು ಗಲ್ಲಿಗೆ ಮಡಿಕೇರಿಯಲಿ । ಇಂದಿಗು ಇರುವ ಕೋಟೆಯಲಿ ।
ಅಂದಿಗೆ ಮುಗಿಯಿತು ಅಮರ ಸುಳ್ಯದ । ದಂಗೆಯು ನಡೆದಕಥೆಯಲಿ ।
ಆದರೆ ಬ್ರಿಟೀಷರ ಓಡಿಸಲಾಗದೆ । ಉಳಿಯಿತು ಜನರಲಿ ದೊಡ್ಡ ವ್ಯಥ್ಯೆಯಲಿ ।
ಕೊಡಗು ಮಂಗ್ಳೂರಲಿ ಮಾನವ ಹುಲಿಗಳು । ಇದ್ದುದು ಕೆಲವೆ ಸಂತತಿಯು ।
ಇಂಥಾ ಸಂತತಿ ಬೆಳೆಯುತ ಬಂದರೆ । ಆಗದೆ ನಮಗೆ ನಿರ್ಗತಿಯು ।
ಮರಳಿ ಬಂದಿತು. ಸ್ವಾತಂತ್ರ್ಯವೆಮಗೆ । ಹತೊಂಭತ್ತುನೂರನಲ್ವತೇಳರಲಿ ।
ಸ್ವತಂತ್ರಗಳಿಸುವ ಬಲಿದಾನವ ಮಾಡಿದಾ ಹುತಾತ್ಮರನ್ನು ನೆನಪಿರಲಿ ।
ಮರಳಿ ದೇಶಕೆ ಸ್ವಾತಂತ್ರ್ಯಗಳಿಸಲು ಮಡಿದವರಾ ಕಥೆ ಬೇರಿಹುದು
ಅಮರ ಸುಳ್ಯದ ದಂಗೆಯ ಕಥೆಯು ಅಮರವಾಗಿ ನಿಂತಿಹುದು.

ರಚನೆ :
ಹೊದ್ದೆಟ್ಟಿ ಭವಾನಿಶಂಕರ್


ಊಟಿಯ ಫಲಪುಷ್ಪ ಪ್ರದರ್ಶನದಲ್ಲಿ ಸಮಗ್ರ ಪಾರಿತೋಷಕ ಮತ್ತು ನಗದು ಬಹುಮಾನ ವಿಜೇತ ಶ್ರೀ ಕೂಡಕಂಡಿ ನವೀನ್ ಸೋಮಣ್ಣ



ದಕ್ಷಿಣ ಭಾರತದಲ್ಲಿಯೇ ಖ್ಯಾತಿವೆತ್ತ ಊಟಿಯ ಬಟಾನಿಕಲ್ ಗಾರ್ಡನ್‌ನಲ್ಲಿ ಮೇ ತಿಂಗಳ 22 ಮತ್ತು 23ರಂದು ನಡೆದ ಭಾರತದ ಪ್ರಸಿದ್ಧ ಫಲಪುಷ್ಪ ಪ್ರದರ್ಶನದಲ್ಲಿ ಮಡಿಕೇರಿ ನಿವಾಸಿಯಾದ ಕೂಡಕಂಡಿ ಸೋಮಣ್ಣ ನವೀನ್‌ಕುಮಾರ್ ಅವರು ಫಲಪುಷ್ಪ ಜೋಡಣೆ ವಿಭಾಗದಲ್ಲಿ ಸಮಗ್ರ ಪಾರಿತೋಷಕ ಮತ್ತು ನಗದು ಬಹುಮಾನವನ್ನು ಗೆದ್ದುಕೊಂಡಿದ್ದಾರೆ.

ಮಡಿಕೇರಿ ಸಮೀಪದ ರಾಕ್‌ವುಡ್ ಅಂತೋರಿಯಂ ತಾಂತ್ರಿಕ ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತ ಅಂತೋರಿಯಂ ವಿಭಾಗದಲ್ಲಿ ಸಂಶೋಧನೆ ಮಾಡುತ್ತಿರುವ ಇವರು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರು ಮೂಲತಃ ಚೇರಂಬಾಣೆಯವರು. ಹಾಲಿ ಮಡಿಕೇರಿಯಲ್ಲಿ ವಾಸವಿರುವ ಕೂಡಕಂಡಿ ಸೋಮಣ್ಣ ಮತ್ತು ಕಾವೇರಮ್ಮ (ಬೋಜಿ) ದಂಪತಿಗಳ ಪುತ್ರರಾಗಿದ್ದಾರೆ.

– ದೀಪಕ್ ಪಟ್ಟಡ



ದಿನಾಂಕ 12-5-1999ರಲ್ಲಿ ಮಡಿಕೇರಿಯಲ್ಲಿ ನಡೆದ ಮಹಿಳಾ ಒಕ್ಕೂಟದ ವಸ್ತು ಪ್ರದರ್ಶನದಲ್ಲಿ ಬೈತಡ್ಕ ಜಾನಕಿ ರಚಿತ ಗೊಂಬೆಯ ಮದು ಮಕ್ಕಳು – ಇಂದು : ಅಂದು



ಕಾಂತೂರು ಗ್ರಾಮದ ಕಲ್ಲುಮುಟ್ಲು ಸೋಮಯ್ಯ ಜಮುನರ ವಿವಾಹದಲ್ಲಿ ಹಳೆ ಸಂಪ್ರದಾಯದ ವೀರಯೋಧರ ಉಡುಪಿನ ಪುನರ್ಬಳಕೆಯ ಪ್ರಯತ್ನದಲ್ಲಿ ಗೌಡ ಮಹನೀಯರು

ಹರಿಸೇವೆ ದಿನಾಂಕ ಮುಂದೂಡಿಕೆ

ಮೇ ತಿಂಗಳ 12-5-1999ರಂದು ನಡೆಯಬೇಕಾಗಿದ್ದ ಕುಂಬಳದಾಳು ಗ್ರಾಮದ ತೆಕ್ಕಡೆ ಕುಟುಂಬಸ್ಥರ ವೆಂಕಟರಮಣ ದೇವರ ಹರಿಸೇವೆಯು ಅನಿವಾರ್ಯವಾಗಿ ಮುಂದೂಡಿದ್ದು ಈಗ 5-6-1999ರಂದು ನಡೆಯಲಿದೆಯಾದರು ಅನಿವಾರ್ಯವಾಗಿ ಪುನಃಹ ಮುಂದೂಡಲಾಗಿದೆಯೆಂದು ತಿಳಿದು ಬಂದಿದೆ. ಭಕ್ತಾದಿಗಳು ಸಹಕರಿಸಬೇಕಾಗಿ ಈ ಮೂಲಕ ದಯವಿಟ್ಟು ವಿನಂತಿಸಲಾಗಿದೆ.

ತೆಕ್ಕಡೆ ಕುಮಾರ್ ಮುತ್ತಾಮುರ್ಡಿ

K. R. N. N. - 240 10-01-96 TCI Kar. 09592

ಕರೆ, ಮೊರೆ, ವಿಷಾದ, ಸಹಕಾರ

ಕೊಡಗು ಸಂಗಾತಿ ಪಾಕ್ಷಿಕವು ದಿನಾಂಕ 1-4-97 ರಿಂದ ಇಲ್ಲಿಯ ತನಕ ಹಲವಾರು ಎಡರು ತೊಡರುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ನಿರಂತರವಾಗಿ ಹೊರಹೊಮ್ಮಿ ಬಂದಿರುವುದು ನಿಮಗದು ತಿಳಿದ ವಿಚಾರವಾಗಿದೆ. ಕೊಡಗು ನಾಡಿನ ಅರೆಭಾಷಿಕ ಜನಾಂಗದ ಏಕೈಕ ಪತ್ರಿಕಾ ಮಾಧ್ಯಮವಾಗಿ ಇದು ಬಂದಿರುತ್ತದೆ. ತನ್ನ ನಾಡಿನ ಮೂಳೆ ಮೂಲೆ ಹಳ್ಳಿಗಳಿಂದ, ಗ್ರಾಮಾಂತರ ಪ್ರತಿಭೆಯನ್ನು ಒಂದೊಂದಾಗಿ ಹೆಕ್ಕುತ ಪರಿಚಯಿಸುವಲ್ಲಿ ಸಫಲವಾಗಿದೆ. ಜನಾಂಗದಲ್ಲಿ ಬರಹಗಾರರನ್ನು ಹುಟ್ಟು ಹಾಕುವ ಏಕೈಕ ವೇದಿಕೆಯಾಗಿದೆ. ಹಿರಿಯರ ವೀರಗಾಥೆಯನ್ನು ಸ್ಮರಿಸುವ ಮತ್ತು ಕಿರಿಯರಿಗೆ ತಿಳಿಯ ಪಡಿಸುವ ಮಾಧ್ಯಮ ಸಹ ಆಗಿದೆ. ಕೊಡಗಿನ ಮಣ್ಣಿನಲ್ಲಿ ಅರೆಭಾಷಿಕರೆಂಬ ವಿಶಿಷ್ಟ ಪಂಗಡವೊಂದಿದೆ ಎನ್ನುವುದನ್ನು ದೇಶದ ಉದ್ದಗಲಕ್ಕೂ ಸಾರಿ, ಸಾರಿ ಪ್ರಚಾರ ಪಡಿಸುತ್ತಿದೆ. ಚಿಕ್ಕ ಪುಟ್ಟ ಬರಹಗಾರರಿಗೆ ತಮ್ಮ ಸಾಹಿತ್ಯದ ಪ್ರತಿಭೆಯನ್ನು ಹೊರಸೂಸಲು ಇದಕ್ಕಿಂತ ಭಿನ್ನ ಮಾಧ್ಯಮ ಇನ್ನೊಂದಿಲ್ಲ ಎಂದರೆ ಅತಿಶಯವೇನಲ್ಲ.

ಆದರೆ ಯಾರೇ ಆದರೂ ಒಂದು ಪತ್ರಿಕೆಯನ್ನು ನಡೆಯಿಸಲು ಜಾಹೀರಾತು, ಶುಭಾಶಯಗಳು, ಪ್ರಕಟಣೆ ಇತ್ಯಾದಿ ಇಲ್ಲದೆ ಪತ್ರಿಕೆ ಹೊರತರುವುದು ಕಠಿಣ ಶ್ರಮವೂ ತ್ರಾಸದಾಯಕವೂ ಆಗಿದೆ. ಅಭಿಮಾನದ ಜನತೆಯನ್ನು ನಂಬಿ ಜನತೆಯ ಏಳ್ಗೆಯನ್ನು ಬಯಸಿ, ಬಡವ ಬಲ್ಲಿದರೆನ್ನದೆ, ಜನತೆಗೆ ಸಾಹಿತ್ಯದಲ್ಲಿ ಪ್ರಜ್ಞೆ ಮೂಡಿಸುತ್ತಾ, ಸಜ್ಜಾಗಿ ನಿರಂತರ ಗೌಡ ಜನಕ್ಕಾಗಿ ಹೋರಾಟ ಮಾಡುತ್ತಾ ಅಭಿವೃದ್ಧಿ ಬಯಸಿ ಹೊರಬಂದ ಪತ್ರಿಕೆ ಇದಾಗಿದೆ.

ಪ್ರಿಯ ಚಂದದಾರರಲ್ಲಿ ಸಾಕಷ್ಟು ಜನ ನವೀಕರಣಗೊಳಿಸದೆ ಇರುತ್ತಾರೆ. ಸಾಕಷ್ಟು ಸರ್ತಿ ಜ್ಞಾಪನಪತ್ರ ಕಳುಹಿಸಿದರು ಸಹ ಉದಾಸೀನ ಮನೋಭಾವನೆ ಸಲ್ಲ. ಕೆಲವು ಜಾಹೀರಾತುದಾರರು ಇನ್ನು ಹಣ ಸಂದಾಯಿಸಿರುವುದಿಲ್ಲ.

ಹಿಂದಿನ ವರ್ಷಗಳಲ್ಲಿ ಸಾಕಷ್ಟು ನಷ್ಟವನ್ನು ಅನುಭವಿಸಿದ್ದರು ಸಹ ಇನ್ನು ಚೇತರಿಸಿಕೊಂಡಿರುವುದಿಲ್ಲ. ನಷ್ಟವನ್ನು ಭರಿಸಲು ಸಾಕಷ್ಟು ತಾಳ್ಮೆಯನ್ನು ಪ್ರದರ್ಶಿಸಿಯೂ ಆಯ್ತು. ಪತ್ರಿಕೆ ಉದ್ಯಮವು ಲಾಭದ ಧಂಧೆ ಅಲ್ಲ. ಪೇಪರ್ ಖರ್ಚು, ಮುದ್ರಣ ಖರ್ಚು, ಸಿಬ್ಬಂದಿಗಳ ಖರ್ಚು, ಯಂತ್ರಗಳ ಮೇಲ್ವಿಚಾರಣೆ, ಸಂದರ್ಶನ ಖರ್ಚು, ಲೇಖನ ಸಾಮಗ್ರಿಗಳು, ಪ್ರಯಾಣ ಭತ್ಯೆ, ದೂರವಾಣಿ, ಅಂಚೆವೆಚ್ಚ, ಹೋಗುವವರು ಬರುವವರು ಇತ್ಯಾದಿ ಇತ್ಯಾದಿಗಳು. ಕಳೆದ ಸಂಚಿಕೆಯಿಂದ "ಆಫ್‌ಸೆಟ್ ಮುದ್ರಣ ಮತ್ತು ಸ್ವಲ್ಪ ಉತ್ತಮ ತರದ ಪೇಪರ್" ಅಳವಡಿಸಿದ್ದೇವೆ. ಹಳೆದರದಲ್ಲಿ ಪತ್ರಿಕೆಯನ್ನು ಕಳುಹಿಸಲು ಸ್ವಲ್ಪ ಹಿಂದೆ ಮುಂದೆ ನೋಡಬೇಕಾದ ಸನ್ನಿವೇಷ ಉಂಟಾಗಿದೆ. ಕಷ್ಟ ಬಂದರೂ ನಷ್ಟ ಆಗಬಾರದು. ನಷ್ಟದ ಮೇಲೆ ನಷ್ಟ ಆಗುವುದು ಪತ್ರಿಕೆ ಮತ್ತು ಜನಾಂಗದ ದೃಷ್ಟಿಯಿಂದ ಶೋಭೆ ಅಲ್ಲ.

ಮಹಾಜನತೆ ಮತ್ತು ಓದುಗರು ಈ ಮೇಲಿನ ವಿಷಯವನ್ನು ಗಂಭೀರವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗಬೇಕೆಂದು ನಮ್ಮ ಕಳಕಳಿಯ ಪ್ರಾರ್ಥನೆಯಾಗಿದೆ.

ನಮ್ಮ ಮನವಿಯನ್ನು ಜನತೆ ಪುರಸ್ಕರಿಸಿ ಸಹಕರಿಸುವಂತೆ ನಮ್ಮ ಅರಿಕೆ ಆಗಿದೆ. ಚಂದದಾರರು ಶೀಘ್ರವಾಗಿ ನವೀಕರಿಸುವುದಲ್ಲದೆ ಜಾಹೀರಾತುಗಳನ್ನು ನೀಡಿ ಪುನಶ್ಚೇತನಗೊಳಿಸುವಂತೆ ಇನ್ನೊಮ್ಮೆ ನಮ್ಮ ಕೋರಿಕೆಯಾಗಿದೆ. "ಜನಾಂಗದ ಹಿತ ಚಿಂತಕರು, ಪ್ರಜ್ಞಾವಂತರು, ಸ್ಥಿತಿವಂತರು, ಬಡವ ಬಲ್ಲಿದರು, ಪತ್ರಿಕಾ ಪ್ರೇಮಿಗಳು, ಜನಾಂಗ ಪ್ರೇಮಿಗಳು, ವ್ಯಾಪಾರಸ್ಥರು, ಮೇಲಾಗಿ ಗೌಡ ಸಮಾಜ, ವಿದ್ಯಾಸಂಸ್ಥೆ, ಗೌಡ ಅಕಾಡೆಮಿ, ಮಹಿಳಾ ಒಕ್ಕೂಟ ಹಾಗೂ ಇತರೆ ಯುವ ಮಂಡಳಿಗಳು ಈ ಕೊಡಗು ಸಂಗಾತಿ ಸಂಸ್ಥೆಯ ಅಹವಾಲನ್ನು ಗಂಭೀರವಾಗಿ ಪರಿಗಣಿಸಿ ಚಿಂತಿಸುವಂತೆ ಮಹಾಜನತೆಯಲ್ಲಿ ಇನ್ನೊಮ್ಮೆ ವಿನಂತಿಸಿಕೊಳ್ಳುತ್ತಿದ್ದೇವೆ.

ಗೌರವ ಸಂಪಾದಕ ಹಾಗೂ ವ್ಯವಸ್ಥಾಪಕ : ಪಟ್ಟಡ ಪ್ರಭಾಕರ

ಸಂಪಾದಕಿ : ಪಟ್ಟಡ ಶೀಲಾಮಣಿ
- ಸಂಗಾತಿ ಬಳಗ

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, Jayalaxmipuram, Mysore - 12. And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, My...re - 24. ✆ : 0821/431792.